prajavani.net prajavani

ಶನಿವಾರ, ನವೆಂಬರ್ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 308 | ಪುಟ 16

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಮೆ ಕಳ್ಳಸಾಗಣೆ

ಜಾರ್ಖಂಡ್‌ನ ಧನಬಾದ್‌ನಲ್ಲಿ ರೈಲೊಂದರ ಬೋಗಿಯಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 78 'ಇಂಡಿಯನ್ ಫ್ಲ್ಯಾಪ್‌ಶೆಲ್' ಆಮೆಗಳನ್ನು ವಶಪಡಿಸಿಕೊಂಡ ಪೊಲೀಸರು, ಅವುಗಳನ್ನು ಅರಣ್ಯ ಅಧಿಕಾರಿಗಳಿಗೆ ಹಸ್ತಾಂತರಿಸಿದರು





ಆಭರಣ ಪ್ರದರ್ಶನ

ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ಆಭರಣ ಪ್ರದರ್ಶನದಲ್ಲಿ ಚಿತ್ರ ನಟಿ ಅಮೃತಾ ಪ್ರೇಮ್ ಅವರು ಆಭರಣವನ್ನು ಪ್ರದರ್ಶಿಸಿದರು

ಸೆನ್ಸೆಕ್ಸ್ 83,216 | ನಿಫ್ಟಿ 25,492 | $/₹ 88.65 | ಚಿನ್ನ (Std. 10g) ₹1,25,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,56,700 (ಬೆಂಗಳೂರು)

'ಬೀದಿನಾಯಿ ಸ್ಥಳಾಂತರಿಸಿ'

ಎನ್‌ಎಚ್‌ಎಐ, ಸ್ಥಳೀಯ ಸಂಸ್ಥೆಗಳಿಗೆ ಹಲವು ನಿರ್ದೇಶನ ನೀಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಬೀದಿನಾಯಿ ಕಡಿತ ಪ್ರಕರಣಗಳು ಏರಿಕೆ ಆಗುತ್ತಿರುವ ಕುರಿತು ತೀವ್ರ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಆಸ್ಪತ್ರೆ, ಶಾಲೆ, ಬಸ್, ರೈಲು ನಿಲ್ದಾಣ, ಕ್ರೀಡಾ ಸಂಕೀರ್ಣಗಳಿಂದ ಅವುಗಳನ್ನು ಕೂಡಲೇ ಆಶ್ರಯ ತಾಣಗಳಿಗೆ ಸ್ಥಳಾಂತರಿಸಬೇಕು ಎಂದು ಶುಕ್ರವಾರ ಆದೇಶ ನೀಡಿದೆ.

ಹೆದ್ದಾರಿ ಹಾಗೂ ಎಕ್ಸ್‌ಪ್ರೆಸ್ ವೇಗಳಲ್ಲಿನ ಬೀಡಾಡಿ ದನಗಳನ್ನು ಆದಷ್ಟು ಬೇಗ ತೆರವುಗೊಳಿಸಲು ಕೂಡ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಗಳಿಗೆ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ವಿಕ್ರಮ ನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರ ವಿಶೇಷ ನ್ಯಾಯಪೀಠವು ಬೀದಿನಾಯಿಗಳ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಕೆಲವು ನಿರ್ದೇಶನಗಳನ್ನು ನೀಡಿದೆ.

'ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆ, ಆಸ್ಪತ್ರೆ, ಕ್ರೀಡಾ ಸಂಸ್ಥೆ, ಬಸ್, ರೈಲು ನಿಲ್ದಾಣಗಳಲ್ಲಿ ಬೀದಿನಾಯಿಗಳ ಕಡಿತದ ಪ್ರಕರಣ ಹೆಚ್ಚುತ್ತಿರುವ ಕಾರಣ ಸಾರ್ವಜನಿಕರ ಸುರಕ್ಷತೆ ಹಾಗೂ ಆರೋಗ್ಯ ದೃಷ್ಟಿಯಿಂದ ಎರಡು ವಾರಗಳ ಒಳಗಾಗಿ ಇಂತಹ ಸಂಸ್ಥೆಗಳನ್ನು ಗುರುತಿಸುವ ಕೆಲಸವನ್ನು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪೂರ್ಣಗೊಳಿಸಬೇಕು' ಎಂದು ಸೂಚಿಸಿದೆ.

'ಬೀದಿನಾಯಿಗಳು ಇಂತಹ ಸಂಸ್ಥೆಗಳ ಆವರಣದೊಳಗೆ ಪ್ರವೇಶಿಸದಂತೆ ತಡೆಯಲು ಎಲ್ಲ ಸಂಸ್ಥೆಗಳು ಬೇಲಿ, ತಡೆಗೋಡೆ, ಪ್ರವೇಶದ್ವಾರಗಳನ್ನು ಅಳವಡಿಸಿಕೊಂಡಿವೆಯೇ ಎಂಬುದನ್ನು ಸಂಸ್ಥೆಯ ಮುಖ್ಯಸ್ಥರು ಎಂಟು ವಾರದೊಳಗೆ ಖಾತರಿಪಡಿಸಿಕೊಳ್ಳಬೇಕು' ಎಂದು ನ್ಯಾಯಾಲಯ ತಿಳಿಸಿದೆ.

7



ಕೋರ್ಟ್ ಹೇಳಿದ್ದು...

- ಸಂಸ್ಥೆಗಳಲ್ಲಿ ಸೂಕ್ತ ಬೇಲಿ, ತಡೆಗೋಡೆ ವ್ಯವಸ್ಥೆ ಮಾಡಬೇಕು
- ನಿಗಾ ವಹಿಸಲು ನೋಡಲ್ ಅಧಿಕಾರಿ ನೇಮಿಸಬೇಕು

ಬೀದಿ ನಾಯಿಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿರುವುದು ಪ್ರಾಣಿಗಳ ಜನನ ನಿಯಂತ್ರಣ ನಿಯಮಕ್ಕೆ ವಿರುದ್ಧವಾದ ಆದೇಶ

ಭಾರತೀಯ ಪ್ರಾಣಿಗಳ ರಕ್ಷಣಾ ಸಂಸ್ಥೆಗಳ ಒಕ್ಕೂಟ

ಬೆಂಗಳೂರು ಪ್ರಕರಣಗಳ ಉಲ್ಲೇಖ

'ಬೀದಿ ನಾಯಿಗಳ ಅಪ್ರಚೋದಿತ ದಾಳಿಗೆ ಭಾರತಕ್ಕೆ ಭೇಟಿ ನೀಡುತ್ತಿರುವ ವಿದೇಶಿ ನಾಗರಿಕರು ತುತ್ತಾಗುತ್ತಿದ್ದಾರೆ' ಎಂದು ನ್ಯಾಯಪೀಠವು ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ.

'ಬೆಳಗಿನ ಹೊತ್ತಿನಲ್ಲಿ ಬೆಂಗಳೂರಿನ ಹಳೆಯ ವಿಮಾನ ನಿಲ್ದಾಣದಲ್ಲಿ ವಾಯುವಿಹಾರ ನಡೆಸುತ್ತಿದ್ದ ವೇಲ್ಸ್ ಮೂಲದ ಉದ್ಯಮಿಯೊಬ್ಬರು ಕೂಡ ಬೀದಿನಾಯಿ ಕಡಿತಕ್ಕೆ ತುತ್ತಾಗಿದ್ದರು' ಎಂದು ಹೇಳಿದ ನ್ಯಾಯಪೀಠ, 'ಇಂತಹ ದಾಳಿಗಳು ಗ್ರಾಮೀಣ ಮತ್ತು ನಗರ, ದುರ್ಬಲ ಹಾಗೂ ಪ್ರಬಲ ನಾಗರಿಕರಿಗೆ ಮಾತ್ರ ಸೀಮಿತವಾಗಿಲ್ಲ. ಇದು ಸಾರ್ವಜನಿಕರಿಗೆ ಸುರಕ್ಷತೆ ಹಾಗೂ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ್ದಾಗಿದೆ. ಜಾಗತಿಕವಾಗಿ ದೇಶದ ವರ್ಚಸ್ಸಿಗೆ ಹಾನಿಯಾಗಲಿದೆ' ಎಂದು ಹೇಳಿದೆ.

ಜ್ಞಾನಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ ಬೀದಿನಾಯಿಗಳು ಕಚ್ಚಿ, ಆಸ್ಪತ್ರೆಗೆ ದಾಖಲಾದ ಪ್ರಕರಣವನ್ನು ಕೂಡ ತೀರ್ಪಿನಲ್ಲಿ ಉಲ್ಲೇಖಿಸಿದೆ.



ನ್ಯಾಯಮೂರ್ತಿ ಮೆಹ್ತಾ ನೇತೃತ್ವದ ನ್ಯಾಯಪೀಠವು 31 ಪುಟಗಳ ವಿಸ್ತೃತ ತೀರ್ಪಿನಲ್ಲಿ ಸಾರ್ವಜನಿಕರ ಸುರಕ್ಷತೆ, ಆರೋಗ್ಯ ಹಾಗೂ ಬೀದಿಗಳ ನಿರ್ವಹಣೆ ಕುರಿತಂತೆ ಹೆಚ್ಚು ಒತ್ತು ಕೊಟ್ಟು ನಿರ್ದೇಶನಗಳನ್ನು ನೀಡಿದೆ.

ಬೀಡಾಡಿ ದನಗಳ ಸ್ಥಳಾಂತರಕ್ಕೂ ಸೂಚನೆ

'ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶದ ವ್ಯಾಪ್ತಿಗೆ ಒಳಪಡುವ ಹೆದ್ದಾರಿ ಹಾಗೂ ಎಕ್ಸ್‌ಪ್ರೆಸ್ ವೇಗಳಲ್ಲಿ ಕಾಣಸಿಗುವ ಬೀಡಾಡಿ ದನಗಳನ್ನು ಕೂಡಲೇ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ಅವುಗಳು ಹೆಚ್ಚಾಗಿ ಕಾಣಸಿಗುವ ಸ್ಥಳಗಳನ್ನು ಗುರುತಿಸುವ ಕೆಲಸವನ್ನು ಸ್ಥಳೀಯ ಸಂಸ್ಥೆ ಅಧಿಕಾರಿಗಳ ಜಂಟಿ ಸಹಭಾಗಿತ್ವದಲ್ಲಿ ಎನ್‌ಎಚ್‌ಎಐ ಮಾಡಬೇಕು' ಎಂದು ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿದೆ.

7



ಆರ್‌ಟಿಒ: ಅಕ್ರಮಗಳ ಕೊಂಪೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರು ಪ್ರಾದೇಶಿಕ ಸಾರಿಗೆ ಕಚೇರಿಗಳ (ಆರ್‌ಟಿಒ) ಮೇಲೆ ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ಶುಕ್ರವಾರ ದಾಳಿ ನಡೆಸಿದ್ದು, ಈ ತಾಣಗಳು ಅಕ್ರಮಗಳ ಕೊಂಪೆಯಾಗಿರುವುದು ಪತ್ತೆಯಾಗಿದೆ.

ಖಾಸಗಿ ವ್ಯಕ್ತಿಯ ಬಳಿ ನೂರಕ್ಕೂ ಹೆಚ್ಚು ನೋಂದಣಿ ಪ್ರಮಾಣ ಪತ್ರ (ಆರ್‌ಸಿ ಕಾರ್ಡ್) ಮತ್ತು ಚಾಲನಾ ಪರವಾನಗಿ (ಡಿಎಲ್) ಕಾರ್ಡ್ ಇರುವುದರ ಜತೆಗೆ ಹತ್ತು ಹಲವು ಅಕ್ರಮಗಳು ನಡೆಯುತ್ತಿರುವುದು ದಾಳಿ ವೇಳೆ ಬಹಿರಂಗಗೊಂಡಿದೆ.

ಆರ್‌ಸಿ ಕಾರ್ಡ್ ಮತ್ತು ಡಿಎಲ್ ವಿತರಣೆಗೆ ಲಂಚ ಕೇಳಲಾಗುತ್ತಿದೆ ಎಂದು ಆರೋಪಿಸಿ ಸಲ್ಲಿಕೆಯಾಗಿದ್ದ ದೂರುಗಳ ಆಧಾರದ ಮೇಲೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ, ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ ಮತ್ತು ಬಿ.ವೀರಪ್ಪ ಅವರು ದಾಳಿ ನಡೆಸಿದ್ದರು.

ಯಶವಂತಪುರ, ರಾಜಾಜಿನಗರ, ಜಯನಗರ, ಯಲಹಂಕ, ಕಸ್ತೂರಿನಗರ ಮತ್ತು ಕೆ.ಆರ್. ಪುರ ಆರ್‌ಟಿಒ ಕಚೇರಿಗಳ ಮೇಲೆ ಮಧ್ಯಾಹ್ನ 1ಕ್ಕೆ ಏಕಕಾಲದಲ್ಲಿ ದಾಳಿ ನಡೆಸಲಾಗಿತ್ತು.

ಎಲ್ಲ ಕಚೇರಿಗಳಲ್ಲೂ ವಿತರಣೆಗೆ ಬಾಕಿಯಿದ್ದ ಸಾವಿರಾರು ಆರ್‌ಸಿ ಕಾರ್ಡ್‌ಗಳು ಮತ್ತು ಡಿಎಲ್‌ಗಳು ಪತ್ತೆಯಾಗಿವೆ. ಈ ಕಾರ್ಡ್‌ಗಳನ್ನು ಏಕೆ ವಿತರಿಸಲಾಗಿಲ್ಲ ಎಂಬುದರ ಬಗ್ಗೆ ಅಧಿಕಾರಿಗಳು ವಿವರಣೆ ನೀಡಿಲ್ಲ. ಈ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಿವರಣೆ ಪಡೆದುಕೊಳ್ಳಿ, ಲೋಪವಾಗಿದ್ದರೆ ಅಪರಾಧ ಪ್ರಕರಣ ದಾಖಲಿಸಿ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು, ಲೋಕಾಯುಕ್ತ ಪೊಲೀಸರಿಗೆ ಸೂಚಿಸಿದ್ದಾರೆ.

11



ಯಶವಂತಪುರ ಆರ್‌ಟಿಒ ಕಚೇರಿ ಅಧಿಕಾರಿ ಮತ್ತು ಸಿಬ್ಬಂದಿಯಿಂದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ವಿವರಣೆ ಪಡೆದುಕೊಂಡರು

ಹುಲಿ ದಾಳಿ: 15 ದಿನದಲ್ಲಿ 3ನೇ ಬಲಿ

ಪ್ರಜಾವಾಣಿ ವಾರ್ತೆ

ಸರಗೂರು (ಮೈಸೂರು ಜಿಲ್ಲೆ): ತಾಲ್ಲೂಕಿನ ಹಳೆಹೆಗ್ಗುಡಿಲು ಗ್ರಾಮದ ತಲೆಬಂಡೆಯಾಳದಲ್ಲಿ ಜಮೀನು ಉಳುತ್ತಿದ್ದ ರೈತನ ಮೇಲೆ ಹುಲಿ ದಾಳಿ ನಡೆಸಿ, ಕೊಂದಿದೆ. ಇದರೊಂದಿಗೆ, ತಾಲ್ಲೂಕಿನಲ್ಲಿ 15 ದಿನದಲ್ಲಿ ಹುಲಿ ದಾಳಿಯಿಂದ ಸತ್ತವರ ಸಂಖ್ಯೆ 3ಕ್ಕೇರಿದೆ. ಕಾಡಂಚಿನ ಗ್ರಾಮಗಳ ನಿವಾಸಿಗಳಲ್ಲಿ ಭೀತಿ ಹೆಚ್ಚಿದೆ.



ದಂಡನಾಯಕ

ಹಳೆಹೆಗ್ಗುಡಿಲು ಗ್ರಾಮದ ದಂಡನಾಯಕ (40) ಮೃತರು. ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರಿದ್ದಾರೆ. ಅವರಲ್ಲಿ ಇಬ್ಬರು ಶಾಲಾ ಶಿಕ್ಷಣ ಪಡೆಯುತ್ತಿದ್ದಾರೆ.

'ಮನೆಯಿಂದ 2 ಕಿ.ಮೀ. ದೂರದಲ್ಲಿ ನುಗು ಹಾಗೂ ಮೊಳೆಯೂರು ಅರಣ್ಯ ಪ್ರದೇಶದ ನಡುವೆ ಜಮೀನಿದ್ದು, ಶುಕ್ರವಾರ ಬೆಳಿಗ್ಗೆ ಉಳುಮೆ ಮಾಡುತ್ತಿದ್ದರು. ಆಗ ಅವರ ಮೇಲೆ ದಾಳಿ ನಡೆಸಿ, ದೇಹದ ಮೇಲೆಯೇ ನಿಂತಿತ್ತು' ಎಂದು ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಶಂಕರ ತಿಳಿಸಿದರು. 'ಹುಲಿ ನನ್ನತ್ತ ನೋಡುತ್ತಿದ್ದಂತೆಯೇ ನಾನು ಓಡಿ ಹೋಗಿ ತಪ್ಪಿಸಿಕೊಂಡೆ. ಕೆಲ ಸಮಯದ ಬಳಿಕ ಗ್ರಾಮಸ್ಥರೊಂದಿಗೆ ಅಲ್ಲಿಗೆ ಹೋಗಿ ನೋಡಿದಾಗ, ಹುಲಿಯು ಮೃತದೇಹವನ್ನು ಆನೆ ಕಂದಕಕ್ಕೆ ಎಳೆದೊಯ್ದಿತ್ತು' ಎಂದರು.



ಅಧಿಕಾರಿ ಮೇಲೆ ಹಲ್ಲೆ: ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಮೊಳೆಯೂರು ಆರ್‌ಎಫ್‌ಒ ಅಮೃತಾ ಹಾಗೂ ಸಿಬ್ಬಂದಿ ಮೇಲೆ ಮೃತರ ಕುಟುಂಬದ ಮಹಿಳೆಯರು ಹಲ್ಲೆ ನಡೆಸಿದ್ದಾರೆ.

10

ಸಫಾರಿ, ಚಾರಣ ಬಂದ್

ಮೈಸೂರು: 'ನಾಗರಹೊಳೆ, ಬಂಡೀಪುರದಲ್ಲಿ ಸಫಾರಿ ಹಾಗೂ ಮಾನವ-ವನ್ಯಜೀವಿ ಸಂಘರ್ಷವಿರುವ ಕಡೆ ಚಾರಣವನ್ನು ಕೂಡಲೇ ನಿಲ್ಲಿಸಿ, ಹುಲಿ ಸೆರೆ ಕಾರ್ಯಾಚರಣೆಗೆ ಸಿಬ್ಬಂದಿ ನಿಯೋಜಿಸಬೇಕು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದಾರೆ.



ಈಶ್ವರ ಖಂಡ್ರೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಲಿಖಿತ ಸೂಚನೆ ನೀಡಿರುವ ಅವರು, 'ಹಳೆಹೆಗ್ಗುಡಿಲು ಬಳಿ ವ್ಯಕ್ತಿ ಒಬ್ಬರು ಹುಲಿ ದಾಳಿಯಿಂದ ಮೃತಪಟ್ಟಿರುವುದು ತೀವ್ರ ನೋವುಂಟು ಮಾಡಿದೆ' ಎಂದಿದ್ದಾರೆ.

10

ಶ್ರೀ ಗುರುರಾಘವೇಂದ್ರ ಬ್ಯಾಂಕ್: ದೋಷಾರೋಪ ನಿಗದಿಗೆ ನಿರ್ದೇಶನ

ನವದೆಹಲಿ: ಬೆಂಗಳೂರಿನ 'ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ' ಮತ್ತು 'ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ- ಆಪರೇಟಿವ್ ಲಿಮಿಟೆಡ್' ನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಠೇವಣಿದಾರರಿಗೆ ₹1,544 ಕೋಟಿ ವಂಚಿಸಿದ ಪ್ರಕರಣದ ಆರೋಪಿಗಳ ವಿರುದ್ಧ ಆರು ವಾರಗಳಲ್ಲಿ ದೋಷಾರೋಪ ನಿಗದಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ಜಾಮೀನು ಅರ್ಜಿ ವಜಾಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಬ್ಯಾಂಕ್ ಅಧ್ಯಕ್ಷ ಕೆ.ರಾಮಕೃಷ್ಣ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿತು.

ವಿವರ 6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕಬ್ಬಿಗೆ ₹3,300 ದರ, ₹50 ಪ್ರೋತ್ಸಾಹಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಕ್ಕರೆ ಕಾರ್ಖಾನೆ ಮಾಲೀಕರು, ರೈತ ಮುಖಂಡರ ಜತೆ ನಡೆಸಿದ ಸುದೀರ್ಘ ಮಾತುಕತೆ ಬಳಿಕ ರಾಜ್ಯ ಸರ್ಕಾರ, ಪ್ರತಿ ಟನ್ ಕಬ್ಬಿಗೆ ₹3,300 ದರ ನಿಗದಿ ಮಾಡಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಶುಕ್ರವಾರ ಸತತ ಏಳು ಗಂಟೆ ನಡೆದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

6

ಕೇಂದ್ರಕ್ಕೆ ನಿಯೋಗ: ಸಿದ್ದರಾಮಯ್ಯ

'ಕೇಂದ್ರದಿಂದ ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ರೈತರಿಗೆ ಅನ್ಯಾಯವಾಗಿದೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಮಾಲೀಕರು, ರೈತರನ್ನು ಒಳಗೊಂಡು ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೇಂದ್ರದಿಂದ ಆಗುತ್ತಿರುವ ತೊಂದರೆ ಬಗ್ಗೆ ಚರ್ಚಿಸಲು ಕೇಂದ್ರಕ್ಕೆ ನಿಯೋಗ ಹೋಗಲು ಎಲ್ಲರೂ ಒಪ್ಪಿಕೊಂಡಿದ್ದಾರೆ. ಸಕ್ಕರೆಯ ಎಂಎಸ್‌ಪಿ ಹೆಚ್ಚಳ, ಎಥೆನಾಲ್ ಹಂಚಿಕೆ ಹೆಚ್ಚಳ, ಸಕ್ಕರೆ ರಫ್ತು ಮಿತಿಯನ್ನು ಹೆಚ್ಚಿಸುವುದು ಸೇರಿದಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು' ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಈಶಾನ್ಯ ರಾಜ್ಯಗಳ ಸಮ್ಮಿಲನೋತ್ಸವ ನಾಳೆ

ಬೆಂಗಳೂರು: ಈಶಾನ್ಯ ರಾಜ್ಯಗಳ ಸಂಸ್ಕೃತಿಯನ್ನು ಸಾರುವ ಸಮ್ಮಿಲನೋತ್ಸವ ನ.9ರಂದು ಬೆಳಿಗ್ಗೆ 11ರಿಂದ ಶಾಂತಿನಗರದ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಸಮನ್ವಯಕಾರ ಅರುಣ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಈಶಾನ್ಯ ಭಾರತದ ಎಂಟು ರಾಜ್ಯಗಳ ಸಂಸ್ಕೃತಿಯನ್ನು ಪ್ರದರ್ಶಿಸುವ ವೇದಿಕೆ ಸಮ್ಮಿಲನೋತ್ಸವ ಆಗಿದೆ. ಸಾಂಪ್ರದಾಯಿಕ ನೃತ್ಯ, ಗುಂಪು ಪ್ರದರ್ಶನ, ವೈವಿಧ್ಯಮಯ ಪಾಕ ಪದ್ಧತಿ ಪ್ರದರ್ಶಿಸುವ ಆಹಾರ ಮಳಿಗೆಗಳು, ವ್ಯಾಪಾರ ಮಳಿಗೆಗಳು, ಸಾಧಕರು ಮತ್ತು ಸಮುದಾಯದ ನಾಯಕರಿಗೆ ಸನ್ಮಾನ ಕಾರ್ಯಕ್ರಮ ಇರಲಿದೆ ಎಂದರು.

ಅಖಿಲ ಅರುಣಾಚಲ ವಿದ್ಯಾರ್ಥಿಗಳ ಒಕ್ಕೂಟ-ಕರ್ನಾಟಕ, ಅಸ್ಸಾಂ ಸೊಸೈಟಿ ಆಫ್ ಬೆಂಗಳೂರು, ಪೂರ್ವ ನಾಗಾ ವಿದ್ಯಾರ್ಥಿಗಳ ಒಕ್ಕೂಟ-ಬೆಂಗಳೂರು, ಜನಶಕ್ತಿ ಫೌಂಡೇಷನ್, ಮಣಿಪುರಿ ಡಯಾಸ್ಪೊರಾ- ಬೆಂಗಳೂರು, ನಾಗಾ ವಿದ್ಯಾರ್ಥಿಗಳ ಒಕ್ಕೂಟ, ತ್ರಿಪುರಾ ಪೀಪಲ್ ಫೌಂಡೇಷನ್ ಹಮ್ಮಿಕೊಂಡಿರುವ ಈ ಕಾರ್ಯಕ್ರಮವನ್ನು ಮೇಘಾಲಯದ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಂಗ್ಮಾ ಉದ್ಘಾಟಿಸಲಿದ್ದಾರೆ. ತ್ರಿಪುರಾ ರಾಜಮನೆತನದ ಮುಖ್ಯಸ್ಥ ಪ್ರದ್ಯೋತ್ ಬಿಕ್ರಂ ಮಾಣಿಕ್ಯ ದೆಬ್ಬರ್ಮಾ, ಎನ್‌ಪಿಪಿ ರಾಷ್ಟ್ರೀಯ ಅಧ್ಯಕ್ಷ ಜೇಮ್ಸ್ ಪಿ.ಕೆ. ಸಂಗ್ಮಾ, ಶಾಸಕರಾದ ಸುರೇಶ್ ಬಾಬು, ಸತೀಶ್ ರೆಡ್ಡಿ ಎಂ. ಭಾಗವಹಿಸಲಿದ್ದಾರೆ ಎಂದರು.

'ತೇರ್ಗಡೆ ಅಂಕ ಕಡಿಮೆ ಮಾಡದಿರಿ'

ಅವೈಜ್ಞಾನಿಕ ತೀರ್ಮಾನ ಕನ್ನಡಕ್ಕೆ ಮಾರಕ
● ಪುರುಷೋತ್ತಮ ಬಿಳಿಮಲೆ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಕನಿಷ್ಠ ಅಂಕಗಳನ್ನು 33ಕ್ಕೆ ಇಳಿಸಿರುವುದು ಅವೈಜ್ಞಾನಿಕವಾಗಿದೆ. ಕನ್ನಡ ಭಾಷಾ ಕಲಿಕೆಗೆ ಮಾರಕವಾಗಿರುವ ಈ ತೀರ್ಮಾನವನ್ನು ಕೂಡಲೇ ಮರುಪರಿಶೀಲಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸರ್ಕಾರವನ್ನು ಆಗ್ರಹಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಶುಕ್ರವಾರ ಆಯೋಜಿಸಿದ್ದ ಕನ್ನಡ ಜಾಗೃತಿ ಸಮಿತಿ ಸದಸ್ಯರ ರಾಜ್ಯ ಮಟ್ಟದ ಕಮ್ಮಟದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಕೇಂದ್ರ ಪಠ್ಯಕ್ರಮದ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸಮಾನ ಭೂಮಿಕೆಯನ್ನು ಹೊಂದಬೇಕೆನ್ನುವ ಕಾರಣಕ್ಕೆ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷೆಗೆ ಮಾರಕವಾಗಿದೆ. ವಿದ್ಯಾರ್ಥಿಗಳ ಭಾಷಾ ಕಲಿಕೆಗೆ ಅವಶ್ಯಕವಿರುವ ಗಂಭೀರತೆಯನ್ನು ಈ ತೀರ್ಮಾನವು ಕಸಿದುಕೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಇದು ಶಿಕ್ಷಣದಲ್ಲಿ ಕನ್ನಡ ಕಲಿಕೆಗೆ ಪ್ರತಿಕೂಲವಾಗಲಿದೆ' ಎಂದು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು

- ಶಿಕ್ಷಣ ನೀತಿಯ ಬಗ್ಗೆ ಸಾರ್ವಜನಿಕ ಚರ್ಚೆಯಾಗಲಿ
- ಕನ್ನಡ ಉಳಿಸಲು ಕಾರ್ಯಸೂಚಿ ತಯಾರಿ
- ಕನ್ನಡಕ್ಕೆ ಸವಾಲುಗಳು ಇವೆಯೇ ಹೊರತು ಸಾವಿಲ್ಲ: ಬರಗೂರು

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಸಲಹೆಯಂತೆ ಕನ್ನಡ ಉಳಿಸಲು ಸಾಮಾನ್ಯ ಕನಿಷ್ಠ ಕಾರ್ಯಸೂಚಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿಯು ರಾಜ್ಯ ಶಿಕ್ಷಣ ನೀತಿಯನ್ನು ಸರ್ಕಾರಕ್ಕೆ ಸಲ್ಲಿಸಿ 6 ತಿಂಗಳು ಕಳೆದರೂ ಸರ್ಕಾರ ಸಾರ್ವಜನಿಕ ಚರ್ಚೆಗೆ ಒಳಪಡಿಸಿಲ್ಲ. ಅತ್ಯಾಧುನಿಕ ಬೋಧನಾ ಕ್ರಮಗಳನ್ನು ವಿಷದಪಡಿಸಿರುವ ಶಿಕ್ಷಣ ನೀತಿಯನ್ನು ಕೂಡಲೇ ಅಳವಡಿಸಿಕೊಳ್ಳುವ ಕ್ರಮಕ್ಕೆ ಮುಂದಾಗಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಸವಾಲಿನ ಸಂದರ್ಭದಲ್ಲಿ ಕನ್ನಡವನ್ನು ಹೇಗೆ ಉಳಿಸಬೇಕೆನ್ನುವ ಕುರಿತು ಕನ್ನಡದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಾಮಾನ್ಯ ಕನ್ನಡ ಮಾರ್ಗಸೂಚಿಯನ್ನೇ ಹೊರತರಬೇಕಿದೆ' ಎಂದರು.

'ಭಾಷಾ ನೆಲೆಯಲ್ಲಿ ಜನರನ್ನು ನೋಡುವ ಕ್ರಮ ನಿಲ್ಲಬೇಕಿದ್ದು, ಜನರ ಮುಖಾಂತರ ಭಾಷೆಯನ್ನು ನೋಡುವ ಕ್ರಮವನ್ನು ಅನುಸರಿಸಿದಲ್ಲಿ ನೀತಿ ನಿಲುವುಗಳಿಗೆ ಬೇರೆಯೇ ಆಯಾಮ ದೊರಕುತ್ತದೆ. ಕನ್ನಡಿಗರನ್ನು ಉಳಿಸಿದರೆ ಅವರೇ ಕನ್ನಡವನ್ನು ಉಳಿಸಿಕೊಳ್ಳುತ್ತಾರೆ' ಎಂದರು.

'ಕನ್ನಡವನ್ನು ಉಳಿಸಿರುವುದು ಸಾಹಿತಿಗಳು, ಚಿಂತಕರು ಮಾತ್ರ ಎನ್ನುವ ಮನೋಭಾವ ಕೂಡಲೇ ಬದಲಾಗಬೇಕು. ಕನ್ನಡಕ್ಕೆ ಸವಾಲುಗಳಿವೆಯೇ ಹೊರತು, ಅದಕ್ಕೆ ಸಾವಿಲ್ಲ ಎನ್ನುವುದನ್ನು ಅರ್ಥೈಸಿಕೊಳ್ಳಬೇಕಿದೆ. ಬಹಳ ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡವು ಉಳಿಯಬೇಕು. ಕನ್ನಡವನ್ನು ಕಲಿಯದಿದ್ದರೆ ಕರ್ನಾಟಕದಲ್ಲಿ ಉದ್ಯೋಗ ಸಿಗಬಾರದೆನ್ನುವ ವ್ಯವಸ್ಥೆ ನಿರ್ಮಾಣವಾದಾಗ ಮಾತ್ರ ಕನ್ನಡಪರ ವಾತಾವರಣವು ಸೃಷ್ಟಿಯಾಗುತ್ತದೆ. ಕನ್ನಡ ಮಾಧ್ಯಮದಲ್ಲಿ ಶಾಲೆ ಆರಂಭಿಸಲು ಮುಂದೆ ಬರುವವರಿಗೆ ಸರ್ಕಾರ ವಿಶೇಷ ಅನುದಾನ ನೀಡಬೇಕು' ಎಂದರು.



ಕನ್ನಡ ಅಭಿವೃದ್ಧಿ ಪ್ರಾಧಿಕಾರ ಶುಕ್ರವಾರ ಆಯೋಜಿಸಿದ್ದ ರಾಜ್ಯ ಮಟ್ಟದ ಕಮ್ಮಟದಲ್ಲಿ ಕನ್ನಡ ಜಾಗೃತಿ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು

ಸಂವಾದ

ಕಮ್ಮಟದಲ್ಲಿ ಕನ್ನಡದ ಸಬಲೀಕರಣ, ಜಾಗೃತಿ ಸಮಿತಿ ಸದಸ್ಯರ ಪಾತ್ರ, ಔದ್ಯೋಗಿಕ ಸಂಸ್ಥೆಗಳಲ್ಲಿ ಕನ್ನಡದ ಅನುಷ್ಠಾನದ ಕುರಿತ ವಿಚಾರ ಗೋಷ್ಠಿಗಳು ನಡೆದವು. ಸಮಿತಿ ಸದಸ್ಯರೊಂದಿಗೆ ಸಂವಾದ ಏರ್ಪಡಿಸಲಾಗಿತ್ತು.

ಸಾಹಿತಿ ಎಲ್. ಹನುಮಂತಯ್ಯ, ಸಮಾರೋಪ ಭಾಷಣ ಮಾಡಿ, ಕನ್ನಡದ ಸವಾಲುಗಳನ್ನು ಎದುರಿಸಲು ಕನ್ನಡದ ಕಟ್ಟಾಳುಗಳಾದ, ಭಾಷಾ ಸೈನಿಕರಾದ ಜಾಗೃತಿ ಸಮಿತಿ ಸದಸ್ಯರು ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕೆಂದರು. ಲೇಖಕಿ ಡಾ.ಸಂಧ್ಯಾರೆಡ್ಡಿ, ಕನ್ನಡ ಜಾಗೃತಿ ಸಮಿತಿಯ 249 ಸದಸ್ಯರು, ಪ್ರಾಧಿಕಾರದ ನಾಮ ನಿರ್ದೇಶಿತ ಸದಸ್ಯರಾದ ಎ.ಬಿ.ರಾಮಚಂದ್ರಪ್ಪ, ನಿರಂಜನಾರಾಧ್ಯ, ರವಿಕುಮಾರ್ ನೀಹ, ಟಿ.ಗುರುರಾಜ್, ಟಿ.ತಿಮ್ಮೇಶ್, ವಿರೂಪಣ್ಣ ಕಲ್ಲೂರ, ಯಾಕೂಬ್ ಖಾದರ್ ಗುಲ್ವಾಡಿ ಹಾಗೂ ದಾಕ್ಷಾಯಿಣಿ ಹುಡೇದ ಮತ್ತು ಕಾರ್ಯದರ್ಶಿ ಡಾ. ಸಂತೋಷ ಹಾನಗಲ್ಲ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ನಿರ್ದೇಶಕರ ಹುದ್ದೆ ಭರ್ತಿಗೆ ರಾಜ್ಯ ವಿಕಲಚೇತನ ರಕ್ಷಣಾ ಸಮಿತಿ ಆಗ್ರಹ

ಬೆಂಗಳೂರು: ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕರ ಹುದ್ದೆಯನ್ನು ಶೀಘ್ರ ಭರ್ತಿ ಮಾಡಬೇಕು ಎಂದು ರಾಜ್ಯ ವಿಕಲಚೇತನ ರಕ್ಷಣಾ ಸಮಿತಿ ಆಗ್ರಹಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ, 'ಅಕ್ಟೋಬರ್ 15ರಂದು ಇಲಾಖೆಯ ನಿರ್ದೇಶಕರು ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತರಾಗಿ ವರ್ಗಾವಣೆಗೊಂಡಿದ್ದಾರೆ. ಅಂದಿನಿಂದ ಪ್ರಭಾರ ನಿರ್ದೇಶಕರಾಗಲಿ ಅಥವಾ ಕಾಯಂ ನಿರ್ದೇಶಕರಾಗಲಿ ಇಲ್ಲದೇ ನಿರ್ದೇಶನಾಲಯದ ಸ್ಥಿತಿ ನಾವಿಕನಿಲ್ಲದ ದೋಣಿಯಂತಾಗಿದೆ. ಇಲಾಖೆಯ ಪ್ರಮುಖ ನಿರ್ಧಾರಗಳನ್ನು ನಿರ್ಣಯಿಸುವಲ್ಲಿ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಹಿನ್ನಡೆಯಾಗುತ್ತಿದೆ' ಎಂದು ಹೇಳಿದ್ದಾರೆ.

ಡಿಸೆಂಬರ್ 3ರಂದು ವಿಶ್ವ ವಿಕಲಚೇತನ ದಿನಾಚರಣೆ ಇದೆ. ಯಾವುದೇ ನಿರ್ಧಾರ ಕೈಗೊಳ್ಳಲು ನಿರ್ದೇಶಕರು ಇಲ್ಲ. ಕೂಡಲೇ ನಿರ್ದೇಶಕರನ್ನು ನೇಮಕ ಮಾಡುವಂತೆ ಇಲಾಖೆಯ ಸಚಿವರು, ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಿದ್ದಾರೆ.

ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಬೆಂಗಳೂರು: ನಂದಿನಿ ತುಪ್ಪದ ಬೆಲೆಯನ್ನು ಕೆ.ಜಿ.ಗೆ ₹90ರಷ್ಟು ಏರಿಕೆ ಮಾಡಿರುವುದನ್ನು ಖಂಡಿಸಿ, ರಾಜ್ಯ ಸರ್ಕಾರದ ವಿರುದ್ಧ ಜೆಡಿಎಸ್ ಬೆಂಗಳೂರು ಘಟಕವು ಶುಕ್ರವಾರ ಪ್ರತಿಭಟನೆ ನಡೆಸಿತು.

ಪಕ್ಷದ ಬೆಂಗಳೂರು ನಗರದ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಅವರ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಕಾರ್ಯಕರ್ತರು, ಇದು 'ತೆರಿಗೆ ಪಿಪಾಸು ಸರ್ಕಾರ' ಎಂದು ಘೋಷಣೆ ಕೂಗಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ರಮೇಶ್‌ಗೌಡ, 'ಪಂಚ ಗ್ಯಾರಂಟಿಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಅವುಗಳನ್ನು ನೀಡಲಾಗದೆ ರಾಜ್ಯವನ್ನು ದಿವಾಳಿ ಮಾಡಿದೆ. ಖಾಲಿಯಾಗಿರುವ ಖಜಾನೆಯನ್ನು ಭರ್ತಿ ಮಾಡಿಕೊಳ್ಳಲು ತೆರಿಗೆ ಭಯೋತ್ಪಾದನೆ ನಡೆಸುತ್ತಿದೆ' ಎಂದರು.

'ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಮದ್ಯದ ದರ, ನೀರಿನ ಶುಲ್ಕ, ಪೆಟ್ರೋಲ್-ಡೀಸೆಲ್ ಮೇಲಿನ ತೆರಿಗೆ, ವಿದ್ಯುತ್ ಶುಲ್ಕ ಎಲ್ಲವನ್ನೂ ಏರಿಕೆ ಮಾಡಿದೆ. ಈಗ ನಂದಿನಿ ತುಪ್ಪದ ಬೆಲೆಯನ್ನೂ ಹೆಚ್ಚಿಸಿದೆ. ಬೆಲೆ ಏರಿಕೆಯನ್ನು ಹಿಂಪಡೆಯದೆ ಇದ್ದರೆ, ತೀವ್ರ ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಪಕ್ಷದ ಕಾರ್ಯಕರ್ತರು ಪ್ರತಿಭಟನೆ ವೇಳೆ 'ತೆರಿಗೆ ಪಿಪಾಸು ಸರ್ಕಾರ' ಪ್ರತಿಕೃತಿಗೆ ಬೆಂಕಿ ಹಚ್ಚಿದರು. ರಸ್ತೆಯಲ್ಲಿ ಮೆರವಣಿಗೆಗೆ ಮುಂದಾದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

'ಸಂಬಂಧಗಳಿಗೆ ಬೆಲೆ ಕೊಡದ ಜನ'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧುನಿಕತೆ ಬೆಳೆದಂತೆ ಅವಿಭಕ್ತ ಕುಟುಂಬ ವ್ಯವಸ್ಥೆ ನಶಿಸುತ್ತಿದೆ. ಸ್ವೇಚ್ಛಾಚಾರದ ಬದುಕು ಮಾನವೀಯ ಮೌಲ್ಯಗಳಿಗೆ ಕೊಳ್ಳಿ ಇಟ್ಟಿದೆ. ಜನರು ಸಂಬಂಧಗಳಿಗೆ ಬೆಲೆ ಕೊಡುತ್ತಿಲ್ಲ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರ ಸಂಘ ಚಾಲಕ ಮೋಹನ್ ಭಾಗವತ್ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ನೆಲೆ ಫೌಂಡೇಷನ್‌ನ ರಜತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಭೌತಿಕ ಜಗತ್ತಿನಲ್ಲಿ ಸಂವೇದನೆ ಹಾಗೂ ಸಂಸ್ಕಾರ ಮಾಯವಾಗಿದೆ. ಸಮಾಜದಲ್ಲಿ ವ್ಯಾವಹಾರಿಕ ಮನಸ್ಥಿತಿ ಹೆಚ್ಚಿದ್ದು, ಜನರು ಪ್ರತಿಯೊಂದರಲ್ಲೂ ಲಾಭ- ನಷ್ಟದ ಯೋಚನೆ ಮಾಡುತ್ತಾರೆ. ಸಮಾಜಕ್ಕೆ ಜಡತ್ವ ಬಂದಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ನಾವು ಎಲ್ಲ ಹಿಂದೂಗಳನ್ನು ಒಂದೇ ಎಂದು ಪರಿಗಣಿಸುತ್ತೇವೆ. ಆದರೆ, ಕೆಲವರು ಜಾತಿಯ ಆಧಾರದಲ್ಲಿ ತಾರತಮ್ಯ ಮಾಡುತ್ತಾರೆ. ಎಲ್ಲ ಹಿಂದೂಗಳನ್ನು ಒಗ್ಗೂಡಿಸಬೇಕು. ಜತೆಗೆ, ಅವರ ಸಂತೋಷ ಹಾಗೂ ದುಃಖದಲ್ಲಿ ಭಾಗಿಯಾಗಬೇಕು' ಎಂದು ತಿಳಿಸಿದರು.

'ವಿಜ್ಞಾನದಿಂದ ಜಗತ್ತಿನಲ್ಲಿ ಬದಲಾವಣೆಯಾದರೂ ಜೀವನದ ಸಮಸ್ಯೆಗಳು ಬದಲಾಗಿಲ್ಲ. ಸಮಾಜದಲ್ಲಿ ವಿವಿಧ ಜಾತಿಗಳು, ಧರ್ಮಗಳು, ಪ್ರದೇಶಗಳು ಮತ್ತು ಭಾಷೆಗಳ ನಡುವೆ ಸ್ನೇಹ ಹಾಗೂ ಏಕತೆಯನ್ನು ಉತ್ತೇಜಿಸುವ ಮಹತ್ವವನ್ನು ಒತ್ತಿ ಹೇಳಬೇಕು. ಇದರಿಂದ ಸಾಮರಸ್ಯದ ಸಮಾಜ ಸೃಷ್ಟಿಸಬಹುದು.



ಮೋಹನ್ ಭಾಗವತ್

ಕುಟುಂಬದಲ್ಲಿ ಭಾರತೀಯ ಮೌಲ್ಯಗಳನ್ನು ಉತ್ತೇಜಿಸಿದರೆ ಸಮಾಜವು ಸರಿಯಾದ ದಿಕ್ಕಿನಲ್ಲಿ ಸಾಗಲು ದಾರಿ ಮಾಡಿಕೊಡುತ್ತದೆ' ಎಂದರು.

'ನೆಲೆ ಸಂಸ್ಥೆಯು ಲಾಭ ನಷ್ಟಗಳನ್ನು ನೋಡದೆ ಸಂವೇದನೆ ಶೀಲತೆಯಿಂದ ಕೆಲಸ ಮಾಡಿರುವುದು ಸಂತಸದ ವಿಚಾರ. ಈ ಹಿಂದೆ ವಾರನ್ನದ ಪರಿಕಲ್ಪನೆ ಇತ್ತು. ಸಂಕಷ್ಟದಲ್ಲಿನ ಜನರಿಗೆ ಸಮಾಜ ಸ್ಪಂದಿಸುತ್ತಿತ್ತು. ಆದರೆ, ಈಗ ಸೇವೆ ಮಾಡಲು ಸಂಸ್ಥೆಗಳನ್ನು ಸ್ಥಾಪಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಸೇವೆ ಅನ್ನುವುದು ಸಮಾಜದಲ್ಲಿ ಅಂತರ್ಗತವಾಗಿರಬೇಕೇ ಹೊರತು ಸಂಸ್ಥೆ ಮಾಡಿ ಸೇವೆ ಮಾಡುವ ಸ್ಥಿತಿ ಬರಬಾರದು. ಈ ನಿಟ್ಟಿನಲ್ಲಿ ನೆಲೆ ಸಂಸ್ಥೆ ಮಾಡುತ್ತಿರುವ ಸೇವೆಯು ಸಮಾಜಕ್ಕೆ ಮತ್ತೆ ಈ ರೀತಿ ಯೋಚನೆ ಮಾಡಲು ಪ್ರೇರಣೆ ನೀಡಲಿ' ಎಂದು ಅವರು ಹೇಳಿದರು

ನೆಲೆ ಫೌಂಡೇಷನ್‌ನ ರಜತ ಮಹೋತ್ಸವದ ಸ್ಮರಣ ಸಂಚಿಕೆ 'ಬೆಳ್ಳಿ ಬೆಳಕು' ಹಾಗೂ ವಾರಪತ್ರಿಕೆ 'ವಿಕ್ರಮ' ಬಿಡುಗಡೆ ಮಾಡಲಾಯಿತು. ನೆಲೆ ಫೌಂಡೇಷನ್ ಅಧ್ಯಕ್ಷ ಡಿ.ಶಿವಕುಮಾರ್, ರಜತ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀನಾಥ್ ಬೈಸಾನಿ, ಹಿಂದೂ ಸೇವಾ ಪ್ರತಿಷ್ಠಾನದ ನಿರ್ದೇಶಕ ಸುರೇಶ್ ಪಾಲ್ಗೊಂಡಿದ್ದರು.

ಅಂತ್ಯಸಂಸ್ಕಾರಕ್ಕೆ ಸಿದ್ಧತೆ ನಡೆಸುವಾಗ ಕಣ್ಣುಬಿಟ್ಟ ವ್ಯಕ್ತಿ

ಗದಗ: ರೋಗಿ ಸತ್ತಿದ್ದಾನೆ ಎಂದು ವೈದ್ಯರು ದೃಢೀಕರಿಸಿದ್ದರಿಂದ ದೇಹವನ್ನು ಮನೆಗೆ ತಂದು ಅಂತ್ಯಸಂಸ್ಕಾರಕ್ಕೆ ಸಿದ್ಧತೆ ನಡೆಸುವ ವೇಳೆ ಅಚ್ಚರಿಯ ರೀತಿಯಲ್ಲಿ ವ್ಯಕ್ತಿ ಎಚ್ಚರವಾದ ಘಟನೆ ಬೆಟಗೇರಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಬೆಟಗೇರಿ ನಿವಾಸಿ 38 ವರ್ಷದ ನಾರಾಯಣ ವನ್ನಾಲ ಎಂಬ ವ್ಯಕ್ತಿ ಪಿತ್ತಕೋಶದ ಸಮಸ್ಯೆಯಿಂದ ಮೃತಪಟ್ಟಿದ್ದಾರೆ ಎಂದು ಖಾಸಗಿ ಆಸ್ಪತ್ರೆ ದೃಢಪಡಿಸಿತ್ತು. ಕುಟುಂಬದವರು ಅಂತ್ಯಸಂಸ್ಕಾರ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. 'ಆಸ್ಪತ್ರೆಯಿಂದ ಆಂಬುಲೆನ್ಸ್‌ನಲ್ಲಿ ತಂದ ದೇಹವನ್ನು ಕೆಳಕ್ಕೆ ಇಳಿಸುತ್ತಿದ್ದಂತೆ ನಾರಾಯಣ ಅವರು ಉಸಿರಾಡಲು ಆರಂಭಿಸಿ, ಕಣ್ಣು ಕೂಡ ಬಿಟ್ಟರು. ಬೆಟಗೇರಿಯ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಮುಂದುವರಿಸಿದ್ದೇವೆ' ಎಂದು ಕುಟುಂಬದವರು ತಿಳಿಸಿದ್ದಾರೆ.

'ರಾಷ್ಟ್ರಗೀತೆ ವಂದೇ ಮಾತರಂ ಸ್ಫೂರ್ತಿಯಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರ ಗೀತೆ ವಂದೇ ಮಾತರಂ ಅನ್ನು ಎಲ್ಲರೂ ಸ್ಫೂರ್ತಿಯಾಗಿ ತೆಗೆದುಕೊಳ್ಳಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ವಂದೇ ಮಾತರಂ ಗೀತೆ ರಚನೆಯ 150ನೇ ವರ್ಷಾಚರಣೆಯ ಅಂಗವಾಗಿ ಪಕ್ಷದ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ಸಾಮೂಹಿಕ ಗಾಯನ ಕಾರ್ಯಕ್ರಮದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ರಾಷ್ಟ್ರ ಗೀತೆ ವಂದೇ ಮಾತರಂ, ಸ್ವಾತಂತ್ರ್ಯ ಹೋರಾಟದ ಕಿಚ್ಚನ್ನು ಹಚ್ಚಿತ್ತು. 2047ರ ವೇಳೆಗೆ ಶಕ್ತಿಯುತ ಭಾರತವನ್ನು ನಿರ್ಮಿಸಲು ಈ ರಾಷ್ಟ್ರ ಗೀತೆ ವಂದೇ ಮಾತರಂ ಅನ್ನು ಸ್ಫೂರ್ತಿಯಾಗಿ ತೆಗೆದುಕೊಳ್ಳಬೇಕು' ಎಂದರು.

ಇದಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ, ಶಾಸಕ ಸಿ.ಎನ್.ಅಶ್ವತ್ಥನಾರಾಯಣ ಅವರು ವಂದೇ ಮಾತರಂ ಸಾಮೂಹಿಕ ಗಾಯನದಲ್ಲಿ ದನಿಗೂಡಿಸಿದರು.



ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ವಂದೇ ಮಾತರಂ ಗಾಯನ ಕಾರ್ಯಕ್ರಮದಲ್ಲಿ ಎನ್.ರವಿಕುಮಾರ್, ಸಿ.ಎನ್.ಅಶ್ವತ್ಥನಾರಾಯಣ, ಪಿ.ಸಿ.ಮೋಹನ್, ಮಾಳವಿಕಾ ಅವಿನಾಶ್, ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಪಾಲ್ಗೊಂಡಿದ್ದರು

ಅಧಿಕಾರಿಗಳ ವರ್ಗ

ಬೆಂಗಳೂರು: ಏಳು ಮಂದಿ ಐಎಫ್‌ಎಸ್ ಅಧಿಕಾರಿಗಳನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದೆ. ಹುಲಿ ದಾಳಿ ಪ್ರಕರಣಗಳಿಂದ ವಿವಾದಕ್ಕೆ ಸಿಲುಕಿರುವ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಎಸ್.ಪ್ರಭಾಕರನ್ ಅವರನ್ನು ವರ್ಗಾವಣೆ ಮಾಡಿದ್ದು ಆ ಜಾಗಕ್ಕೆ ಡಾ.ಸಂತೋಷ್‌ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಅನಿಲ್ ಕುಮಾರ್ ರತನ್- ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಪನ್ಮೂಲ ನಿರ್ವಹಣೆ. ಸಾಸ್ವತಿ ಮಿಶ್ರಾ-ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಸಿಬ್ಬಂದಿ ನೇಮಕಾತಿ. ಬಿಸ್ವಜಿತ್ ಮಿಶ್ರಾ- ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ. ವನಶ್ರೀ ವಿಪಿನ್ ಸಿಂಗ್- ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ. ಮನೋಜ್ ಕುಮಾರ್ ತ್ರಿಪಾಠಿ - ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವಿಚಕ್ಷಣೆ. ಎಸ್.ಪ್ರಭಾಕರನ್ -ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ. ಡಾ.ಜಿ.ಸಂತೋಷ್‌ಕುಮಾರ್- ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಂಡೀಪುರ ಹುಲಿ ಯೋಜನೆ

ಧರ್ಮಸ್ಥಳ ಪರ ಪಾದಯಾತ್ರೆ ಇಂದಿನಿಂದ

ಬೆಂಗಳೂರು: 'ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರವನ್ನು ವಿರೋಧಿಸಿ, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೊಂದಿಗೆ ನಾವಿದ್ದೇವೆ ಎಂದು ಸಾರಲು ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ತನ್ವಿರ್ ಅಹ್ಮದ್ ತಿಳಿಸಿದ್ದಾರೆ.

ವಿಶೇಷ ತನಿಖಾ ದಳ(ಎಸ್‌ಐಟಿ) ವಿಚಾರಣೆ ಆರಂಭಿಸಿದ ಬಳಿಕ ಅನೇಕ ಆರೋಪಗಳು ನಿರಾಧಾರ ಎಂದು ಸಾಬೀತಾಗಿದೆ. ಆದರೂ ಜನರ ಮನಸ್ಸಲ್ಲಿ ಧರ್ಮಸ್ಥಳದ ಬಗ್ಗೆ ಮೂಡಿರುವ ತಪ್ಪು ಭಾವನೆಗಳನ್ನು ಹೋಗಲಾಡಿಸಲು ಈ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ನ.18ರಂದು ಧರ್ಮಸ್ಥಳದಲ್ಲಿ ನಡೆಯಲಿರುವ ಸರ್ವಧರ್ಮ ಸಮ್ಮೇಳನದಲ್ಲಿ ಭಾಗಿಯಾಗುವೆ. ಪಾದಯಾತ್ರೆಯು ನ.8ರಂದು ಬೆಳಿಗ್ಗೆ 8.30ಕ್ಕೆ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದ ಬಳಿ ಆರಂಭಗೊಳ್ಳಲಿದೆ. 30 ಜನರ ತಂಡ ಇದರಲ್ಲಿ ಇರಲಿದೆ. 350 ಕಿ.ಮೀ. ದೂರದ ಧರ್ಮಸ್ಥಳಕ್ಕೆ ನ.17ಕ್ಕೆ ತಲುಪಲಿದೆ. ಅಲ್ಲಿಗೆ ತಲುಪುವ ಹೊತ್ತಿಗೆ ತಂಡದ ಸಂಖ್ಯೆ 500 ದಾಟಲಿದೆ ಎಂದು ತಿಳಿಸಿದರು.

ತ್ಯಾಜ್ಯ ವಿಲೇವಾರಿಗೆ ಹೊಸ ವಿಧಾನ

ಏಕರೂಪದ, ತಂತ್ರಜ್ಞಾನ ಆಧಾರಿತ ವ್ಯವಸ್ಥೆ ರೂಪಿಸಿ: ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈಜ್ಞಾನಿಕ ರೀತಿಯ ಘನತ್ಯಾಜ್ಯ ನಿರ್ವಹಣೆಗಾಗಿ ಏಕರೂಪದ, ತಂತ್ರಜ್ಞಾನ ಆಧಾರಿತ ವ್ಯವಸ್ಥೆಯೊಂದನ್ನು ರೂಪಿಸಬೇಕು' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಬೆಂಗಳೂರು ಮಹಾನಗರದ ಘನತ್ಯಾಜ್ಯ ವಿಲೇವಾರಿಯ 33 ಪ್ಯಾಕೇಜ್‌ಗಳಿಗೆ ಹೊರಡಿಸಿದ್ದ ಟೆಂಡರ್ ಪ್ರಶ್ನಿಸಿ ಹಲವು ಘನತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಇನ್ನೂ ಹಳೆಯ ವಿಧಾನದಲ್ಲಿಯೇ ಕಸ ವಿಲೇವಾರಿ ಪದ್ಧತಿ ಮುಂದುವರಿಸುವ ಬದಲು ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಹೊಂದಿದ ಹೊಸ ವಿಧಾನವೊಂದನ್ನು ರೂಪಿಸಬೇಕು. ಇದನ್ನು ಹಂತ ಹಂತವಾಗಿ ಜಾರಿಗೊಳಿಸಬೇಕು' ಎಂದು ನ್ಯಾಯಪೀಠ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಎಲ್ಲಾ ಐದು ಪಾಲಿಕೆಗಳಿಗೆ ನಿರ್ದೇಶಿಸಿದೆ.

'ಜಿಬಿಎ ಮುಖ್ಯ ಆಯುಕ್ತ, ಐದು ಪಾಲಿಕೆಗಳ ಆಯುಕ್ತರು ಮತ್ತು ಇ-ಆಡಳಿತ ಇಲಾಖೆಯ ಕಾರ್ಯದರ್ಶಿ ಒಳಗೊಂಡಂತೆ ಸಭೆ ನಡೆಸಬೇಕು. ಘನ ತ್ಯಾಜ್ಯ ನಿರ್ವಹಣೆಗಾಗಿ ಏಕೀಕೃತ ಮತ್ತು ಸಂಯೋಜಿತ ಡಿಜಿಟಲ್ ವೇದಿಕೆಯ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು ಮತ್ತು ಅದರ ಅನುಷ್ಠಾನದ ನಿಟ್ಟಿನಲ್ಲಿ ತಕ್ಷಣವೇ ಕಾರ್ಯಪ್ರವೃತ್ತರಾಗಬೇಕು' ಎಂದು ಸೂಚಿಸಿದೆ.

'ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಸಂವಹನಗಳಿಗೆ ಆಡಳಿತ ತತ್ವವು 'ಒಂದು ನಗರ, ಒಂದು ವೇದಿಕೆ' ಆಗಿರಬೇಕು. ಅದು ಎಲ್ಲಾ ನಾಗರಿಕರು, ನಿರ್ವಾಹಕರು ಮತ್ತು ಆಡಳಿತಗಾರರಿಗೆ ಸುಗಮವಾಗಿ ಕಾರ್ಯ-ನಿರ್ವಹಣೆಯನ್ನು ಖಾತ್ರಿಪಡಿಸಬೇಕು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ನಿರ್ದೇಶನ: 'ಸುಧಾರಣೆಗಾಗಿ ಸೂಚಿಸಲಾಗಿರುವ ಅಂಶಗಳಲ್ಲಿ ಡಿಜಿಟಲ್ ಡ್ಯಾಶ್ ಬೋರ್ಡ್, ಮೊಬೈಲ್ ಅಪ್ಲಿಕೇಶನ್, ಜಿಪಿಎಸ್ ಟ್ರ್ಯಾಕಿಂಗ್, ವೇಯ್ಟ್ ಬ್ರಿಡ್ಜ್ ಏಕೀಕರಣ ಮತ್ತು ಸಿ.ಸಿ. ಟಿ.ವಿ ಕಣ್ಗಾವಲು ಒಳಗೊಂಡಿವೆ.

ಇವುಗಳನ್ನು ಪ್ರತ್ಯೇಕ ಅಥವಾ ಸ್ವತಂತ್ರ ಯೋಜನೆಗಳೆಂಬಂತೆ ನೋಡಬಾರದು. ಎಲ್ಲವೂ ಸುಸಂಘಟಿತ ಆಡಳಿತ ವ್ಯವಸ್ಥೆಯ ಪರಸ್ಪರ ಆಂತರಿಕ ಸಂಪರ್ಕ ಹೊಂದಿದ ಘಟಕಗಳಾಗಿರಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ನಾಗರಿಕರು ಕಸವನ್ನು ಸುರಿಯುವ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ಅಪ್ಲಿಕೇಶನ್ ಮೂಲಕ ಮಾಹಿತಿ ನೀಡಿದರೆ ಅದರ ಮೇಲೆ ಕಣ್ಗಾವಲು ಇರಿಸುವ ವ್ಯವಸ್ಥೆ-ಯಾಗಬೇಕು. ಇದಕ್ಕಾಗಿ ಸಿ.ಸಿ.ಟಿ.ವಿ ನೆಟ್ ವರ್ಕ್‌ನಲ್ಲಿ ಸೆರೆಹಿಡಿದ ಚಿತ್ರಗಳನ್ನು ಆಧರಿಸಿ ಸಾಕ್ಷ್ಯ ಸಂಗ್ರಹಿಸಬೇಕು.

ಅಂತಹವರ ವಿರುದ್ಧ ಡಿಜಿಟಲ್ ಪ್ಲಾಟ್‌ಫಾರ್ಮ್‌ನ ಜಾರಿ ಮಾದರಿಗಳ ಮೂಲಕ ದಂಡ ವಿಧಿಸಬೇಕು. ಇಂತಹ ಜಾಗಗಳ ಮೇಲೆ ನಿರಂತರ ಕಣ್ಣಿಟ್ಟಿರಬೇ-ಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಆದಷ್ಟು ಬೇಗ 'ನೋಡಲ್ ಮೇಲ್ವಿಚಾರಣಾ ಮತ್ತು ಅನುಷ್ಠಾನ ಸಮಿತಿ' ರಚಿಸಬೇಕು ಎಂದು ನ್ಯಾಯಪೀಠವು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿದೆ. 'ಇದರ ಸಂಯೋಜನೆ, ನ್ಯಾಯವ್ಯಾಪ್ತಿಯ ಸಂಘರ್ಷಗಳನ್ನು ಪೂರ್ವಭಾವಿಯಾಗಿ ನಿವಾರಿಸಲು ಮತ್ತು ಸಂಕೀರ್ಣ ನಗರ ಯೋಜನೆಗಳಿಗೆ ಅಡ್ಡಿಯಾಗುವ ಅಧಿಕಾರಶಾಹಿ ಅಡೆತಡೆಗಳನ್ನು ನಿವಾರಿಸುವಂತೆ ಇರಬೇಕು' ಎಂದು ಸೂಚಿಸಿದೆ.

ಮುಖ್ಯಾಂಶಗಳು

- 33 ಪ್ಯಾಕೇಜ್‌ಗಳಿಗೆ ಹೊರಡಿಸಿದ್ದ ಟೆಂಡರ್ ಪ್ರಶ್ನಿಸಿದ್ದ ಗುತ್ತಿಗೆದಾರರು
- ರಿಟ್ ಅರ್ಜಿ ವಜಾ ಮಾಡಿರುವ ಪೀಠ
- ನೋಡಲ್ ಮೇಲ್ವಿಚಾರಣಾ ಸಮಿತಿ ರಚಿಸಲು ಸೂಚನೆ

ಹೊಸ ಟೆಂಡರ್‌ಗೆ ಅಸ್ತು

ಹೈಕೋರ್ಟ್ ಸುದ್ದಿ

ಬೃಹತ್ ಬೆಂಗಳೂರು ಮಹಾನಗರದಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಸರ್ಕಾರ 2025ರ ಜುಲೈ 30ರಂದು ಹೊಸದಾಗಿ ಕರೆದಿದ್ದ ಟೆಂಡರ್‌ಗೆ ನ್ಯಾಯಪೀಠ ಇದೇ ವೇಳೆ ಹಸಿರು ನಿಶಾನೆ ತೋರಿದೆ.

ಹೊಸ ಟೆಂಡರ್ ನಿಯಮ ಹಾಗೂ ಷರತ್ತುಗಳನ್ನು ಪ್ರಶ್ನಿಸಿ ಹಲವು ಹಾಲಿ ಗುತ್ತಿಗೆದಾರರು ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಟೆಂಡರ್ ಪ್ರಕ್ರಿಯೆಗಳನ್ನು ಮುಂದುವರಿಸಲು ಅವಕಾಶ ಕಲ್ಪಿಸಿದೆ.

'ವಾರ್ಡ್‌ವಾರು ಇದ್ದ ಟೆಂಡರ್ ಪ್ರಕ್ರಿಯೆಯನ್ನು ಹಲವು ವಾರ್ಡ್‌ಗಳಿಗೆ ವಿಸ್ತರಿಸಿರುವ ಕ್ರಮ ಏಕಪಕ್ಷೀಯ ಅಥವಾ ಸಕಾರಣವಿಲ್ಲದ ಟೆಂಡರ್ ಎಂದು ಹೇಳಲಾಗದು. ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಟೆಂಡರ್ ಪ್ರಕ್ರಿಯೆ-ಯಲ್ಲಿ ಕೆಲವೊಂದು ಬದಲಾವಣೆ ಮಾಡಲಾಗಿದೆ. ಹೊಸ ಟೆಂಡರ್ ನಿಯಮಗಳಲ್ಲಿ ಹಣಕಾಸು ಮತ್ತು ತಾಂತ್ರಿಕ ಅಗತ್ಯಗಳಲ್ಲಿ ಬದಲಾವಣೆ, ಅರ್ಜಿದಾರರು ಒಟ್ಟಾಗಿ ಸೇರಿ ಟೆಂಡರ್ ಸಲ್ಲಿಕೆಗೆ ಯಾವುದೇ ಅಡ್ಡಿ ಮಾಡುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ನ್ಯಾಯಾಲಯದ ಮೆಟ್ಟಿಲೇರಿದ್ದ ಗುತ್ತಿಗೆದಾರ-ರಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಟೆಂಡರ್‌ಗೆ ನಿಗದಿಪಡಿಸಿರುವ ದಿನಾಂಕವನ್ನು ಇದೇ 10ರವರೆಗೆ ವಿಸ್ತರಿಸಬೇಕು' ಎಂದೂ ನ್ಯಾಯಪೀಠ ಇದೇ ವೇಳೆ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ನವ ಉದ್ಯಮಿಗಳಿಗೆ ಬೆಂಗಳೂರಿನಲ್ಲಿ ಸಾಕಷ್ಟು ಅವಕಾಶ

'ಬೆಂಗಳೂರು ಜಾಗತಿಕ ಆವಿಷ್ಕಾರ ಕೇಂದ್ರ'

ಪ್ರಜಾವಾಣಿ ವಾರ್ತೆ



'ಸ್ಟಾರ್ಟ್‌ಅಪ್ ಪಾರ್ಕ್' ಅನ್ನು ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಶಫಿ ಶೌಕತ್ ಮತ್ತು ಉದ್ಯಮಿಗಳು ಉಪಸ್ಥಿತರಿದ್ದರು

ಬೆಂಗಳೂರು: 'ಉದ್ಯಮ ಪ್ರಾರಂಭಿಸುವವರಿಗೆ ಬೆಂಗಳೂರಿನಲ್ಲಿ ಸಾಕಷ್ಟು ಅವಕಾಶಗಳಿವೆ. ಭವಿಷ್ಯದಲ್ಲಿ ಈ ನಗರವು ಜಾಗತಿಕ ಆವಿಷ್ಕಾರ ಕೇಂದ್ರವಾಗಿ ಹೊರಹೊಮ್ಮಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಐಕ್ಯು ವೆಂಚರ್ಸ್ ವತಿಯಿಂದ ಹೊಸೂರು ರಸ್ತೆಯಲ್ಲಿ ಮಡಿವಾಳ ಸಂಚಾರ ಪೊಲೀಸ್ ಠಾಣೆ ಎದುರು ನವೋದ್ಯಮಿಗಳಿಗಾಗಿ ನಿರ್ಮಿಸ-ಲಾಗಿರುವ 'ಸ್ಟಾರ್ಟ್‌ಅಪ್ ಪಾರ್ಕ್' ಉದ್ಘಾಟಿಸಿ, ಮಾತನಾಡಿದರು.

'ಕರ್ನಾಟಕವು ಅವಕಾಶಗಳ ಸಾಗರವಾಗಿದ್ದು, ತಂತ್ರಜ್ಞಾನ ಅಲ್ಲದೆ ಹಲವು ಉದ್ಯಮಗಳಿಗೆ ಸಾಕಷ್ಟು ಅವಕಾಶಗಳು ಇಲ್ಲಿವೆ. ಈ ಅವಕಾಶಗಳ-ನ್ನು ಸದ್ಬಳಕೆ ಮಾಡಿಕೊಂಡು, ಯಶಸ್ಸು ಸಾಧಿಸಬೇಕು' ಎಂದರು.

ಐಕ್ಯು ವೆಂಚರ್ಸ್ ಸಂಸ್ಥಾಪಕ ಶಫಿ ಶೌಕತ್, 'ಬೆಂಗಳೂರು ನವೋದ್ಯಮಗಳಿಗೆ ಉತ್ತಮ ತಾಣ. ಈ ಸ್ಟಾರ್ಟ್ ಅಪ್ ಪಾರ್ಕ್ ಕರ್ನಾಟಕದ ಬೆಳವಣಿಗೆಗೆ ಎಂಜಿನ್ ಆಗಲಿದೆ. ಉದ್ಯೋಗ ಸೃಷ್ಟಿಯ ಜತೆಗೆ ಉದ್ಯಮಿಗಳು ಮತ್ತು ಹೂಡಿಕೆದಾರರು ಒಟ್ಟಿಗೆ ಕೆಲಸ ಮಾಡುವ ವೇದಿಕೆ ಇದಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ನವೋದ್ಯಮಿಗಳಿಗೆ ಅಗತ್ಯ ಮೂಲಸೌಕರ್ಯದ ಜತೆಗೆ ನವೋದ್ಯಮ ಶಾಲೆ, ಹೂಡಿಕೆದಾರರ ಸ್ಟುಡಿಯೊ, ಮಾರ್ಗದರ್ಶನ ಕೇಂದ್ರ, ಕಾರ್ಯಕ್ರ-ಮಗಳಿಗೆ ಸ್ಥಳಾವಕಾಶ, ಗ್ರಂಥಾಲಯ, ಪ್ರಯೋಗಾಲಯ ಸೇರಿ ಹಲವು ಸೌಲಭ್ಯ ಹೊಂದಿದೆ' ಎಂದು ಹೇಳಿದರು.

ಅತಿಥಿ ಗೃಹಕ್ಕೆ ವಿ.ವಿ ಭೂಮಿ: ಎಐಡಿಎಸ್‌ಒ ವಿರೋಧ

ಬೆಂಗಳೂರು: ಕರ್ನಾಟಕ ಪಶು ಮತ್ತು ಪಶು ವೈದ್ಯಕೀಯ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸೇರಿರುವ ಭೂಮಿಯನ್ನು ಹೈಕೋರ್ಟ್ ಅತಿಥಿ ಗೃಹಕ್ಕೆ ನೀಡುವ ಸರ್ಕಾರದ ತೀರ್ಮಾನವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಖಂಡಿಸಿದೆ.

ವಿಶ್ವವಿದ್ಯಾಲಯದ 4 ಎಕರೆ ಭೂಮಿಯನ್ನು ಹೈಕೋರ್ಟ್ ಅಧಿಕಾರಿಗಳ ಅತಿಥಿ ಗೃಹ ನಿರ್ಮಾಣಕ್ಕಾಗಿ ಹಸ್ತಾಂತರಿಸುವ ತೀರ್ಮಾನ ಸರಿಯಲ್ಲ. ಇದು ಶಿಕ್ಷಣದ ಮೇಲೆ ನಡೆಯುತ್ತಿರುವ ಸರ್ಕಾರದ ನಿರಂತರ ದಾಳಿಯ ಮತ್ತೊಂದು ನಿದರ್ಶನವಾ-ಗಿದ್ದು, ಶೈಕ್ಷಣಿಕ ಹಾಗೂ ಸಂಶೋಧನಾ ಉದ್ದೇಶಗಳಿಗೆ ಮೀಸಲಾಗಿರುವ ವಿಶ್ವವಿ-ದ್ಯಾಲಯದ ಸಂಪನ್ಮೂಲಗಳು ಕ್ರಮೇಣ ಕಬಳಿಕೆಯಾಗಲಿವೆ ಎಂದು ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ಉನ್ನತ ಶಿಕ್ಷಣ, ಸಂಶೋಧನೆ ಹಾಗೂ ಪಶು ವೈದ್ಯಕೀಯ ಮತ್ತು ಮೀನುಗಾರಿಕಾ ವಿಜ್ಞಾನಗಳ ಅಭಿವೃದ್ಧಿಗೆ ಬಳಸುತ್ತಿರುವ ಈ ಭೂಮಿಯನ್ನು ಶೈಕ್ಷಣಿಕೇತರ ಉದ್ದೇಶಗಳಿಗೆ ಬಳಸುವುದು ವಿಶ್ವವಿದ್ಯಾಲಯ-ಗಳ ಶೈಕ್ಷಣಿಕ ಸ್ವಾಯತ್ತತೆಯ ಮೇಲೆ ನೇರ ದಾಳಿ ಮಾಡಿದಂತೆ. ವಿಶ್ವವಿದ್ಯಾ-ಲಯಕ್ಕೆ ಸೇರಿದ ಭೂಮಿಯನ್ನು ಇತರೆ ಉದ್ದೇಶಕ್ಕೆ ಹಸ್ತಾಂತರಿಸುವ ಕ್ರಮವನ್ನು ತಡೆಯಬೇಕು ಎಂದು ಕರೆ ನೀಡಿದ್ದಾರೆ.

'ಆರ್‌ಎಸ್‌ಎಸ್ ನಿಷೇಧಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿಯೇ ಇಲ್ಲದ ಆರ್‌ಎಸ್‌ಎಸ್ ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಪಥಸಂಚಲನ ಮಾಡಲು ಹೊರಟಿರುವುದು ಕಾನೂನು ಬಾಹಿರ. ಆರ್‌ಎಸ್‌ಎಸ್ ಅನ್ನು ನಿಷೇಧಿಸಬೇಕು ಎಂದು ಕೆಪಿಸಿಸಿ ಸದಸ್ಯ ವಿನಯ್ ಗಾಂಧಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಪಥಸಂಚಲನ ಮಾಡುವ ದಿನವೇ ಭೀಮ ಸೇನಾ ಸಂಘಟನೆ, ರೈತ ಸಂಘ, ದಲಿತ ಸಂಘ, ಕ್ರಿಶ್ಚಿಯನ್ ಸಮಾಜ ಸೇರಿದಂತೆ 11 ಸಂಘಟನೆಗಳು ಪಥಸಂಚಲನ ಮಾಡಲು ಅನುಮತಿ ಕೇಳಿವೆ. ಇದರಿಂದ ಕಾನೂನು ಸುವ್ಯವಸ್ಥೆ ಹದಗೆಡುವ ಸಾಧ್ಯತೆ ಇದ್ದು, ಆರ್‌ಎಸ್‌ಎಸ್ ಅದಕ್ಕೆ ನೇರ ಹೊಣೆಯಾಗಲಿದೆ' ಎಂದು ಹೇಳಿದರು.

ಆರ್‌ಎಸ್‌ಎಸ್ ಸೇರಿದಂತೆ ಭಯೋತ್ಪಾದಕ ಕೃತ್ಯದಲ್ಲಿ ತೊಡಗಿರುವ ಎಲ್ಲ ಸಂಘಟನೆಗಳನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದರು.

ಕೆಪಿಸಿಸಿ ಸದಸ್ಯ ಮಹಮ್ಮದ್ ಗೌಸ್ ಮಾತನಾಡಿ, 'ರಾಜ್ಯದಲ್ಲಿ ವಿಧಾನ ಪರಿಷತ್ತಿಗೆ ಶಿಕ್ಷಕರ ಮತ್ತು ಪದವೀಧರರ 16 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಒಂದು ಕ್ಷೇತ್ರದಲ್ಲಿಯಾದರೂ ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಅವಕಾಶ ನೀಡಬೇಕು' ಎಂದು ಹೇಳಿದರು.

ಕಾಂ ಡೀಲ್ ಟ್ರಸ್ಟ್ ರಜತ ಮಹೋತ್ಸವದಲ್ಲಿ ಉಮಾ ಮಹದೇವನ್ ಸಲಹೆ

'ಆಟಿಸಂ: ಸಮುದಾಯದ ಬೆಂಬಲ ಹೆಚ್ಚಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಟಿಸಂ ಸಹಿತ ನಾನಾ ದೈಹಿಕ, ಮನೋ ನ್ಯೂನತೆಗಳಿಗೆ ಸಂಬಂಧಿಸಿದ ಸಮಸ್ಯೆ ಎದುರಿಸುತ್ತಿರುವವರ ಪರವಾಗಿ ಕೆಲಸ ಮಾಡುತ್ತಿರುವ ಸಂಸ್ಥೆಗಳ ಜತೆಗೆ ಸರ್ಕಾರವೂ ನಿಲ್ಲಲಿದ್ದು, ಸಮುದಾಯದ ಬೆಂಬಲವೂ ಹೆಚ್ಚಬೇಕಿದೆ' ಎಂದು ಅಭಿವೃದ್ಧಿ ಆಯುಕ್ತೆ ಉಮಾ ಮಹದೇವನ್ ಹೇಳಿದರು.

ದೊಮ್ಮಲೂರಿನ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಶುಕ್ರವಾರ ನಡೆದ ದಿ ಕಾಂ ಡೀಲ್ ಟ್ರಸ್ಟ್ (ಟಿಸಿಡಿಟಿ) ಸಂಸ್ಥೆಯ ರಜತಮಹೋತ್ಸವ ಸಮಾರಂಭದಲ್ಲಿ ಸಾಕ್ಷ್ಯಚಿತ್ರ ಹಾಗೂ ಕಾಫಿ ಟೇಬಲ್ ಪುಸ್ತಕ ಜನಾರ್ಪಣೆ ಮಾಡಿ, ಮಾತನಾಡಿದರು.

'ವಿಶೇಷ ಸಮಸ್ಯೆಗಳಿಂದ ಬಳಲುತ್ತಿರುವ ಮಕ್ಕಳಿಗೆ ಶಿಕ್ಷಣ ನೀಡಲು 4 ಸಾವಿರಕ್ಕೂ ಅಧಿಕ ಶಾಲೆಗಳಿಗೆ ಸರ್ಕಾರ ಅನುಮತಿ ನೀಡಿದೆ. ಅಲ್ಲಿ ಮಕ್ಕಳು ಹಾಗೂ ಪೋಷಕರಿಗೆ ಜಾಗೃತಿ ಮೂಡಿಸುವ ಕೆಲಸವೂ ನಡೆದಿದೆ. 70 ಸಾವಿರದಷ್ಟು ಅಂಗನವಾಡಿಗಳು ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿಯೂ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಈ ಕ್ಷೇತ್ರದಲ್ಲಿ ತಜ್ಞತೆ ಹೊಂದಿರುವ ಡಾ.ಪ್ರತಿಭಾ ಕಾರಂತ್ ಅಂಥಹವರು ವಿಶೇಷ ಶಾಲೆ, ಅಂಗನವಾಡಿಗಳಲ್ಲೂ ಮಕ್ಕಳು ಮತ್ತು ಪೋಷಕರಲ್ಲಿ ಅರಿವು ಹೆಚ್ಚಿಸಿ, ಥೆರಪಿಯಂತಹ ಚಟುವಟಿಕೆ ರೂಪಿಸುವ ಮೂಲಕ ಸಹಭಾಗಿತ್ವವನ್ನೂ ಹೊಂದಬಹುದು' ಎಂದು ಅಭಿಪ್ರಾಯ-ಪಟ್ಟರು.

'ಮಕ್ಕಳಲ್ಲಿ ಕಂಡು ಬರುವ 'ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್' ಅನ್ನು ಬೇಗ ಗುರುತಿಸಿ ಅವರಿಗೆ ಲಭ್ಯ ಇರುವ ಚಿಕಿತ್ಸೆಯನ್ನು ಪೋಷಕರು ಕೊಡಿಸಬೇಕು. ಕುಟುಂಬದ ಜತೆಗೆ ಸಮುದಾಯವೂ ನಿಂತಾಗ ಮಕ್ಕಳಲ್ಲಿ ಮನೋಸ್ಥೈರ್ಯ ಹೆಚ್ಚಲಿದೆ. ಸಕಾಲಕ್ಕೆ ಚಿಕಿತ್ಸೆ, ಮಾರ್ಗದರ್ಶನ ಸಿಕ್ಕರೆ ಮಕ್ಕಳು ಸಾಮಾನ್ಯ ಶಾಲೆಯಲ್ಲಿ ಶಿಕ್ಷಣ ಪಡೆಯಲು ಸಹಕಾರಿಯಾಗಲಿದೆ' ಎಂದರು.

ಸಂಸ್ಥೆ ವೆಬ್‌ಸೈಟ್ ಹಾಗೂ ಆ್ಯಪ್ ಜನಾರ್ಪಣೆಗೊಳಿಸಿದ ತಿರುವನಂತಪುರದ ಕ್ಯಾಡ್ರೆ ಟೆಕ್ನೋಪಾರ್ಕ್ ಹಾಗೂ ನಿಶ್ ಸಂಸ್ಥೆಯ ಸಂಸ್ಥಾಪಕ ಜಿ.ವಿಜ-ಯರಾಘವನ್, 'ಕೇರಳದಲ್ಲಿ ಆಟಿಸಂ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳಿಗೆ ಸರ್ಕಾರದ ಬೆಂಬಲ ಚೆನ್ನಾಗಿದೆ. ಸಮುದಾಯವೂ ಕುಟುಂಬಗಳಿಗೆ ಮನೋಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದೆ' ಎಂದು ಅವರು ಹೇಳಿದರು.

ಸಂಸ್ಥೆಯ ಸಂಸ್ಥಾಪಕ ನಿರ್ದೇಶಕಿ ಡಾ.ಪ್ರತಿಭಾ ಕಾರಂತ್ ಅವರು ಸಂಸ್ಥೆ ನಡೆದು ಬಂದ ಹಾದಿ, ಎದುರಿಸಿದ ಕಠಿಣ ಕ್ಷಣಗಳು, ಮಕ್ಕಳು ಹಾಗೂ ಕುಟುಂಬಗಳಿಗೆ ಸಿಕ್ಕಿರುವ ಬೆಂಬಲದ ಕುರಿತು ವಿವರ ಹಂಚಿಕೊಂಡರು.

'ಕಾಂ ಡೀಲ್ ಸಂಸ್ಥೆಯು 2000ರಲ್ಲಿ ಆರಂಭಗೊಂಡಿದ್ದು, ಆಟಿಸಂ ಕಾಣಿಸಿಕೊಂಡ ನೂರಾರು ಮಕ್ಕಳಲ್ಲಿ ಜಾಗೃತಿ ಮೂಡಿಸಿ ಮಾರ್ಗದರ್ಶನ ನೀಡಿದೆ. ಆಟಿಸಂ ಬಗ್ಗೆ ನಿರಂತರವಾಗಿ ವೈಜ್ಞಾನಿಕ ತಿಳಿವಳಿಕೆ, ತರಬೇತಿಗಳನ್ನು ಮಕ್ಕಳು, ಪೋಷಕರಿಗೆ ಒದಗಿಸುತ್ತಿದೆ' ಎಂದರು.



ಕಾಂ ಡೀಲ್ ಸಂಸ್ಥೆಯ ರಜತ ಮಹೋತ್ಸವ ಅಂಗವಾಗಿ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್‌ನಲ್ಲಿ ಶುಕ್ರವಾರ ಕಲಾ ಚಿತ್ರಗಳ ಪ್ರದರ್ಶನ ಆಯೋಜಿಸಲಾಗಿತ್ತು

ಗಮನ ಸೆಳೆದ ಪ್ರದರ್ಶನ

ಕಾಂ ಡೀಲ್ ಟ್ರಸ್ಟ್‌ನೊಂದಿಗೆ ಗುರುತಿಸಿಕೊಂಡಿರುವ ಹಾಗೂ ಸಹಭಾಗಿತ್ವ ಹೊಂದಿರುವ ಕೆಲವು ಸಂಸ್ಥೆಗಳಲ್ಲಿ ಶಿಕ್ಷಣ, ತರಬೇತಿ ಪಡೆಯುತ್ತಿರುವ ಮಕ್ಕಳು ರೂಪಿಸಿದ ವಿವಿಧ ಕಲಾಕೃತಿಗಳ ಪ್ರದರ್ಶನವೂ ಈ ವೇಳೆ ಗಮನ ಸೆಳೆಯಿತು.

ಮಕ್ಕಳು ರೂಪಿಸಿದ ಹಣತೆ, ಮೇಣದ ಉತ್ಪನ್ನಗಳ ಬಗ್ಗೆಯೂ ಮೆಚ್ಚುಗೆ ವ್ಯಕ್ತವಾಯಿತು. ಹಲವರು ಈ ಉತ್ಪನ್ನಗಳನ್ನು ಖರೀದಿಸಿ ಪ್ರೋತ್ಸಾಹಿಸಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾಹಿತಿ

18 ಸಾವಿರ ರಸ್ತೆ ಗುಂಡಿ ದುರಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸುಮಾರು 18 ಸಾವಿರ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, ಜಂಕ್ಷನ್‌ಗಳ ಅಭಿವೃದ್ಧಿಗೆ ₹100 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

₹1,700 ಕೋಟಿ ವೆಚ್ಚದಲ್ಲಿ 220.68 ಕಿಮೀ ಉದ್ದದ 140 ರಸ್ತೆಗಳಲ್ಲಿ ಕಾಮಗಾರಿ ನಡೆಯುತ್ತಿದ್ದು, 79.08 ಕಿ.ಮೀ (39 ರಸ್ತೆ) ವೈಟ್ ಟಾಪಿಂಗ್ ಕೆಲಸ ಪೂರ್ಣಗೊಂಡಿದೆ. ಉಳಿದ 101 ರಸ್ತೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ ₹694 ಕೋಟಿ ವೆಚ್ಚದಲ್ಲಿ 386.5 ಕಿಮೀ ರಸ್ತೆಗಳ ಡಾಂಬರೀಕರಣ ನಡೆಯುತ್ತಿದ್ದು, ಶೇ 44ರಷ್ಟು ಕೆಲಸ ಪೂರ್ಣಗೊಂಡಿದೆ. ಉಳಿದ ಕೆಲಸವನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಲಾಗುತ್ತದೆ ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

₹100 ಕೋಟಿ ವೆಚ್ಚದಲ್ಲಿ 'ಸುರಕ್ಷಾ 75' ಜಂಕ್ಷನ್ ಸುಧಾರಣಾ ಯೋಜನೆಯ ಶೇ 40ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಈಜೀಪುರ ಮೇಲ್ಸೇತುವೆ ಕಾಮಗಾರಿ 2026ರ ಜುಲೈ ಅಂತ್ಯಕ್ಕೆ ಮುಗಿಯಲಿದೆ ಎಂದರು.

ಐದು ನಗರ ಪಾಲಿಕೆಗಳ ಕರಡು ವಾರ್ಡ್ ಪುನರ್ ವಿಂಗಡಣೆ ಅಧಿಸೂ-ಚನೆಯನ್ನು ಸೆ.30ರಂದು ಪ್ರಕಟಿಸಲಾ-ಗಿದ್ದು, ಆಕ್ಷೇಪಣೆಗಳ ಅವಧಿ ಮುಗಿದಿದೆ. ಪರಿಶೀಲನೆಯ ನಂತರ ಅಂತಿಮ ಅಧಿ-ಸೂಚನೆಯನ್ನು ಶೀಘ್ರದಲ್ಲೇ ಹೊರಡಿಸ-ಲಾಗುವುದು ಎಂದು ಹೇಳಿದರು.

ಜಿಬಿಎ ವ್ಯಾಪ್ತಿಯ ನಗರ ಪಾಲಿಕೆಗಳಿಗೆ ₹6,700 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ಇದ್ದು, ಇದುವರೆಗೆ ₹3,437 ಕೋಟಿ ತೆರಿಗೆ ಸಂಗ್ರಹಿಸಲಾಗಿ-ದೆ. ಉಳಿದ ಮೊತ್ತವನ್ನು, ಆಯಾ ನಗರ ಪಾಲಿಕೆಗಳಲ್ಲಿ ಸಂಗ್ರಹ ಮಾಡಲು ಸೂಕ್ತ ಕ್ರಮವಹಿಸಲಿದ್ದಾರೆ ಎಂದು ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿರುವ ಸುಮಾರು 25 ಲಕ್ಷ ಆಸ್ತಿಗಳ ಪೈಕಿ 7,96,780 ಅರ್ಜಿ ಸ್ವೀಕರಿಸಿದ್ದು, ಇದರಲ್ಲಿ 7,83,179ಕ್ಕೆ ಅಂತಿಮ ಇ-ಖಾತಾ ನೀಡಲಾಗಿದೆ. ಬಿ-ಖಾತೆಯಿಂದ ಎ-ಖಾತೆಗೆ ಪರಿವರ್ತನೆಗಾಗಿ 1,169 ನಾಗರಿಕರು ನೋಂದಣಿ ಮಾಡಿಕೊಂಡಿರುವುದಾಗಿ ಹೇಳಿದರು.

'ಹಾಡು ಆಡು ಕನ್ನಡ' ಇಂದು

ಬೆಂಗಳೂರು: 'ನಮ್ಮವರು' ಸಂಘಟನೆ ನ.8ರಂದು ಸಂಜೆ 5.30ಕ್ಕೆ ದಾಸರಹಳ್ಳಿಯ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ 'ಸಂಸ್ಕೃತಿ ಉತ್ಸವ-ಹಾಡು ಆಡು ಕನ್ನಡ' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಕನ್ನಡ ಸಾಹಿತ್ಯ ಪರಿಷತ್ತು ವಿಜಯನಗರ ಕ್ಷೇತ್ರದ ಅಧ್ಯಕ್ಷ ಉಮೇಶ್‌ಚಂದ್ರ, ಗೋವಿಂದರಾಜನಗರ ಕ್ಷೇತ್ರದ ಕನ್ನಡ ಜಾನಪದ ಪರಿಷತ್ತಿನ ಅಧ್ಯಕ್ಷ ನರಸಿಂಹಮೂರ್ತಿ, ಕೆ.ಪಿ.ಅಗ್ರಹಾರ ಘಟಕದ ಅಧ್ಯಕ್ಷ ಲಿಂಗರಾಜು ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದರು.

ಶಾಸಕ ಎಂ. ಕೃಷ್ಣಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಪ್ರಿಯಕೃಷ್ಣ ಅವರು ಅಧ್ಯಕ್ಷತೆ ವಹಿಸುವರು. ಯುವನಾಯಕ ಪ್ರದೀಪ್ ಕೃಷ್ಣಪ್ಪ, ಆಯೋಜಕ ನೀಲಕಂಠ ಆರ್ ಗೌಡ ಭಾಗವಹಿಸಲಿದ್ದಾರೆ.

ವಿಜಯನಗರ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಕನ್ನಡದಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



'ವಂದೇ ಮಾತರಂ' ಗೀತೆಯ 150ನೇ ವಾರ್ಷಿಕೋತ್ಸವದ ಪ್ರಯುಕ್ತ ಎಎಸ್‌ಸಿ ಸೆಂಟರ್ ಮತ್ತು ಕಾಲೇಜಿನಲ್ಲಿ ಶುಕ್ರವಾರ ಸಾಮೂಹಿಕ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನಾಳೆ ಚಾಲಕರ ದಿನಾಚರಣೆ

ಬೆಂಗಳೂರು: ನಟ ಶಂಕರ್‌ನಾಗ್ ಜನ್ಮದಿನದ ಪ್ರಯುಕ್ತ ನ.9ರಂದು 12ನೇ ವರ್ಷದ 'ಚಾಲಕರ ದಿನಾಚರಣೆ' ಆಯೋಜಿಸಲಾಗಿದೆ. ನಟಿ ರಚಿತಾ ರಾಮ್ ಅವರನ್ನು 'ಆಟೊ ರಾಯಭಾರಿ'ಯಾಗಿ ಆಯ್ಕೆ ಮಾಡಲಾಗಿದೆ ಎಂದು ವಿವಿಧ ಆಟೊ ಚಾಲಕರ ಸಂಘಗಳ ಪದಾಧಿಕಾರಿಗಳು ತಿಳಿಸಿದ್ದಾರೆ.

ಜಯನಗರ 5ನೇ ಬ್ಲಾಕ್‌ನಲ್ಲಿ-ರುವ ಶಾಲಿನಿ ಆಟದ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿ-ದ್ದು, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಪೀಸ್ ಆಟೊ ಮತ್ತು ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ ಅಧ್ಯಕ್ಷ ರಘು ಎನ್. ನಾರಾಯಣಗೌಡ, ಆದರ್ಶ ಆಟೊ ಮತ್ತು ಟ್ಯಾಕ್ಸಿ ಡ್ರೈವರ್ಸ್ ಯೂನಿಯನ್ ಅಧ್ಯಕ್ಷ ಎಂ. ಮಂಜುನಾಥ್ ಗೌಡ, ಬಿ. ಪ್ಯಾಕ್ ಸದಸ್ಯ ರಾಘವೇಂದ್ರ ಪೂಜಾರಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ. ಸಿ.ಎಸ್. ಅಶ್ವತ್ಥ ನಾರಾಯಣ್, ಸಾರಿಗೆ ಆಯುಕ್ತ ಎ.ಎಂ. ಯೋಗೇಶ್, ಡಿಜಿ ಐಜಿಪಿ ಎಂ.ಎ. ಸಲೀಂ ಪಾಲ್ಗೊಳ್ಳಲಿದ್ದಾರೆ. ಏಳು ಪ್ರಾಮಾಣಿಕ ಚಾಲಕರು, ಹಿರಿಯ ಹಾಗೂ ಮಹಿಳಾ ಆಟೋಚಾಲಕರ ಸೇವೆ ಗೌರವಿಸಿ ಚಿನ್ನದ ಪದಕ ವಿತರಣೆ ಮಾಡಲಾಗುವುದು' ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸುಮಾರು 4 ಸಾವಿರ ಆಟೊ ಚಾಲಕರಿಗೆ ಸಮವಸ್ತ್ರ ವಿತರಣೆ ಮಾಡಲಾಗುತ್ತದೆ. ನಟ ಅಜಯ್ ರಾವ್ ಅವರು ಇಬ್ಬರು ಚಾಲಕರಿಗೆ ಧನಸಹಾಯ ಮಾಡಲಿದ್ದಾರೆ ಎಂದರು.

ಬಿಯರ್ ಬಾಟಲಿಯಿಂದ ಹೊಡೆದು ಸ್ನೇಹಿತನ ಹತ್ಯೆ

ಹಳೇ ದ್ವೇಷದ ವಿಚಾರವಾಗಿ ಮಾತಿನ ಚಕಮಕಿ • ಮೂವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಯರ್ ಬಾಟಲಿಯಿಂದ ಹಲ್ಲೆ ನಡೆಸಿ, ಸ್ನೇಹಿತನನ್ನು ಕೊಲೆ ಮಾಡಿದ್ದ ಮೂವರು ಆರೋಪಿಗಳನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತ್ಯಾಗರಾಜನಗರ ನಿವಾಸಿ ಸುರೇಶ್ (45) ಕೊಲೆಯಾದವರು. ವೇಲು, ನೇತಾಜಿ ಹಾಗೂ ಪ್ರತಾಪ್ ಬಂಧಿತರು.

ಸುರೇಶ್ ಅವರು ಕೂಲಿ ಕೆಲಸ ಮಾಡುತ್ತಿದ್ದರು. ಆರೋಪಿ ವೇಲು ಹೋಟೆಲ್ ನಡೆಸುತ್ತಿದ್ದರು. ನೇತಾಜಿ ಹಾಗೂ ಪ್ರತಾಪ್ ಅವರು ಅದೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಜತೆಗೆ, ವೇಲು ಆಟೊ ರಿಕ್ಷಾವನ್ನು ಓಡಿಸುತ್ತಿದ್ದರು. ಈ ನಾಲ್ವರೂ ಸ್ನೇಹಿತರಾಗಿದ್ದರು ಎಂದು ಮೂಲಗಳು ಹೇಳಿವೆ.


ಸುರೇಶ್


ವೇಲು


ನೇತಾಜಿ


ಪ್ರತಾಪ್

'ಗುರುವಾರ ರಾತ್ರಿ ನಾಲ್ವರೂ ಬಾರ್‌ನಲ್ಲಿ ಪಾರ್ಟಿ ನಡೆಸಿದ್ದರು. ನಂತರ, ಆಟೊದಲ್ಲಿ ನಗರದ ವಿವಿಧೆಡೆ ಸುತ್ತಾಡಿದ್ದರು. ಮದ್ಯದ ಅಮಲಿನಲ್ಲಿ ಶುಕ್ರವಾರ ಮುಂಜಾನೆ ಸುರೇಶ್ ಹಾಗೂ ವೇಲು ಅವರ ನಡುವೆ ಗಲಾಟೆ ನಡೆದಿತ್ತು. ಮಾತಿನ ಚಕಮಕಿ ವಿಕೋಪಕ್ಕೆ ಹೋಗಿ, ಬಿಯರ್ ಬಾಟಲಿಯಿಂದ ವೇಲು ಹಾಗೂ ಆತನ ಸಹಚರರು ಸುರೇಶ್ ಅವರ ಮೇಲೆ ಹಲ್ಲೆ ನಡೆಸಿ ಪರಾರಿ ಆಗಿದ್ದರು. ಹಲ್ಲೆಗೊಳಗಾದ ಸುರೇಶ್ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹಳೇ ದ್ವೇಷದ ವಿಚಾರವಾಗಿ ಮಾತಿನ ಚಕಮಕಿ ನಡೆದಿದೆ ಎಂದು ಹೇಳಲಾಗಿದೆ. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಪತ್ನಿ ಕೊಂದ ಪತಿಯ ಬಂಧನ

ಬೆಂಗಳೂರು: ಪತ್ನಿ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ್ದ ಪತಿಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಪಾವಗಡದ ಅಮೃತಹಳ್ಳಿಯ ಗಂಗಮ್ಮ ಬಡಾವಣೆ ನಿವಾಸಿ ಅಂಜಲಿ (25) ಕೊಲೆಯಾದವರು. ಇವರ ಪತಿ ಸುರಪುರದ ರವಿಚಂದ್ರ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಕೊಲೆಯಾದ ಅಂಜಲಿ ಅವರು ತರಕಾರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ರವಿಚಂದ್ರ ಟ್ರಾವೆಲ್ ಏಜೆನ್ಸಿಯಲ್ಲಿ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಅಂಜಲಿ ಹಾಗೂ ರವಿಚಂದ್ರ ಇಬ್ಬರಿಗೂ ಇದು 2ನೇ ವಿವಾಹವಾಗಿದೆ. ವಿವಾಹವಾದ ಆರಂಭದಲ್ಲಿ ಕೌಟುಂಬಿಕ ಜೀವನ ಉತ್ತಮವಾಗಿತ್ತು. ಬಳಿಕ, ದಂಪತಿ ಮಧ್ಯೆ ಗಲಾಟೆ ಆರಂಭವಾಗಿತ್ತು' ಎಂದು ಪೊಲೀಸರು ಹೇಳಿದರು.


ರವಿಚಂದ್ರ


ಅಂಜಲಿ

'ಪತ್ನಿಯ ಬಗ್ಗೆ ಅನುಮಾನ ವ್ಯಕ್ತಪಡಿಸಿ ರವಿಚಂದ್ರ ಗುರುವಾರ ರಾತ್ರಿ ಗಲಾಟೆ ಮಾಡಿದ್ದರು. ಅದು ವಿಕೋಪಕ್ಕೆ ಹೋಗಿ ಪತ್ನಿಯ ಮೇಲೆ ಹಲ್ಲೆ ನಡೆಸಿ ಪರಾರಿ ಆಗಿದ್ದರು. ಮಾಹಿತಿ ತಿಳಿದು ಕೃತ್ಯ ನಡೆದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದಾಗ ಅಂಜಲಿ ಅವರಿಗೆ ಜೀವ ಇರುವುದು ಕಂಡುಬಂದಿತ್ತು. ಕೂಡಲೇ ಅಮೃತಹಳ್ಳಿ ಠಾಣೆಯ ಪೊಲೀಸರು ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಗಂಭೀರವಾಗಿ ಹಲ್ಲೆಗೆ ಒಳಗಾಗಿದ್ದ ಅವರು ಮೃತಪಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

'ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಕಳೆದ 2–3 ದಿನಗಳಿಂದ ಅಂಜಲಿ ಅವರು ಮನೆಗೆ ಬಾರದೇ ಬೇರೆ ವ್ಯಕ್ತಿಯ ಜೊತೆಗೆ ಸುತ್ತಾಡುತ್ತಿದ್ದರು. ಆ ಕುರಿತು ಪ್ರಶ್ನಿಸಿದಾಗ ಗಲಾಟೆ ಆಗಿತ್ತು. ಹಲ್ಲೆ ನಡೆಸಿದ್ದೆ ಎಂಬುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿದ್ಯಾರ್ಥಿಗಳಿಗೆ ಮಂಜೂರಾದ ಹಣ ತಮ್ಮ ಖಾತೆಗಳಿಗೆ ವರ್ಗ: ಇಬ್ಬರ ಸೆರೆ

ಬೆಂಗಳೂರು: ನಗರದ ಸಿ.ವಿ.ರಾಮನ್ ರಸ್ತೆಯ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌'ನ (ಐಐಎಸ್‌ಸಿ) ವಿದ್ಯಾರ್ಥಿಗಳಿಗೆ ಮಂಜೂರಾದ ಹಣವನ್ನು ತಮ್ಮ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದ ಇಬ್ಬರು ಸಿಬ್ಬಂದಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾರ್ಯದರ್ಶಿ ವಿ.ಸೌಂದರ್ಯ ಹಾಗೂ ಸಹಾಯಕಿ ಆರ್.ವೀಣಾ ಬಂಧಿತರು. ಇಬ್ಬರೂ ಹೊರಗುತ್ತಿಗೆ ಸಂಸ್ಥೆ ವೆಂಕಟೇಶ್ವರ ಎಂಟರ್‌ಪ್ರೈಸಸ್ ಮೂಲಕ ನೇಮಕಗೊಂಡು ಐಐಎಸ್‌ಸಿಯಲ್ಲಿ ಕೆಲಸ ಮಾಡುತ್ತಿದ್ದರು.

ಸಂಸ್ಥೆಯ ರಿಜಿಸ್ಟ್ರಾರ್ ಶ್ರೀಧರ್ ವಾರಿಯರ್ ಅವರು ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್‌ಗಳಾದ 61(2), 314, 316(5), 336(3), 340((2), ಆರ್‌ಡಬ್ಲ್ಯು 3(5) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಅಕ್ರಮ ಎಸಗಿರುವುದು ಪತ್ತೆ ಆಗಿದೆ. ಬಳಿಕ ಇಬ್ಬರನ್ನೂ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ವಿದ್ಯಾರ್ಥಿಗಳ ವಿದೇಶಿ ಪ್ರಯಾಣ ಶುಲ್ಕ ಪಾವತಿಸಬೇಕಾದ ಮೊತ್ತದ ಹಣವನ್ನು ಇಬ್ಬರೂ ಬಂಧಿತ ಆರೋಪಿಗಳು ದುರ್ಬಳಕೆ ಮಾಡಿಕೊಂಡಿದ್ದರು. ಹಣ ಮಂಜೂರಾತಿ ಆದೇಶಗಳನ್ನು ತಿರುಚಿ, ವಿದ್ಯಾರ್ಥಿಗಳ ಬ್ಯಾಂಕ್ ಖಾತೆ ವಿವರಗಳನ್ನು ಕಾನೂನುಬಾಹಿರವಾಗಿ ಬದಲಾಯಿಸಿಕೊಂಡಿದ್ದರು. ಹಣವನ್ನು ತಮ್ಮ ಕುಟುಂಬದ ಸದಸ್ಯರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು. ಕಾಲೇಜಿನ ಆಂತರಿಕ ತನಿಖೆಯಲ್ಲಿ ಇಬ್ಬರು ಹಣ ದುರ್ಬಳಕೆ ಮಾಡಿಕೊಂಡಿರುವುದು ಪತ್ತೆ ಆಗಿತ್ತು. ಸಂಸ್ಥೆಯ ಅಧಿಕಾರಿಗಳ ಮುಂದೆಯೂ ಆರೋಪಿ ಕೃತ್ಯ ಎಸಗಿರುವುದನ್ನು ಒಪ್ಪಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಇನ್‌ಸ್ಟಾಗ್ರಾಂ ಖಾತೆದಾರರ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಉದ್ದೇಶದಿಂದ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ವಿಡಿಯೊ ಸೃಷ್ಟಿಸಿದ್ದ ಆರೋಪದ ಅಡಿ 'ಕನ್ನಡ ಚಿತ್ರದುರ್ಗ' ಎನ್ನುವ ಇನ್‌ಸ್ಟಾಗ್ರಾಂ ಖಾತೆಯ ವಿರುದ್ಧ ಇಲ್ಲಿನ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಾಗಿದೆ.

ಸಿ.ಆರ್.ದೀಪು ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಇನ್‌ಸ್ಟಾಗ್ರಾಂ ಖಾತೆದಾರರ ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಸಮಾಜದಲ್ಲಿ ಕೆಟ್ಟ ಅಭಿಪ್ರಾಯ ಮೂಡಿಸುವಂತೆ ವಿಡಿಯೊವನ್ನು ಎಡಿಟ್ ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಪ್ರಸಾರ ಮಾಡಲಾಗಿದೆ. ಶಿವಕುಮಾರ್ ವ್ಯಕ್ತಿತ್ವಕ್ಕೆ ಧಕ್ಕೆ ತರುವ ಉದ್ದೇಶ ಹಾಗೂ ಸಮಾಜಕ್ಕೆ ಸುಳ್ಳು ಮಾಹಿತಿ ಬಿತ್ತಿರಿಸುವ ಉದ್ದೇಶದಿಂದ ಈ ರೀತಿ ಕೃತ್ಯ ಎಸಗಲಾಗಿದೆ. ಸರ್ಕಾರಕ್ಕೂ ಮುಜುಗರ ಉಂಟು ಮಾಡಿರುತ್ತಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಠಾಣೆ ಎದುರು ರೌಡಿಶೀಟರ್ ಆತ್ಮಹತ್ಯೆ ಯತ್ನ

ಬೆಂಗಳೂರು: 'ಪತ್ನಿ ಮೋಸ ಮಾಡಿದ್ದಾಳೆ' ಎಂದು ಆರೋಪಿಸಿ ರೌಡಿಶೀಟರ್‌ವೊಬ್ಬರು ಸಂಪಿಗೆಹಳ್ಳಿ ಪೊಲೀಸ್ ಠಾಣೆ ಎದುರು ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.

ಮೊಹಮ್ಮದ್ ಸಿದ್ದಿಕಿ ಅಲಿಯಾಸ್ 'ಬರ್ನ್ ಸಿದ್ದಿಕಿ' ಆತ್ಮಹತ್ಯೆಗೆ ಯತ್ನಿಸಿದವರು. ಗುರುವಾರ ರಾತ್ರಿ ಬಾಟಲಿಯೊಂದರಲ್ಲಿ ಪೆಟ್ರೋಲ್ ತುಂಬಿಕೊಂಡು ಠಾಣೆ ಬಳಿಗೆ ಸಿದ್ದಿಕಿ ಬಂದಿದ್ದರು. ಪೆಟ್ರೋಲ್ ಸುರಿದುಕೊಂಡು, ನಂತರ ಲೈಟರ್‌ನಿಂದ ಬೆಂಕಿ ಹಚ್ಚಿಕೊಂಡಿದ್ದರು. ಸ್ಥಳದಲ್ಲಿದ್ದ ಪೊಲೀಸರು ಸಿದ್ದಿಕಿ ಅವರನ್ನು ರಕ್ಷಣೆ ಮಾಡಿದರು.

ಸಿದ್ದಿಕಿ ಅವರ ದೇಹದ ಶೇ 10ರಷ್ಟು ಭಾಗ ಸುಟ್ಟಿದೆ. ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಸಿದ್ದಿಕಿ ಅವರ ವಿರುದ್ಧ ದೂರು ನೀಡಲು ಠಾಣೆಗೆ ಪತ್ನಿ ಬಂದಿದ್ದರು. ಅದರ ಮಾಹಿತಿ ತಿಳಿದು ಸ್ಥಳಕ್ಕೆ ಬಂದಿದ್ದ ರೌಡಿಶೀಟರ್, ಠಾಣೆ ಎದುರು ಆತ್ಮಹತ್ಯೆಗೆ ಯತ್ನಿಸಿದ್ದರು.

'ಕರ್ತವ್ಯನಿರತ ಪೊಲೀಸರಿಗೆ ಬೆದರಿಕೆ ಹಾಕಿದ್ದರಿಂದ ಮೊಹಮ್ಮದ್ ಸಿದ್ದಿಕಿ ವಿರುದ್ಧ ಸಂಪಿಗೆಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಕೆ.ಜಿ.ಹಳ್ಳಿ ಠಾಣೆ ವ್ಯಾಪ್ತಿಯ ರೌಡಿಶೀಟರ್ ಆಗಿರುವ ಮೊಹಮ್ಮದ್ ಸಿದ್ದಿಕಿ ವಿರುದ್ಧ ರಾಬರಿ, ಕೊಲೆ, ಕೊಲೆ ಯತ್ನ ಸೇರಿ ಕೆಲವು ಅಪರಾಧ ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ಹೇಳಿದರು.

'ತುರ್ತು ಪರಿಸ್ಥಿತಿ: ಮಹನೀಯರ ಒಡನಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ್ದರಿಂದ ಜೈಲು ಶಿಕ್ಷೆ ಅನುಭವಿಸಬೇಕಾಯಿತು. ಈ ಜೈಲುವಾಸವು ಲಾಲ್ ಕೃಷ್ಣ ಅಡ್ವಾಣಿ, ಮಧು ದಂಡವತೆ, ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್, ದತ್ತಾತ್ರೇಯ ಹೊಸಬಾಳೆಯಂಥ ಮಹನೀಯರ ಒಡನಾಟ ಸಿಗಲು ಕಾರಣವಾಯಿತು' ಎಂದು ಶಾಸಕ ಸುರೇಶ್ ಕುಮಾರ್ ನೆನಪು ಮಾಡಿಕೊಂಡರು.

'ತುರ್ತು ಪರಿಸ್ಥಿತಿಯ ನಮ್ಮ ಆ ಬಂಧನದ 50 ವರ್ಷದ ನೆನಪು' ಕಾರ್ಯಕ್ರಮದಲ್ಲಿ ಶುಕ್ರವಾರ ಅವರು ಮಾತನಾಡಿದರು.

'15 ತಿಂಗಳ ಜೈಲುವಾಸ ನನಗೆ ಜೀವನದ ಹೊಸ ನೀತಿ ಪಾಠ ಕಲಿಸಿತು. ಪ್ರಜಾಪ್ರಭುತ್ವ ವಿರೋಧಿ ತುರ್ತುಪರಿಸ್ಥಿತಿಯ ಕರಾಳ ದಿನಗಳು, ಅಂದು ಅನುಭವಿಸಿದ ಸಂಕಷ್ಟಗಳು, ಹೋರಾಟ ಇಂದಿಗೂ ಮರೆಯುವಂತಿಲ್ಲ' ಎಂದು ತಿಳಿಸಿದರು.


ಸುರೇಶ್ ಕುಮಾರ್

'ಬೆಂಗಳೂರಿನ ಹೋಟೆಲ್ ಲಲಿತ್ ಅಶೋಕ್ ಆವರಣದಲ್ಲಿ 1975ರ ನವೆಂಬರ್ 7ರಂದು ಕರಾಳ ತುರ್ತುಪರಿಸ್ಥಿತಿಯ ನೈಜ ಪರಿಸ್ಥಿತಿಯನ್ನು ಕಾಮನ್ ವೆಲ್ತ್ ದೇಶಗಳ ಪ್ರತಿನಿಧಿಗಳಿಗೆ ವಿವರಿಸಲು ಕರಪತ್ರ ನೀಡಲು ಹೋದಾಗ ಬಂಧಿಸಿದ್ದರು. ನನ್ನ ಜೊತೆಯಲ್ಲಿ ಗೆಳೆಯರಾದ ಗೋವರ್ಧನ್, ಡಿ.ಜೆ.ಸುರೇಶ್ ಅವರನ್ನೂ ಬಂಧಿಸಲಾಗಿತ್ತು. ಪೊಲೀಸ್ ಠಾಣೆಯಲ್ಲಿ 12 ಪೊಲೀಸರು ಒದ್ದರು. ಬಾಯಿಬಿಡಿಸಲು ಏರೋಪ್ಲೇನ್ ಹತ್ತಿಸಿದ್ದರು. ಫುಟ್‌ಬಾಲ್‌ನಂತೆ ಒದ್ದು ಚಿತ್ರಹಿಂಸೆ ನೀಡಿದ್ದರು. ಐದು ಅಡಿ ಜಾಗದ ಲಾಕಪ್‌ನಲ್ಲಿ ಕೂಡಿಹಾಕಿದ್ದರು' ಎಂದು ಹೇಳಿದರು.

'ನನ್ನ ತಾಯಿ ಹೇಬಿಯಸ್ ಕಾರ್ಪಸ್ ಅರ್ಜಿ ಹಾಕಿದರು. ನಂತರ ನನ್ನನ್ನು ಪೊಲೀಸ್ ಕಮಿಷನರ್ ಕಚೇರಿಗೆ ಕರೆದುಕೊಂಡು ಹೋಗಿ ಫೋಟೊ ತೆಗೆಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ಅಲ್ಲಿಂದ 15 ತಿಂಗಳು ಜೈಲುವಾಸ ಅನುಭವಿಸಿದೆ' ಎಂದು ವಿವರಿಸಿದರು.

ಬಿಜೆಪಿ ಮುಖಂಡರಾದ ರಂಗಣ್ಣ, ಸುದರ್ಶನ್, ಪ್ರಧಾನ ಗಿರೀಶ್ ಗೌಡ, ರಾಜಣ್ಣ, ಎಚ್.ಆರ್. ಕೃಷ್ಣಪ್ಪ, ವಿಜಯಕುಮಾರ್, ಕಾಮಧೇನು ಸುರೇಶ್, ಗಂಗಾಧರ್, ಸುನೀಲ್ ಶಿವಾನಂದ್ ಹಾಗೂ ಗೌತಮ್ ಭಾಗವಹಿಸಿದ್ದರು.

ನಗರದಲ್ಲಿ ಇಂದು


'ಸಮ:2025–26' ಶಾಸ್ತ್ರೀಯ ಸಂಗೀತ, ಹಾಸ್ಯ ಸಂವಾದ, ವೇದಪಾರಾಯಣ: ಆಯೋಜನೆ: ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 9ರಿಂದ

ದಿ ಕಾಂ ಡೀಲ್ ಟ್ರಸ್ಟ್ ರಜತ ಮಹೋತ್ಸವದ ಎರಡನೇ ದಿನದ ಕಾರ್ಯಕ್ರಮ: ಸನ್ಮಾನ ಮತ್ತು ಕೈಪಿಡಿಗಳ ಬಿಡುಗಡೆ, ಪ್ರಮುಖರೊಂದಿಗೆ ಚರ್ಚೆ, ಸಲಹಾ ಮಂಡಳಿಯ ಪ್ರತಿಕ್ರಿಯೆ: ಆಯೋಜನೆ: ದಿ ಕಾಂ ಡೀಲ್ ಟ್ರಸ್ಟ್ (ಟಿಸಿಡಿಟಿ), ಸ್ಥಳ: ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 9

ರಾಜ್ಯಮಟ್ಟದ ಮಹಿಳಾ ಕನ್ನಡ ಸಾಹಿತ್ಯ, ಸಂಸ್ಕೃತಿ ಆರನೇ ಸಮಾವೇಶ: ಸರ್ವಾಧ್ಯಕ್ಷೆ: ಪುಷ್ಪಾ ಬಸವರಾಜ ಬಣಕಾರ್, ಕನ್ನಡ ಪುಸ್ತಕ, ಧ್ವನಿಸುರುಳಿ ಪ್ರದರ್ಶನ, ಮಾರಾಟ ಮಳಿಗೆಗಳಿಗೆ ಚಾಲನೆ: ಅಂಬುಜಾ ಪ್ರಕಾಶ್, ಸವಿತಾ ರಾಮು, ಶ್ರೀನಿವಾಸ ಗುಪ್ತ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ: ಎಂ.ಎಸ್. ಆಶಾಲತಾ, ಅತಿಥಿಗಳು: ಎನ್. ಶ್ರೀದೇವಿ, ಬಿ.ವಿ. ಲವಕುಮಾರ್, ಚೌಡಯ್ಯ, ಸಮಾವೇಶದ ಉದ್ಘಾಟನೆ: ಕೆ. ಷರೀಫಾ, ಅತಿಥಿಗಳು: ಎಸ್.ಎಲ್. ಭೋಜೇಗೌಡ, ಕೆ. ಕೃಷ್ಣಮೂರ್ತಿ ಪೂಜಾರಿ ಪಾಳ್ಯ, ನಂಜಪ್ಪ ಕಾಳೇಗೌಡ, ಮಂಗಳಗೌರಿ ಅರಸು, ಎಸ್. ರಾಮಲಿಂಗೇಶ್ವರ, ವಿಚಾರಗೋಷ್ಠಿ, ಕವಿಗೋಷ್ಠಿ: ಆಶಯನುಡಿ: ಜಯಶ್ರೀ ರಾಜು, ಅಧ್ಯಕ್ಷತೆ: ಶಾಂತಿ ವಾಸು, ಉಪನ್ಯಾಸ: ಎಂ. ಪ್ರಿಯದರ್ಶಿನಿ, ಜಿ.ನಿ.

ಸಮಾಜಮುಖಿ ಸಾಹಿತ್ಯ ಸಮ್ಮೇಳನ

ಐದು ವೇದಿಕೆಗಳಲ್ಲಿ ಕಾರ್ಯಕ್ರಮ: ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ


ಹಂಪ ನಾಗರಾಜಯ್ಯ

ಬೆಳಿಗ್ಗೆ 10: ಉದ್ಘಾಟನೆ: ಹಂಪ ನಾಗರಾಜಯ್ಯ, ಬರಗೂರು ರಾಮಚಂದ್ರಪ್ಪ, ಎಚ್.ಎಸ್. ಶಿವಪ್ರಕಾಶ್. ಸಮಾಜಮುಖಿ ಬಯಲು ಚಿತ್ರಕಲಾ ಶಿಬಿರ

ಬೆಳಿಗ್ಗೆ 11.30: ಹಳಗನ್ನಡ ಸಾಹಿತ್ಯ– ಹಿಂದಣ ಹೆಜ್ಜೆಯನರಿತಲ್ಲದೇ ಗೋಷ್ಠಿ: ಆಶಯ ನುಡಿ: ಹಂಪ ನಾಗರಾಜಯ್ಯ, ಅವಸರವು ತಕ್ಷಣದ ಬೆನ್ನೇರಿದಾಗ: 21ನೇ ಶತಮಾನದಲ್ಲಿ ಕಥಾ ನಿರೂಪಣೆಯ ಸವಾಲುಗಳು: ಬಸವರಾಜ ಕಲ್ಗುಡಿ, ಸ್ವಾಮಿ ಪೊನ್ನಾಚಿ, ಎಸ್. ಗಂಗಾಧರಯ್ಯ, ವರ್ತಮಾನದ ಚಿತ್ರಕಲೆ ಕುರುಹನಳಿಸುವ ಅರಿವು–ಅರಿವನಳಿಸುವ ಕುರುಹು: ರಮೇಶ್‌ಚಂದ್ರ, ಗಾಯತ್ರಿ ದೇಸಾಯಿ, ಸತೀಶ್ ದಾವಣಗೆರೆ,

ಮಧ್ಯಾಹ್ನ 12.30: ಅನುಭವ ಲೋಕದ ಸೃಜನಶೀಲತೆ– ಪೂರ್ಣಚಂದ್ರ ತೇಜಸ್ವಿ, ಸತ್ಯಜಿತ್ ರೇ: ಗಿರೀಶ್ ಕಾಸರವಳ್ಳಿ, ವಿದ್ಯಾಶಂಕರ್, ಈರೇಗೌಡ, ಚಟ ಹಿಡಿಯದ ಚಾಳಿ: ಚ.ಹ. ರಘುನಾಥ, ಎಸ್. ಆರ್. ವಿಜಯಶಂಕರ್, ಎಂ.ಎಸ್. ಆಶಾದೇವಿ, ಕನ್ನಡ ಕತ್ತುರಿಯಲ್ತೇ: ರಾಜಪ್ಪ ದಳವಾಯಿ, ಪದ್ಮಿನಿ ನಾಗರಾಜು, ಕಾ.ವೆಂ. ಶ್ರೀನಿವಾಸಮೂರ್ತಿ, ಹೊಸತಲೆಮಾರಿನ ಸಂಗೀತ: ಎಂ.ಡಿ. ಪಲ್ಲವಿ, ರೂಮಿ ಹರೀಶ್, ಎಸ್.ಆರ್. ರಾಮಕೃಷ್ಣ,

ಮಧ್ಯಾಹ್ನ 2.15: ಕನ್ನಡ ಭಾಷಾ ಬಿಕ್ಕಟ್ಟುಗಳು: ರಾಜೇಂದ್ರ ಚೆನ್ನಿ, ಪುರುಷೋತ್ತಮ ಬಿಳಿಮಲೆ, ಎಲ್.ಎನ್. ಮುಕುಂದರಾಜ್, ಸಂತೋಷ್ ನಾಯಕ್, ರವೀಂದ್ರ ಭಟ್ಟ, ವಸಂತ ಶೆಟ್ಟಿ, ಎಸ್. ಚಂದ್ರಶೇಖರ್, ವೆಂಕಟೇಶ್ ಮಾಚಕನೂರ. ದಲಿತ ಸಾಹಿತ್ಯ: ದು. ಸರಸ್ವತಿ, ಸಬಿಹಾ ಭೂಮಿಗೌಡ, ಎಲ್ ಹನುಮಂತಯ್ಯ, ಎನ್.ಕೆ. ಲೋಲಾಕ್ಷಿ, ಕುಲಂ ಕುಲಮಲ್ಲು: ಜಯಪ್ರಕಾಶ್ ಶೆಟ್ಟಿ, ಬಸವರಾಜ ಕಲ್ಗುಡಿ, ಚಂದ್ರಶೇಖರ ನಂಗಲಿ, ವರ್ತಮಾನದ ಸಿನಿಮಾ: ಕೆ.ಎಂ. ಚೈತನ್ಯ, ಚಂಪಾಶೆಟ್ಟಿ, ಬಿ.ಎಂ. ಗಿರಿರಾಜ್, ನಡೆದಂತೆ ನುಡಿವ ವಚನ: ಮೀನಾಕ್ಷಿ ಬಾಳಿ, ಬಸವರಾಜ ಸಾದರ, ಎಸ್.ಜಿ. ಸಿದ್ದರಾಮಯ್ಯ, ಅಸಾಮಾನ್ಯರ ಅಬ್ಬರದಲ್ಲಿ ಶ್ರೀಸಾಮಾನ್ಯರ ಹುಡುಕಾಟ: ಎನ್.ಆರ್. ಲಲಿತಾಂಬ, ಶೋಭಾರಾಣಿ, ನಟರಾಜ ತಲಘಟ್ಟಪುರ.

ಸಂಜೆ 4.15: ಅಂಬೇಡ್ಕರ್ ಮತ್ತು ಗಾಂಧಿ ಚಿಂತನೆಗಳೊಡನೆ ಕನ್ನಡ ಸಾಹಿತ್ಯದ ಅನುಸಂಧಾನ: ಎಸ್. ಚಂದ್ರಶೇಖರ್, ಗೀತ ವಸಂತ, ಬಿ.ಎಂ. ಪುಟ್ಟಯ್ಯ, ಡಿ.ಆರ್. ದೇವರಾಜ್, ರಾಘವೇಂದ್ರ ಖಾಸನೀಸರ ಕಥೆಗಳ ಮರುವಿಮರ್ಶೆ: ಕೆ. ಸತ್ಯನಾರಾಯಣ, ಫಾತಿಮಾ ರಲಿಯಾ, ಸಿರಾಜ್ ಅಹ್ಮದ್, ರವಿಕುಮಾರ್ ನೀಹ. ಹರಿಹರ ಕವಿಯ ಕ್ರಾಂತಿಯ ನೆಲೆಗಳು: ಸಿ.ಕೆ. ಜಗದೀಶ, ಎಸ್. ಪೂರ್ಣಿಮಾ, ಕುಸುಮಾ ಸಿ.ಆರ್., ಪರಿಸರ ಪತ್ರಿಕೋದ್ಯಮ ಮತ್ತು ಛಾಯಾಗ್ರಹಣದ ಅಂತಃಕರಣ: ವಿನೋದ್ ನಾಯಕ್, ರಶ್ಮಿ ಎಸ್.ಮ ಕೆ. ಮನು.

ಸಂಜೆ 6.30: ಸಾಂಸ್ಕೃತಿಕ ಕಾರ್ಯಕ್ರಮ

ಮಹೇಶ್ವರಿ, ಅತಿಥಿಗಳು: ಶರತ್‌ಚಂದ್ರ ಜಿ. ರಾನಡೆ, ಎಸ್. ಗುಣಸಾಗರಿ ಸಿ. ನಾಗರಾಜ್, ಲೀಲಾ ವಾಸುದೇವ್, ಪುಟ್ಟಸ್ವಾಮಿ, ವಿವಿಧ ಪ್ರಶಸ್ತಿ ಪ್ರದಾನ, ಸಮಾರೋಪ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಅನಿಕೇತನ ಕನ್ನಡ ಬಳಗ, ಬಿ. ಕೃಷ್ಣಪ್ಪ ಟ್ರಸ್ಟ್, ಸ್ಥಳ: ಶೇಷಾದ್ರಿಪುರ ಕಾಲೇಜಿನ ದತ್ತಿ ಸಭಾಂಗಣ, ಬೆಳಿಗ್ಗೆ 9.45

ಮನೋತ್ಸವ: ಅತಿಥಿಗಳು: ರಿಚಿ ಡೇವಿಡ್‌ಸನ್, ಕಿರಣ್ ಮಜುಂದಾರ್ ಷಾ, ರೋಹಿಣಿ ನಿಲೇಕಣಿ, ಡಾ. ಪ್ರತಿಮಾ ಮೂರ್ತಿ, ಅಮಿತ್ ಮಲಿಕ್, ಆಯೋಜನೆ: ರೋಹಿಣಿ ನಿಲೇಕಣಿ ಫಿಲಾಂತ್ರೊಪಿಸ್ ಫೌಂಡೇಷನ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಸಂಸ್ಥೆ, ಸ್ಥಳ: ಲಲಿತ್ ಅಶೋಕ್ ಹೋಟೆಲ್, ಕುಮಾರಕೃಪ ರಸ್ತೆ, ಬೆಳಿಗ್ಗೆ 10

ಪುಸ್ತಕಗಳ ಬಿಡುಗಡೆ: ಜನಾರ್ಪಣೆ: ಜೋಗಿ, ಅತಿಥಿಗಳು: ಎನ್.ಎಸ್. ಶ್ರೀಧರಮೂರ್ತಿ, ಟೀನಾ ಶಶಿಕಾಂತ್, ಕೃತಿಕಾರರು: ಗಜಾನನ ಶರ್ಮ, ಪ್ರತಿಭಾ ನಂದಕುಮಾರ್, ವೈಎನ್‌ಕೆ, ಬೇಲೂರು ರಾಮಮೂರ್ತಿ, ಶರತ್ ಭಟ್ ಸೇರಾಜೆ, ಸದಾಶಿವ ಸೊರಟೂರು, ಆಯೋಜನೆ: ಅಂಕಿತ ಪ್ರಕಾಶನ, ಸ್ಥಳ: ಸುಚಿತ್ರ ಸಭಾಂಗಣ, 9ನೇ ಮುಖ್ಯರಸ್ತೆ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10.30

ಭಾರತೀಯ ದೃಷ್ಟಿಕೋನದಿಂದ ಸಾಂವಿಧಾನಿಕ ಆಡಳಿತ ಮತ್ತು ಸಾರ್ವಜನಿಕ ನೀತಿ ಬಗ್ಗೆ ಡಾ. ಕೆ.ಸಿ. ರಾಮಮೂರ್ತಿ ದತ್ತಿ ಉಪನ್ಯಾಸ: ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಉಪನ್ಯಾಸ: ನ್ಯಾ. ಅರವಿಂದ ಕುಮಾರ್, ಆಯೋಜನೆ: ಸಿಎಂಆರ್ ವಿಶ್ವವಿದ್ಯಾಲಯ, ಸ್ಥಳ: ಒಎಂಬಿಆರ್ ಕ್ಯಾಂಪಸ್, ಬೆಳಿಗ್ಗೆ 11

ಶಬರಾರ್ಜುನ–ಯಕ್ಷಗಾನ: ಆಯೋಜನೆ: ಸಿದ್ಧಿವಿನಾಯಕ ದುರ್ಗಾಂಬಾ ಯಕ್ಷಗಾನ ಮಿತ್ರಮಂಡಳಿ, ಹುಕ್ಲಮಕ್ಕಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಸ್ಥಳ: ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಸಂಜೆ 4

ನಾಟಕ ಪ್ರದರ್ಶನ: ಸಂಜೆ 4ಕ್ಕೆ 'ಮಿಸ್ಟರ್ ರಾವ್', ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ಸಂಜೆ 7ಕ್ಕೆ 'ಬಾಯ್ ಬಡ್ಡಿ', ರಚನೆ–ನಿರ್ದೇಶನ: ಭೀಷ್ಮ ರಾಮಯ್ಯ, ಆಯೋಜನೆ: ಅಂತರಂಗ ಬಹಿರಂಗ ರಂಗತಂಡ, ಸ್ಥಳ: ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ.

'ರಾಷ್ಟ್ರೀಯ ಸ್ವಯಂಸೇವಕ ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಉಪನ್ಯಾಸಮಾಲೆ: ಉಪನ್ಯಾಸ:ಮೋಹನ್ ಭಾಗವತ್, ಸ್ಥಳ ಮತ್ತು ಆಯೋಜನೆ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ ಹೊಸಕೆರೆಹಳ್ಳಿ ವರ್ತುಲ ರಸ್ತೆ, ಸಂಜೆ 4

ಕಡಲೆಕಾಯಿ ಪರಿಷೆ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಬಿ.ಕೆ. ಹರಿಪ್ರಸಾದ್, ವೆಂಕಟಮ್ಮ ಮಟ್ಟ ಬಾರ್ಲು, ಸರೋಜಮ್ಮ ಬನ್ನಪ್ಪ. 'ಸ್ನೇಹದ ಕಡಲಲ್ಲಿ' ಸವಿತಾ ಗಣೇಶ್ ಪ್ರಸಾದ್ ನೇತೃತ್ವದಲ್ಲಿ ಪುಟ್ಟಣ್ಣ ನೆನಪುಗಳ ಹಾಡು. ಅತಿಥಿಗಳು: ವಿಜಯಾನಂದ ಎಸ್. ಕಾಶಪ್ಪನವರ, ವೀರಕಪುತ್ರ ಎಂ. ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ಕಾಡುಮಲ್ಲೇಶ್ವರ ಗೆಳೆಯರ ಬಳಗ, 15ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5

ಪ್ರಜ್ಞಾ ಗುರುಕುಲದ ನೆರವಿಗಾಗಿ ಸಂಗೀತ ಕಾರ್ಯಕ್ರಮ: ಗಾಯನ: ಭಾರ್ಗವಿ ವೆಂಕಟ್ರಾಮ್, ಪಿಟೀಲು ವಿಷ್ಣು ವೆಂಕಟ್ರಾಮ್, ಭಾರತೀಯ ತಾಳವಾದ್ಯ: ವಿನೋದ ಶ್ಯಾಮ್ ಆನೂರ್, ರಿದಂ ಪ್ಯಾಡ್: ವಿದ್ವಾನ್ ಸಾಯಿ ವಂಶಿ, ಕೀಬೋರ್ಡ್: ವಿಶಾಖ್ ರಾಮಪ್ರಸಾದ್, ಬಾನ್ಸುರಿ: ರಘುನಂದನ್ ರಾಮಕೃಷ್ಣ, 'ಭಗವದ್ಗೀತೆ ಆನ್ ವೀಲ್ಸ್' ವೀಲ್ಚೇರ್‌ನಲ್ಲಿ ವಿಭಿನ್ನ ಸಾಮರ್ಥ್ಯದ ನೃತ್ಯಗಾರರರಿಂದ ಪ್ರದರ್ಶನ, ನಿರ್ದೇಶನ ಮತ್ತು ಸಂಯೋಜನೆ: ಸೈಯದ್ ಸಿರಾಜುದ್ದೀನ್ ಪಾಷ ಆಯೋಜನೆ: ಪ್ರತ್ಯರ್ಪಣಾ ಫೌಂಡೇಷನ್, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5

'ನೂರೊಂದು ನೆನಪು' ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಗೀತ ನಮನ: ಅತಿಥಿಗಳು: ಎಚ್.ಆರ್. ಭಾರ್ಗವ, ಟಿ.ಡಿ. ನಂದಕುಮಾರ್, ಕವಿತಾ ಶರ್ಮ ಸಿ., ಅಧ್ಯಕ್ಷತೆ: ಜಗದೀಶ್ ಕುಮಾರ್ ಜಿ., ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 5.30

ಅರುಂಧತಿ ಮೂರ್ತಿ ನೆನಪಿನಲ್ಲಿ ಸಿತಾರ್ ವಾದನ 'ಸುರ್ ನಾದ್': ಅತಿಥಿಗಳು: ರಾಜೇಶ್ ಮೂರ್ತಿ, ಉಸ್ತಾದ್ ಷಫಿಕ್ ಖಾನ್, ಸತೀಶ್ ಹಂಪಿಹೊಳಿ, ಸಿತಾರ್ ವಾದನ: ಸಮನ್ವಯ ಸರ್ಕಾರ್, ರಾಹುಲ್ ಪ್ರೊಫಲಿ. ಆಯೋಜನೆ: ಸ್ವರತ ರಂಗ್ ಸಂಗೀತ ಅಕಾಡೆಮಿ, ಸಂಜೆ 5.45

ಸಂತಶ್ರೇಷ್ಠ ಕನಕದಾಸರ ಜಯಂತಿ: ಉದ್ಘಾಟನೆ, ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಹಿಂದೂಸ್ಥಾನಿ ಸಂಗೀತ: ಗಾಯನ: ನಾಗರಾಜ ರಾವ್ ಹವಾಲ್ದಾರ್, ಓಂಕಾರನಾಥ ಹವಾಲ್ದಾರ್, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ತಬಲಾ: ಕೇದಾರನಾಥ ಹವಾಲ್ದಾರ್, ಆಯೋಜನೆ: ಶ್ರೀರಾಮ ಲಲಿತ ಕಲಾಮಂದಿರ, ಸ್ಥಳ: ಎಸ್‌ಆರ್‌ಎಲ್‌ಕೆಎಂ ಆಡಿಟೋರಿಯಂ, ಬನಶಂಕರಿ 2ನೇ ಹಂತ, ಸಂಜೆ 6

ಮುತ್ತುಸ್ವಾಮಿ ದೀಕ್ಷಿತರ 250ನೇ ಜನ್ಮವರ್ಷದ ಅಂಗವಾಗಿ ದೀಕ್ಷಿತರ ಜೀವನ, ಸಾಧನೆ, ಉಪಾಸನೆ– ಒಂದು ಪಕ್ಷಿನೋಟ: ಗಾಯನ: ಪ್ರಗಲ್ಭ ಆರ್. ಎಸ್., ಸಹಗಾಯನ: ಕಶ್ಯಪ್ ಶಂಕರ್, ಪಿಟೀಲು: ವಿಭುದೇಂದ್ರ ಸಿಂಹ ಜಿ.ಜಿ., ಮೃದಂಗ: ನಿಶ್ಚಿತ್ ಟಿ.ಆರ್., ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6

ಅಖಂಡ ಭಜನೆ: ಆಯೋಜನೆ: ಶ್ರೀ ಸತ್ಯಸಾಯಿ ಸೇವಾ ಸಂಸ್ಥೆ, ಸ್ಥಳ: ಸಾಯಿ ಕೃಷ್ಣ ಕಲ್ಯಾಣ ಮಂಟಪಂ, ಸತ್ಯ ಸಾಯಿಬಾಬಾ ಆಶ್ರಮ, ಕಾಡುಗೋಡಿ, ಸಂಜೆ 6ರಿಂದ

ಕನಕದಾಸರ ಜಯಂತಿ– ಕರ್ನಾಟಕ ಮತ್ತು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಜುಗಲ್ಬಂದಿ: ಕರ್ನಾಟಕ ಸಂಗೀತ ಗಾಯನ: ಶ್ರೀರಾಮ ಶಾಸ್ತ್ರೀ, ಹಿಂದೂಸ್ಥಾನಿ ಗಾಯನ: ನಿತಿನ್ ರಾಜಾರಾಂ ಶಾಸ್ತ್ರೀ, ಮೃದಂಗ: ಚೇತನ್ ಮೂರ್ತಿ ಡಿ.ಆರ್., ತಬಲ: ಮೇಘಶ್ಯಾಮ ಕೇಶವ. ಆಯೋಜನೆ: ಶ್ರೀಶಾರದಾ ಸಾಂಸ್ಕೃತಿಕ ಸಂಘ, ಎಸ್‌ಬಿಐ ಆಫೀಸರ್ಸ್ ಕಾಲೊನಿ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಶನ್, ಸ್ಥಳ: ಎಸ್‌ಬಿಐ ಆಫೀಸರ್ಸ್ ಕಾಲೊನಿ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಶನ್ ಸಭಾಂಗಣ, ಸಂಜೆ 6.30

ಕೆ.ಕೆ.ಮೂರ್ತಿ ಸ್ಮಾರಕ ಸಂಗೀತೋತ್ಸವ: ಹಿಂದೂಸ್ಥಾನಿ ಸಂಗೀತ ಕಾರ್ಯಕ್ರಮ 'ಸುರಾನ್ ಮೇ ರಸ್ ತುಂ ಹೋ: ಸುರೇಶ್ ಬಾಪಟ್, ನೂಪುರ ಗಡ್ಗಿಲ್, ಅನುಜಾ ಜೊಕಾರ್ಕರ್, ಕೇದಾರ್ ಕೆಲ್ಕರ್, ವ್ಯಾಸ್: ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6

ವಿಕಸಿತ ಭಾರತದೆಡೆಗೆ ಸಂಚಾರ ವಿಸ್ತರಿಸಿದ ವಂದೇ ಭಾರತ



ಹಸಿರು ನಿಶಾನೆ

4 ಹೊಸ ವಂದೇ ಭಾರತ ಎಕ್ಸ್‌ಪ್ರೆಸ್ ರೈಲುಗಳಿಗೆ

- ಎರ್ನಾಕುಲಂ - ಬೆಂಗಳೂರು
- ಬನಾರಸ್ - ಖಜುರಾಹೊ
- ಲಕ್ನೋ - ಸಹರಾನ್ಪುರ್
- ಫಿರೋಜ್‌ಪುರ್ - ದೆಹಲಿ

ಇವರಿಂದ

ನರೇಂದ್ರ ಮೋದಿ

ಪ್ರಧಾನಮಂತ್ರಿ



ಪ್ರಮುಖ ಆಕರ್ಷಣೆಗಳು

- 140 ಸೆಕೆಂಡ್‌ಗಳ ಅವಧಿಯಲ್ಲಿ ಗಂಟೆಗೆ 160 ಕಿಮೀಗೆ ವೇಗವರ್ಧನೆ
- ಶಬ್ದರಹಿತ ಮತ್ತು ಸಮಾನ ವಾಯು ವಿತರಣೆಗೆ ಸುಧಾರಿತ ಉಷ್ಣ ವಾತಾಯನ ಹಾಗೂ ಹವಾನಿಯಂತ್ರಣ ಡಕ್ಟ್ ವ್ಯವಸ್ಥೆ
- ಕವಚ ಉಪಕರಣದ ಸುರಕ್ಷತೆ (ರೈಲು ಡಿಕ್ಕಿ ತಡೆಗಟ್ಟುವ ವ್ಯವಸ್ಥೆ)
- ಐಷಾರಾಮಿ, ಆರಾಮದಾಯಕ, ಸುಗಮ ಮತ್ತು ಸುರಕ್ಷಿತ ಪ್ರಯಾಣ
- ಸ್ಪರ್ಶರಹಿತ ಸೌಲಭ್ಯಗಳೊಂದಿಗೆ ಬಯೋ ವಾಕ್ಯೂಂ ಟಾಯ್ಲೆಟ್‌ಗಳು
- ದಿವ್ಯಾಂಗಜನರ ಅನುಕೂಲಕ್ಕಾಗಿ ಆಸನಗಳ ಹಿಡಿಗಳ ಮೇಲೆ ಬ್ರೈಲ್ ಲಿಪಿಯಲ್ಲಿ ಸೀಟುಗಳ ಸಂಖ್ಯೆ ಮತ್ತು ವಿಶೇಷ ಶೌಚಾಗೃಹ
- ಪ್ರತಿಯೊಂದು ಬೋಗಿಯಲ್ಲೂ ಪ್ರಯಾಣಿಕರಿಗೆ ಮಾಹಿತಿ ಮತ್ತು ಇನ್ಫೋಟೇನ್ಮೆಂಟ್ ವ್ಯವಸ್ಥೆ
- ಎಲ್ಲ ಬೋಗಿಗಳಲ್ಲೂ ಅತ್ಯುತ್ತಮ ಅಗ್ನಿನಿರೋಧಕ ಸುರಕ್ಷತೆ
- ಎಲ್ಲ ಬೋಗಿಗಳಲ್ಲಿ ತುರ್ತು ಬೆಳಕು, ಕಿಟಕಿಗಳು ಮತ್ತು ಸಂವಹನ (ಟಾಕ್‌ಬ್ಯಾಕ್) ಘಟಕಗಳ ವ್ಯವಸ್ಥೆ

ಪ್ರಯೋಜನಗಳು

- ಪ್ರಾದೇಶಿಕ ಸಂಪರ್ಕದ ವರ್ಧನೆ
- ಪ್ರಯಾಣ ಸಮಯದ ಉಳಿತಾಯ
- ಪ್ರಯಾಣಿಕರಿಗೆ ಆಧುನಿಕ, ಆರಾಮದಾಯಕ ಮತ್ತು ಸಮರ್ಥ ಪ್ರಯಾಣದ ಆಯ್ಕೆಗಳ ಲಭ್ಯತೆ
- ಪ್ರಾದೇಶಿಕ ಅಭಿವೃದ್ಧಿ, ಪ್ರವಾಸೋದ್ಯಮ ಮತ್ತು ಆರ್ಥಿಕ ಪ್ರಗತಿಗೆ ಉತ್ತೇಜನ

ಇವರೆಲ್ಲರ ಘನ ಉಪಸ್ಥಿತಿ

ಹೆಚ್.ಡಿ ಕುಮಾರಸ್ವಾಮಿ
ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕಾ ಸಚಿವರು

ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ, ಮಾಹಿತಿ ಮತ್ತು ಪ್ರಚಾರ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು

ಶನಿವಾರ, 8ನೇ ನವೆಂಬರ್, 2025 | ಬೆಳಗ್ಗೆ 8 ಗಂಟೆಗೆ | ಬನಾರಸ್, ಉತ್ತರಪ್ರದೇಶ

ಭಾರತೀಯ ರೈಲ್ವೆ

ಡಿಡಿ ನ್ಯೂಸ್‌ನಲ್ಲಿ ಕಾರ್ಯಕ್ರಮದ ನೇರಪ್ರಸಾರ ವೀಕ್ಷಿಸಿ

www.indianrailways.gov.in

ನಮ್ಮನ್ನು ಅನುಸರಿಸಿ /Railminindia

ನಾನು ನನ್ನ ಕಂದ

ಯಾವುದೇ ವೃತ್ತಿಯಲ್ಲಿ ತೊಡಗಿದ್ದರೂ ಅಮ್ಮ ಅಮ್ಮನೇ. ಆ ಕೆಲಸದಿಂದ ಅಮ್ಮನ 'ಪಾತ್ರ'ಕ್ಕೆ ವಿನಾಯಿತಿಯೇನೂ ಸಿಗುವುದಿಲ್ಲ. ಇಂತಹ ಸವಾಲಿಗೆ ಮುಖಾಮುಖಿಯಾಗಿ, ಉದ್ಯೋಗ ಮತ್ತು ಮಕ್ಕಳ ಪಾಲನೆಯ ನಡುವೆ ಸಮತೋಲನ ಕಾಯ್ದುಕೊಳ್ಳುತ್ತಿರುವ ಕೆಲವು ಅಮ್ಮಂದಿರ ಸ್ವಗತ ಇಲ್ಲಿದೆ. ಇದು ಈ ಬಾರಿಯ 'ಮಕ್ಕಳ ದಿನಾಚರಣೆ'ಗೆ 'ಭೂಮಿಕಾ'ದ ವಿಶೇಷ.

ಉದ್ಯೋಗವೂ ಮುಖ್ಯ ಮಕ್ಕಳೂ ಮುಖ್ಯ

ಮಕ್ಕಳ ಜೊತೆ ಎಷ್ಟು ಸಮಯ ಕಳೆಯುತ್ತೇವೆ ಎಂಬುದಕ್ಕಿಂತ ಎಷ್ಟು ಅರ್ಥಪೂರ್ಣವಾಗಿ ಕಳೆಯುತ್ತೇವೆ ಎಂಬುದು ಮುಖ್ಯ. ಕೆಲಸದ ಒತ್ತಡದ ನಡುವೆಯೂ ಬಿಡುವು ಮಾಡಿಕೊಂಡು ಪೋಷಕರ ಸಭೆಗಳಲ್ಲಿ ಭಾಗವಹಿಸುತ್ತೇನೆ, ಶಾಲಾ ಚಟುವಟಿಕೆಗಳು ಮತ್ತು ಸ್ಪರ್ಧೆಗಳಿಗೆ ನಾನೇ ಮಗನನ್ನು ಕರೆದುಕೊಂಡು ಹೋಗುತ್ತೇನೆ. ವಾರಾಂತ್ಯದಲ್ಲಿ ಆಟವಾಡಲು ಕರೆದೊಯ್ಯುವ ಮೂಲಕ ಅವನೊಟ್ಟಿಗೆ ಸಮಯ ಕಳೆಯುತ್ತೇನೆ.

ಸೇಲಂಗೆ ವರ್ಗವಾದಾಗ ಬೆಂಗಳೂರಿನಲ್ಲಿ ಚಿಕ್ಕ ಮಗುವನ್ನು ಬಿಟ್ಟು ಹೋಗಬೇಕಾದ ಅನಿವಾರ್ಯ ಎದುರಾಯಿತು. ಆ ಸಂದರ್ಭದಲ್ಲಿ ಕೆಲಸ ಅಥವಾ ಮಗು ಎಂಬ ದ್ವಂದ್ವವೇ ನನಗೆ ಎದುರಾಗಲಿಲ್ಲ. ಏಕೆಂದರೆ ನನ್ನ ಪಾಲಿಗೆ ಉದ್ಯೋಗವೂ ಮಗುವಿನಷ್ಟೇ ಮಹತ್ವದ್ದು. 'ನಾವಿದ್ದೇವೆ' ಎಂಬ ಕುಟುಂಬಸ್ಥರ ಅಭಯ ಆಗ ನನಗೆ ಬಲ ನೀಡಿತು. ರಜೆಯಲ್ಲಿ ಸೇಲಂನಿಂದ ಬೆಂಗಳೂರಿಗೆ ಬಂದು ಮಗನೊಟ್ಟಿಗೆ ಸಮಯ ಕಳೆಯುತ್ತಿದ್ದೆ. ಬೇರೆಯವರ ರೀತಿ ಮಗನಿಗೆ ಪೂರ್ಣ ಪ್ರಮಾಣದಲ್ಲಿ ಸಮಯ ನೀಡಲಾಗುತ್ತಿಲ್ಲ ಎಂಬ ಬೇಸರ ಖಂಡಿತಾ ಇದೆ. ಉದ್ಯೋಗಸ್ಥ ಮಹಿಳೆಯರೆಲ್ಲರಿಗೂ ಇಂಥ ಕೆಲ ಸಂದಿಗ್ಧ ಸವಾಲುಗಳು ಎದುರಾಗಿಯೇ ಆಗುತ್ತವೆ. ಆಗ ಪಶ್ಚಾತ್ತಾಪ ಪಡಬಾರದು. ಜೀವನದಲ್ಲಿ ಉದ್ಯೋಗವೂ ಮುಖ್ಯ, ಮಕ್ಕಳೂ ಮುಖ್ಯ. ಎರಡೂ ಜವಾಬ್ದಾರಿಗಳನ್ನು ಸರಿದೂಗಿಸಿಕೊಂಡು ಹೋಗುವುದನ್ನು ರೂಢಿ ಮಾಡಿಕೊಳ್ಳಬೇಕು. ಸಿಗುವಷ್ಟು ಸಮಯದಲ್ಲಿಯೇ ಖುಷಿ ಪಡಬೇಕು, ಮಕ್ಕಳಿಗೂ ಅದನ್ನು ಅರ್ಥ ಮಾಡಿಸಬೇಕು.

ಈ ವಿಷಯದಲ್ಲಿ 12 ವರ್ಷದ ಮಗನೂ ನನಗೆ ಸಪೋರ್ಟಿವ್ ಆಗಿದ್ದಾನೆ. ನಮ್ಮ ಇಲಾಖೆಯಲ್ಲಿ 24/7 ಸಕ್ರಿಯರಾಗಿ ಇರಬೇಕಾಗುತ್ತದೆ. ಮನೆಯಲ್ಲಿ ಇದ್ದಾಗಲೂ ತುರ್ತು ಕರೆಗಳು ಬರುತ್ತವೆ. ಆಗ 'ಆಯ್ತು ಕಚೇರಿಗೆ ಹೋಗ್ಬನ್ನಿ ಅಮ್ಮ' ಅನ್ನುವಷ್ಟು ಪ್ರೌಢಿಮೆಯನ್ನು ಹೊಂದಿದ್ದಾನೆ ಎನ್ನುವುದೇ ಸಂತೋಷ.

ಸೌಮ್ಯಾ ವಿ. ಸುಧಾಕರ್ ಹೆಚ್ಚುವರಿ ಆಯುಕ್ತರು, ಆದಾಯ ತೆರಿಗೆ ಇಲಾಖೆ ಬೆಂಗಳೂರು



ಪುತ್ರ ಪ್ರಣವ್ ಎಸ್. ಸಾಸಲು ಜೊತೆ ಸೌಮ್ಯಾ ಸುಧಾಕರ್



ಮಕ್ಕಳಾದ ಶೌರ್ಯ ಮತ್ತು ಹರ್ಷ ಅವರೊಂದಿಗೆ ಡಿಸಿಪಿ ಅನಿತಾ ಹದ್ದಣ್ಣವರ್

ಕೆಲಸದವರನ್ನು ಅವಲಂಬಿಸಿಲ್ಲ

ನನಗೆ ಹತ್ತು ವರ್ಷ ಹಾಗೂ ಏಳೂವರೆ ವರ್ಷದ ಇಬ್ಬರು ಗಂಡುಮಕ್ಕಳಿದ್ದಾರೆ. ಕೆಲಸಕ್ಕೆ ಹೊರಡುವ ಒತ್ತಡದ ಮಧ್ಯೆಯೂ ಅವರನ್ನು ನಾನೇ ಶಾಲೆಗೆ ಅಣಿ ಮಾಡುತ್ತೇನೆ. ಮಕ್ಕಳ ಕೆಲಸಗಳಿಗೆ ಕೆಲಸದವರನ್ನು ಅವಲಂಬಿಸಿಲ್ಲ. ಮಕ್ಕಳ ಬೇಕುಬೇಡಗಳನ್ನು ತಾಯಿ ಆಲಿಸುವುದರಿಂದ ತಾಯಿ–ಮಕ್ಕಳ ನಡುವಿನ ಪ್ರೀತಿ ಹೆಚ್ಚುತ್ತದೆ, ಭಾವನಾತ್ಮಕ ಸಂಬಂಧವೂ ಗಟ್ಟಿಗೊಳ್ಳುತ್ತದೆ. ನಮ್ಮ ಒಂದೊಂದು ಒಳ್ಳೆಯ ಹೆಜ್ಜೆಯೂ ಮಕ್ಕಳು ಭವಿಷ್ಯ ರೂಪಿಸಿಕೊಳ್ಳಲು ಪ್ರೇರಣೆ ಆಗುತ್ತದೆ.

ಪೊಲೀಸ್ ಇಲಾಖೆಯಲ್ಲಿ ಎಕ್ಸಿಕ್ಯುಟಿವ್ ಹುದ್ದೆಯಲ್ಲಿ ಇರುವ ಕಾರಣಕ್ಕೆ ನನಗೆ ಬಂದೋಬಸ್ತ್, ಅಪರಾಧ ಪ್ರಕರಣಗಳ ಪತ್ತೆ, ಸಭೆಗಳಲ್ಲಿ ಭಾಗಿಯಾಗುವುದು, ಹಿರಿಯ ಅಧಿಕಾರಿಗಳ ಭೇಟಿಯಂತಹ ಹಲವು ಕೆಲಸಗಳು ಇರುತ್ತವೆ. ಕೆಲವೊಮ್ಮೆ ಬೆಳಿಗ್ಗೆಯೇ ಕಚೇರಿಗೆ ತೆರಳಬೇಕಿರುತ್ತದೆ. ರಾತ್ರಿ 11 ಕಳೆದರೂ ಮನೆಗೆ ಬರಲು ಸಾಧ್ಯವಾಗುವುದಿಲ್ಲ. ರಾತ್ರಿ ಯಾವುದೇ ಸಮಯದಲ್ಲಿ ಮನೆಗೆ ಬಂದರೂ ಮಕ್ಕಳ ಓದು, ಬರಹದ ಬಗ್ಗೆ ಗಮನ ಹರಿಸುತ್ತೇನೆ. ಹೋಂವರ್ಕ್ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸುತ್ತೇನೆ. ಒತ್ತಡದ ಬದುಕಿನ ಮಧ್ಯೆಯೂ ಮಕ್ಕಳ ಬಗ್ಗೆ ಕಾಳಜಿ ವಹಿಸಲೇಬೇಕು.

ಪತಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಅವರಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಇದೆ. ಇದು ಮಕ್ಕಳ ಬಗೆಗಿನ ನನ್ನ ಒತ್ತಡವನ್ನು ತುಸು ತಗ್ಗಿಸಿದೆ.

ಅನಿತಾ ಹದ್ದಣ್ಣನವರ್ ಡಿಸಿಪಿ, ನೈಋತ್ಯ ವಿಭಾಗ, ಬೆಂಗಳೂರು



ಮಗ ಹರ್ಷದೇವ್ ನಾಯ್ಡು ಜೊತೆ ಅಮೃತಾ ನಾಯ್ಡು

ಸಂಸ್ಕಾರ ಕಲಿಸಲು ಆದ್ಯತೆ

ಮಗನನ್ನು ಆದ್ಯತೆಯಾಗಿ ಇಟ್ಟುಕೊಂಡೇ ಧಾರಾವಾಹಿಯ ಶೂಟಿಂಗ್‌ನಲ್ಲಿ ಪಾಲ್ಗೊಳ್ಳುತ್ತಾ ಬಂದಿದ್ದೇನೆ. ವೃತ್ತಿ ಹಾಗೂ ತಾಯ್ತನ ಎರಡನ್ನೂ ಒಟ್ಟಿಗೆ ನಿಭಾಯಿಸುವಾಗ, ಆ ದಾರಿಯೇನೂ ಸರಾಗವಾಗಿ ಇರುವುದಿಲ್ಲ. ಅಲ್ಲಿ ಸವಾಲುಗಳಿರುತ್ತವೆ. ಆದರೆ, ನಾವು ನಿತ್ಯದ ಚಟುವಟಿಕೆಗಳನ್ನು ಆದಷ್ಟೂ ಯೋಜನಾಬದ್ಧವಾಗಿ ಮಾಡಬೇಕು. ಬಹು ಕೆಲಸ ನಿರ್ವಹಣಾ ಕೌಶಲವನ್ನು ರೂಢಿಸಿಕೊಳ್ಳುವುದು ಮುಖ್ಯ.

ಶೂಟಿಂಗ್ ಸ್ಥಳಕ್ಕೆ ತಡವಾಗಿ ಹೋಗಿ, ಬೇಗ ಬರುವ ರೀತಿಯಲ್ಲಿ ಟೀಮ್‌ಗೆ ಮನವಿ ಮಾಡಿಕೊಂಡಿದ್ದೇನೆ. ತಿಂಗಳೆಲ್ಲ ಶೂಟಿಂಗ್ ಇರುವುದಿಲ್ಲ. ಇದ್ದಾಗ ಗಂಡ ವರ್ಕ್ ಫ್ರಂ ಹೋಂ ಮಾಡುತ್ತಾರೆ. ಜತೆಗೆ ಮಾವ ನಮ್ಮ ಜತೆ ಇದ್ದಾರೆ. ಮಗನಿಗೆ ಈಗ ಮೂರೂವರೆ ವರ್ಷ. ಅವನನ್ನು ನೋಡಿಕೊಳ್ಳಲು ಒಬ್ಬ 'ನ್ಯಾನಿ' ಕೂಡ ಇದ್ದಾರೆ. ಇಷ್ಟೆಲ್ಲ ಜನ ಇರುವುದರಿಂದ ಅಷ್ಟು ತೊಂದರೆಯಾಗುವುದಿಲ್ಲ.

ಈಗ ಪ್ಲೇ ಸ್ಕೂಲಿಗೆ ಹೋಗುತ್ತಾನೆ. ಮಧ್ಯಾಹ್ನದ ಒಳಗೆ ಬಂದು ಬಿಡುತ್ತಾನೆ. ಊಟ ಮಾಡಿಸಿ, ಮೂರು ಗಂಟೆಗೆ ಮಲಗುತ್ತಾನೆ. ಅವನು ಏಳುವುದರ ಒಳಗೆ ನಾನು ಶೂಟಿಂಗ್ ಮುಗಿಸಿ ಮನೆಯಲ್ಲಿ ಇರುತ್ತೇನೆ. ಮುಖ್ಯವಾಗಿ ಮಗನಿಗೆ ಸಂಸ್ಕಾರ ಕಲಿಸುವುದಕ್ಕೆ ಹೆಚ್ಚು ಒತ್ತು ಕೊಡುತ್ತೇನೆ. ಶಿಕ್ಷಣ ಎಂಬುದು ಬರೀ ನಾಲ್ಕು ಗೋಡೆಗಳ ಮಧ್ಯೆ ಇದ್ದು ಕಲಿಯುವಂಥದ್ದಲ್ಲ. ದೊಡ್ಡವರು, ಚಿಕ್ಕವರ ಹತ್ತಿರ ನನ್ನ ಮಗ ಹೇಗೆ ಮಾತನಾಡುತ್ತಾನೆ, ಓರಗೆಯವರೊಂದಿಗೆ ಹೇಗೆ ನಡೆದುಕೊಳ್ಳುತ್ತಾನೆ ಎಂಬುದು ಬಹುಮುಖ್ಯ. ಅವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮತ್ತು ಅವನದೇ ಆದ ಛಾಪು ಮೂಡಿಸುವಲ್ಲಿ ನಡವಳಿಕೆ ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ, ಅದರ ಕಡೆಗೆ ಹೆಚ್ಚು ಗಮನ ಕೊಡುತ್ತೇನೆ.

ಅಮೃತಾ ನಾಯ್ಡು, ಕಿರುತೆರೆ ನಟಿ

ಸ್ವತಂತ್ರವಾಗಿ ಬೆಳೆಯಬೇಕು

ಮಕ್ಕಳು ಶಾಲೆಯಿಂದ ಮಧ್ಯಾಹ್ನ 3.30ರ ಸುಮಾರಿಗೆ ಮನೆಗೆ ಬರುತ್ತಾರೆ. ಆ ಹೊತ್ತಿಗೆ ನಾನು ಮನೆ ತಲುಪುವಂತೆ ನೋಡಿಕೊಳ್ಳುತ್ತೇನೆ. ಒಮ್ಮೆ ಮನೆಗೆ ಬಂದ ಮೇಲೆ ಕಚೇರಿಯ ಯಾವ ಕೆಲಸ–ಕಾರ್ಯಗಳ ಬಗ್ಗೆಯೂ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಅತ್ಯಂತ ಮುಖ್ಯ ಕೆಲಸವೇನಾದರೂ ಇದ್ದರೆ, ಮಕ್ಕಳು ಮಲಗಿದ ಮೇಲೆಯೇ ಮಾಡಿಕೊಳ್ಳುತ್ತೇನೆ. ಮಕ್ಕಳಿಗೆ ರಜೆ ಇದ್ದರೆ, ವರ್ಕ್ ಫ್ರಂ ಹೋಮ್ ಮಾಡುತ್ತೇನೆ.

ಶಾಲೆಗೂ ನಾವೇ ಬಿಡಬೇಕು, ಕರೆದುಕೊಂಡು ಬರಬೇಕು ಎಂದು ಈಗಿನ ಮಕ್ಕಳೇನೂ ಬಯಸುವುದಿಲ್ಲ. ನಮಗೂ ಅದು ಸಾಧ್ಯವಾಗುವುದಿಲ್ಲ. ಅವರು ಶಾಲೆಯಿಂದ ಬಂದ ಮೇಲೆ, ಅವರ ಜೊತೆ ಪಾರ್ಕ್‌ಗೆ ಹೋಗುತ್ತೇನೆ, ಆಟವಾಡುತ್ತೇನೆ. ವಾರ ವಾರಕ್ಕೂ ಪರೀಕ್ಷೆ ಕೊಡುವಂಥ ಶಾಲೆಗೆ ನಮ್ಮ ಮಕ್ಕಳನ್ನು ನಾವು ಸೇರಿಸಿಲ್ಲ. ಪರ್ಯಾಯ ಶಿಕ್ಷಣ ವ್ಯವಸ್ಥೆ ಇರುವ ಶಾಲೆಗೆ ಸೇರಿಸಿದ್ದೇವೆ. ಆದ್ದರಿಂದ, ನಮ್ಮ ಮೇಲೆಯೂ ಹೆಚ್ಚಿನ ಒತ್ತಡ ಇರುವುದಿಲ್ಲ.

ಮಕ್ಕಳು ಕೇವಲ ಓದಬೇಕು ಎಂದು ನಾನು ಬಯಸುವುದಿಲ್ಲ. ಕ್ರೀಡೆ, ಸಂಗೀತ ಹೀಗೆ ಎಲ್ಲದರಲ್ಲಿಯೂ ಅವರು ತೊಡಗಿಕೊಳ್ಳಬೇಕು. ನಾನು ಮಕ್ಕಳೊಂದಿಗೆ ಸೇರಿ ಸಂಗೀತ ಅಭ್ಯಾಸ ಮಾಡುತ್ತೇನೆ. ರಾತ್ರಿ ಒಟ್ಟಿಗೆ ಕೂತು ಊಟ ಮಾಡುತ್ತೇವೆ. ಊಟವಾದ ಬಳಿಕ ನನ್ನ ಮಗನೇ ಡೈನಿಂಗ್ ಟೇಬಲ್ ಅನ್ನು ಒರೆಸಬೇಕು ಎನ್ನುವುದು ನಾನು ಮಾಡಿರುವ ನಿಯಮ. ಅವರು ಸ್ವತಂತ್ರವಾಗಿ ಬೆಳೆಯಬೇಕು, ಅದಕ್ಕೆ ನಾವೇ ಮಾದರಿಯಾಗಬೇಕು.

ಶ್ವೇತಾ ರಾಜಶೇಖರ್, ಸ್ಥಾಪಕಿ, ಇಂಡಿಯಾ ಸ್ವೀಟ್ ಹೌಸ್



ಮಗ ಅದ್ವೈತ್ ಮತ್ತು ಮಗಳು ಕೃಷ್ಣಾ ಜೊತೆ ಶ್ವೇತಾ

ನಿರೂಪಣೆ : ಕೀರ್ತಿಕುಮಾರಿ ಎಂ., ಆದಿತ್ಯ ಕೆ.ಎ., ಸುಕೃತ ಎಸ್., ರೂಪಾ ಕೆ.ಎಂ.

ಭಾವಯಾನ

ಜೈವಿಕ ಭಿನ್ನತೆಗೆ ವ್ಯಂಗ್ಯದ ಮಾತೇಕೆ?

• ಸರೋಜಾ ಎಂ.ಎಸ್.

ಶಾಲಿನಿ ಸಂಜೆ ಕೆಲಸ ಮುಗಿಸಿ, ಮೊದಲ ಮಹಡಿಯಲ್ಲಿದ್ದ ಕಚೇರಿಯಿಂದ ಕೆಳಗಿಳಿದು ಬಂದಳು. ಅಷ್ಟರಲ್ಲಾಗಲೇ ಕೆಳಗೆ ಬಂದಿದ್ದ ಅವಳ ಸಹೋದ್ಯೋಗಿ ಬಾಲಚಂದ್ರ ಸ್ನೇಹಿತರೊಂದಿಗೆ ದೊಡ್ಡ ಧ್ವನಿಯಲ್ಲಿ ಹರಟುತ್ತಿದ್ದ. 'ಅಬ್ಬಾ! ಏನು ಧ್ವನಿ ನಿಂದು. ಸಭೆಯಲ್ಲಿ ಮಾತನಾಡಲು ನಿನಗೆ ಮೈಕೇ ಬೇಡ ನೋಡು' ಎಂದು ತಮಾಷೆ ಮಾಡಿದಳು ಶಾಲಿನಿ. ಅದಕ್ಕೆ ಬಾಲಚಂದ್ರ 'ಹೌದು ಕಣಮ್ಮಾ, ನಾನು ಗಂಡಸು. ಎಷ್ಟು ಎತ್ತರ ಇದ್ದೀನಿ ನೋಡು. ನನ್ನ ಮೈಕಟ್ಟು ಹೇಗಿದೆ ನೋಡು. ನನಗೆ ತಕ್ಕ ಹಾಗೆ ನನ್ನ ಧ್ವನಿ ಇದೆ. ನೀನು ಹೆಂಗಸು, ಕುಳ್ಳಿ. ನಿನ್ನ ಧ್ವನಿ ಸಣ್ಣದು' ಎಂದು ವ್ಯಂಗ್ಯವಾಗಿ ಹೇಳಿದ. ಈ ಮಾತಿನಿಂದ ಶಾಲಿನಿ ಪೆಚ್ಚಾದಳು.

'ಸಾಮಾನ್ಯವಾಗಿ ಹೆಣ್ಣುಮಕ್ಕಳು ಕುಳ್ಳೀರು ಅಲ್ವೇನೋ?' ಎಂದು ಸ್ನೇಹಿತರೊಂದಿಗೆ ಅವನು ಏನೇನೋ ಮಾತನಾಡತೊಡಗಿದಾಗ ಶಾಲಿನಿ ಮಾತಿಗೆ ನಿಲ್ಲದೆ ಮುಂದೆ ನಡೆದಳು. ಅವಳಿಗೆ ಇಂತಹ ಮಾತು, ಚರ್ಚೆಗಳಲ್ಲಿ ಭಾಗವಹಿಸುವುದು ಇಷ್ಟವಾಗುತ್ತಿರಲಿಲ್ಲ.

ಈ ಆಧುನಿಕ ಯುಗದಲ್ಲೂ ವಿದ್ಯಾವಂತರು ಸಹ ಹೆಂಗಸು ಎಂದು ಹೀಯಾಳಿಸಿ ಮಾತನಾಡುವುದು ನಿಂತಿಲ್ಲ ಎಂಬುದಕ್ಕೆ ಇದೊಂದು ಉದಾಹರಣೆ ಅಷ್ಟೆ.

'... ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ...' ಎಂಬ ಬಸವಣ್ಣನವರ ವಚನವನ್ನು ನಮ್ಮ ಜನರು ಪುಸ್ತಕದಲ್ಲಿ ಓದುವರೇ ವಿನಾ ಪಾಲಿಸುವುದಿಲ್ಲ. ಹೆಣ್ಣುಮಕ್ಕಳಿಗೂ ಒಂದು ಮನಸ್ಸಿದೆ, ವ್ಯಕ್ತಿತ್ವವಿದೆ, ಹೆಣ್ಣಿಗೂ ಗಂಡಿಗೂ ಜೈವಿಕ ಭಿನ್ನತೆಯಷ್ಟೇ ಇರುವುದು, ಅದನ್ನು ಗೌರವಿಸಬೇಕು ಎನ್ನುವಷ್ಟು ವೈಚಾರಿಕತೆ ಇಲ್ಲದೆ ಹೋದರೂ ಹೀಯಾಳಿಸಿ ಮಾತನಾಡಿದರೆ ಆಕೆಯ ಮನಸ್ಸಿಗೆ ನೋವಾಗುತ್ತದೆ ಎನ್ನುವ ಕನಿಷ್ಠ ಜ್ಞಾನವಾದರೂ ಇಲ್ಲದಿದ್ದರೆ ಹೇಗೆ?

ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು.
ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

ರಸಾಸ್ವಾದ

ಮಕ್ಕಳಿಗೆ ಮಾಡಿಕೊಡಿ ಮಾಡಿಸಿ!

• ಸುನಾದ

ಆ ತಿಂಡಿ ಬೇಡ, ಈ ತರಕಾರಿ ಬೇಡ ಎಂದು ಮುಖ ಸಿಂಡರಿಸುವ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವುದಾದರೂ ಹೇಗೆ? ಬೆಳೆಯುತ್ತಿರುವ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಬೆಳೆದರಲ್ಲವೇ ಅವರು ಆರೋಗ್ಯದಿಂದ ನಳನಳಿಸುವುದು. ಆದರೆ ಅವರು ಹೀಗೆ ಮೂತಿ ಉಬ್ಬಿಸುತ್ತಾ ಬೇಡಗಳ ಪಟ್ಟಿಯನ್ನು ಮುಂದಿಡುತ್ತಾ ಹೋದರೆ ಏನು ಮಾಡುವುದು? ಮಕ್ಕಳ ಆರೋಗ್ಯ ಹದಗೆಟ್ಟರೆ ಅಮ್ಮಂದಿರೇ ತಾನೆ ಹೆಣಗಾಡಬೇಕು. ಈ ಅವಾಂತರ ತಪ್ಪಿಸಲು ಮಕ್ಕಳಿಗೆ ಅವರು ಕೊಂಚ ಕಣ್ಕಟ್ಟು ಮಾಡಿದರೂ ತಪ್ಪೇನಿಲ್ಲ ಬಿಡಿ.

ಅದೇ ತರಕಾರಿಯನ್ನು ಅಂದಗಾಣುವಂತೆ ಆಕರ್ಷಕ ತಿನಿಸುಗಳನ್ನಾಗಿ ಮಾಡಿಕೊಟ್ಟರೆ, ನೈಸರ್ಗಿಕ ಪದಾರ್ಥಗಳನ್ನು ಬಳಸಿ ಬಣ್ಣಬಣ್ಣದ ತಿಂಡಿಗಳನ್ನು ಮುಂದಿಟ್ಟರೆ ಮಕ್ಕಳು ತಿನ್ನದೇ ಇರಲಾರರು. ಅಷ್ಟೇ ಅಲ್ಲ ಸ್ವಲ್ಪ ದೊಡ್ಡ ಮಕ್ಕಳಿಗೆ ಸಮಯವಿದ್ದಾಗ ಖುದ್ದು ಮಾಡುವಂತೆಯೂ ಅಭ್ಯಾಸ ಮಾಡಿಸಬಹುದು. 'ಮಕ್ಕಳ ದಿನಾಚರಣೆ'ಯ ಈ ಹೊತ್ತಿನಲ್ಲಿ ಅಂತಹ ಕೆಲವು ವಿಶೇಷ ತಿನಿಸುಗಳ ಮಾಹಿತಿ ಇಲ್ಲಿದೆ:



ಲಾಲಿಪಪ್ ಕಟ್ಲೆಟ್

ಬೇಕಾಗುವ ಸಾಮಗ್ರಿ: ಆಲೂಗಡ್ಡೆ–4, ಈರುಳ್ಳಿ 1, ಹಸಿಮೆಣಸಿನಕಾಯಿ–2, ಕೆಂಪು ಮೆಣಸಿನಕಾಯಿ ಪುಡಿ–1 ಚಮಚ, ಮೆಣಸಿನ ಪುಡಿ– ಕಾಲು ಚಮಚ, ಗರಂ ಮಸಾಲ– ಕಾಲು ಚಮಚ, ಜೀರಿಗೆ ಪುಡಿ ಅಥವಾ ಜೀರಿಗೆ– ಅರ್ಧ ಚಮಚ, ಕಸೂರಿ ಮೇಥಿ– ಸ್ವಲ್ಪ, ಸಣ್ಣಗೆ ಹೆಚ್ಚಿದ ಕರಿಬೇವು, ಕೊತ್ತಂಬರಿಸೊಪ್ಪು, ಅರಸಿನ, ಇಂಗು, ಉಪ್ಪು, ನಿಂಬೆ ರಸ, ಐಸ್‌ಕ್ರೀಮ್ ಕಡ್ಡಿಗಳು. ಹುರಿದಿಟ್ಟುಕೊಂಡ ಐದಾರು ಚಮಚ ಮೀಡಿಯಮ್ ರವೆ ಅಥವಾ ಚಿರೋಟಿ ರವೆ, ಇಲ್ಲವೇ ರೋಸ್ಟ್ ಮಾಡಿ ಪುಡಿ ಮಾಡಿದ ಬ್ರೆಡ್.

ಮಾಡುವ ವಿಧಾನ: ಆಲೂಗಡ್ಡೆಯನ್ನು ಬೇಯಿಸಿ ಪುಡಿ ಮಾಡಿ ಇಟ್ಟುಕೊಳ್ಳಿ. ಬಾಣಲೆಗೆ ಮೂರು ಚಮಚ ಎಣ್ಣೆ ಹಾಕಿ ಸಣ್ಣಗೆ ಹೆಚ್ಚಿದ ಈರುಳ್ಳಿ ಹಾಕಿ ಹುರಿಯಿರಿ. ಬಳಿಕ ಅದಕ್ಕೆ ಮೇಲೆ ತಿಳಿಸಿದ ಪದಾರ್ಥಗಳನ್ನು ಒಂದರ ನಂತರ ಒಂದು ಹಾಕುತ್ತಾ ಬನ್ನಿ. ಎಲ್ಲವನ್ನೂ ಮಿಕ್ಸ್ ಮಾಡಿ ಒಂದೆರಡು ನಿಮಿಷ ಹುರಿದು ಸ್ಟೌ ಆರಿಸಿ ನಿಂಬೆರಸ ಸೇರಿಸಿ. ಈ ಮಿಶ್ರಣ ತಣ್ಣಗಾದ ಬಳಿಕ ಅದನ್ನು ಉಂಡೆಗಳನ್ನಾಗಿ ಕಟ್ಟಿಕೊಳ್ಳಿ. ಐಸ್‌ಕ್ರೀಮ್ ಕಡ್ಡಿಯ ಅರ್ಧ ಭಾಗಕ್ಕೆ ಈ ಉಂಡೆಯನ್ನು ಸುತ್ತಿ, ಅದು ಸರಿಯಾಗಿ ಹಿಡಿದುಕೊಳ್ಳುವಂತೆ ಮೃದುವಾಗಿ ಅಮುಕಿ. ನಂತರ ಅದನ್ನು ರವೆ ಅಥವಾ ಬ್ರೆಡ್ ಪುಡಿಯಲ್ಲಿ ಹೊರಳಿಸಿ. ಇದನ್ನು ಹೆಂಚಿಗೆ 2–3 ಚಮಚ ಎಣ್ಣೆ ಹಾಕಿ ಎರಡೂ ಬದಿಯಲ್ಲಿ ರೋಸ್ಟ್ ಮಾಡಿ. ಲಾಲಿಪಪ್‌ನಂತೆ ಹಿಡಿದುಕೊಂಡು ಸಾಸ್‌ನಲ್ಲಿ ಹೊರಳಿಸಿ ತಿನ್ನಲು ಮಕ್ಕಳು ಖಂಡಿತ ಇಷ್ಟಪಡುತ್ತಾರೆ.

ಡ್ರೈಫ್ರೂಟ್ ಲಡ್ಡು

ಏನೇನು ಬೇಕು?: ತುರಿದ ಒಣಕೊಬ್ಬರಿ, ಚೂರು ಮಾಡಿದ ಉತ್ತುತ್ತೆ, ಬೆಲ್ಲ –ತಲಾ ಒಂದು ಕಪ್, ಗೋಡಂಬಿ, ಬಾದಾಮಿ, ದ್ರಾಕ್ಷಿ, ಖರ್ಜೂರ, ಪಿಸ್ತಾ –ತಲಾ ಅರ್ಧ ಕಪ್, ಅಕ್ರೋಟ್– ಒಂದೆರಡು ಚಮಚ, ಅಳವಿ ಬೀಜ– ಮೂರು ಟೀ ಚಮಚ, ಕುಂಬಳಬೀಜ– ಮೂರು ಚಮಚ, ಗಸಗಸೆ– ಒಂದು ಚಮಚ, ಅಂಟು– ಎರಡು ಚಮಚ, ತುಪ್ಪ– ಮೂರ್ನಾಲ್ಕು ಚಮಚ.

ಹೀಗೆ ಮಾಡಿ: ಗೋಡಂಬಿ, ಬಾದಾಮಿ, ದ್ರಾಕ್ಷಿ, ಖರ್ಜೂರ, ಪಿಸ್ತಾ ಹಾಗೂ ಅಕ್ರೋಟ್ ಅನ್ನು ಡ್ರೈರೋಸ್ಟ್ ಮಾಡಿಟ್ಟುಕೊಳ್ಳಿ, ಹಾಗೇ ದ್ರಾಕ್ಷಿ, ಅಳವಿ ಬೀಜ, ಅಂಟನ್ನು ಪ್ರತ್ಯೇಕವಾಗಿ ತುಪ್ಪದಲ್ಲಿ ಹುರಿದಿಟ್ಟುಕೊಳ್ಳಿ. ಈಗ ಒಂದು ಮಿಕ್ಸಿ ಜಾರ್‌ಗೆ ತುರಿದ ಒಣಕೊಬ್ಬರಿ, ಉತ್ತುತ್ತೆ ಚೂರುಗಳನ್ನು ಹಾಕಿ ಒಂದು ಸುತ್ತು ಪುಡಿ ಮಾಡಿಕೊಳ್ಳಬೇಕು. ಬಳಿಕ ಬೆಲ್ಲ ಹಾಗೂ ಮೇಲೆ ಹೇಳಿದ ಎಲ್ಲಾ ಒಣಹಣ್ಣುಗಳನ್ನು ಹಾಕಿ ತರಿತರಿಯಾಗಿ ಮಿಕ್ಸಿ ಮಾಡಿಕೊಳ್ಳಬೇಕು. ನಂತರ ನಿಮಗೆ ಬೇಕಾದ ಅಳತೆಯಲ್ಲಿ ಉಂಡೆ ಕಟ್ಟಿ. ಗಾಳಿಯಾಡದ ಸ್ಟೀಲ್ ಬಾಕ್ಸ್‌ನಲ್ಲಿ ಇಟ್ಟುಕೊಂಡರೆ, ತಿಂಗಳವರೆಗೂ ಮಕ್ಕಳ ಸ್ನ್ಯಾಕ್ಸ್ ಬಾಕ್ಸ್‌ನ ಚಿಂತೆ ಇರದು.



ಹೆಸರುಬೇಳೆ ಪಿಜ್ಜಾ

ಪಿಜ್ಜಾ ಎಂದರೆ ಯಾವ ಮಕ್ಕಳಿಗೆ ತಾನೇ ಇಷ್ಟವಿಲ್ಲ? ಕೇಳಿದ ಕೂಡಲೇ ಮಕ್ಕಳ ಬಾಯಲ್ಲಿ ನೀರೂರಿಸುವ ಈ ತಿಂಡಿ, ಮೈದಾಹಿಟ್ಟಿನ ಬಳಕೆಯಿಂದಾಗಿ ಜಂಕ್‌ಫುಡ್‌ನ ಪಟ್ಟಿಗೆ ಸೇರುತ್ತದೆ. ಆದರೆ ಮೈದಾ ಬಳಸದೆ ಹೆಸರುಬೇಳೆಯಲ್ಲಿ ಆರೋಗ್ಯಕರ ಪಿಜ್ಜಾ ತಯಾರಿಸಿದರೆ, ನಿಶ್ಚಿಂತೆಯಿಂದ ಮಕ್ಕಳಿಗೆ ಕೊಡಬಹುದು.



ಹೀಗೆ ಮಾಡಿ: ಒಂದು ಕಪ್ ಹೆಸರುಬೇಳೆಯನ್ನು ಎರಡು ಗಂಟೆ ಅಥವಾ ಸಮಯವಿದ್ದರೆ ರಾತ್ರಿ ಪೂರ್ತಿ ನೆನೆಯಲು ಬಿಡಿ. ನೆನೆದ ಹೆಸರುಬೇಳೆಯನ್ನು ಮಿಕ್ಸಿ ಜಾರ್‌ಗೆ ಹಾಕಿ, ಎರಡು ಹಸಿಮೆಣಸಿನಕಾಯಿ, ಒಂದು ಇಂಚು ಶುಂಠಿ ಸೇರಿಸಿ ರುಬ್ಬಿಕೊಳ್ಳಿ. ಅದನ್ನು ಒಂದು ಪಾತ್ರೆಗೆ ಹಾಕಿ ಒಂದು ಚಮಚ ಸೂಜಿ ರವೆ (ಚಿರೋಟಿ ರವೆ), ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಬೇಕು. ದೋಸೆ ಹಿಟ್ಟಿನ ಹದ ಇರಲಿ. ಈಗ ದೋಸೆ ತವಾದ ಮೇಲೆ ಈ ಹಿಟ್ಟನ್ನು ಸೆಟ್ ದೋಸೆ ಅಳತೆಯಲ್ಲಿ ಹಾಕಿ. ಬೆಂದ ಬಳಿಕ ಮಗುಚಿ ಹಾಕಿ. ಅದಕ್ಕೆ ಪಿಜ್ಜಾ ಸಾಸ್ ಸವರಿ, ಚೀಸ್ ತುರಿಯನ್ನು ಹರಡಬೇಕು, ಬಳಿಕ ಕಾರ್ನ್, ಟೊಮೆಟೊ ಚೂರುಗಳು, ಕ್ಯಾಪ್ಸಿಕಂ ಚೂರುಗಳನ್ನು ಹರಡಿ. ಅದರ ಮೇಲೆ ಮತ್ತೊಮ್ಮೆ ಚೀಸ್ ಹಾಕಿ ಅರ್ಧ ನಿಮಿಷ ತಟ್ಟೆ ಮುಚ್ಚಿ ಬೇಯಿಸಿ. ಬಳಿಕ ಚಿಲ್ಲಿ ಫ್ಲೇಕ್ಸ್ ಹಾಕಿ. ನಂತರ ತವಾದಿಂದ ತೆಗೆದು ಮಕ್ಕಳಿಗೆ ಸವಿಯಲು ಕೊಡಿ.

ರವಿಕೆ

ಹೊಲಿಯುವವರೇ ಜೋಕೆ!

• ಪ್ರಣತಿ ಪ್ರದೀಪ್

'ಟೈಮ್‌ಗೆ ಸರಿಯಾಗಿ ಬ್ಲೌಸ್ ಹೊಲಿದುಕೊಡುವವರು ಯಾರಾದರೂ ಇದ್ದರೆ ತಿಳಿಸಿ ಪ್ಲೀಸ್...'

ಹಬ್ಬ, ಮದುವೆ, ಮುಂಜಿಯಂತಹ ಸಮಾರಂಭಗಳು ಹತ್ತಿರ ಇರುವಾಗ ಹೆಣ್ಣುಮಕ್ಕಳು ಹೀಗೆ ಸ್ನೇಹಿತರು, ಸಂಬಂಧಿಕರೊಂದಿಗೆ ಅಲವತ್ತುಕೊಳ್ಳುವುದು ಸಾಮಾನ್ಯ ಸಂಗತಿ. ಹೊಸ ಸೀರೆಗೆ ಸಕಾಲದಲ್ಲಿ ಬ್ಲೌಸ್ ಹೊಲಿದು ಕೊಡುವವರನ್ನು ಹುಡುಕುವುದೇ ಹಲವರಿಗೆ ಒಂದು ಸವಾಲು. 'ಮೂಗಿಗಿಂತ ಮೂಗುತಿ ಭಾರ' ಎನ್ನುವಂತೆ, ಸೀರೆಗಿಂತ ಬ್ಲೌಸ್ ಹೊಲಿಸುವ ಕೂಲಿಯೇ ಹೆಚ್ಚಾಗಿರುವ ಕಾಲ ಇದು. ಆದರೂ ಹೇಳಿದಂತೆ ಹೊಲಿಯುವುದಿಲ್ಲ, ಹೇಳಿದ ಸಮಯಕ್ಕೆ ಕೊಡುವುದಿಲ್ಲ ಎಂದು ಗೊಣಗಾಡದ ಹೆಂಗಳೆಯರೇ ಇಲ್ಲವೇನೊ ಅನ್ನುವಷ್ಟರ ಮಟ್ಟಿಗೆ ನಮ್ಮ ಟೇಲರಣ್ಣಂದಿರು (ಟೇಲರಕ್ಕಂದಿರು) ಫೇಮಸ್ಸು! ಹೆಂಗಳೆಯರನ್ನು ತಮ್ಮ ಅಂಗಡಿಗೆ ಅಲೆದಾಡಿಸಿ ಕಾಡಿಸುವುದರಲ್ಲಿ ಅವರು ನಿಸ್ಸೀಮರು.

ಆದರೆ ಗುಜರಾತ್‌ನ ಪೂನಂ ಬೆನ್ ಮಾತ್ರ, ತಮ್ಮ ಬೆನ್ನು ಅಲಂಕರಿಸಬೇಕಿದ್ದ ಬ್ಲೌಸ್ ಸರಿಯಾದ ಸಮಯಕ್ಕೆ ಸಿಗದೇ ಹೋದಾಗ, ಟೇಲರಣ್ಣನ ಬೆನ್ನು ಹತ್ತಿ, ಶಿಕ್ಷೆ ಕೊಡಿಸಿ ಎಲ್ಲರೂ ಮೂಗಿನ ಮೇಲೆ ಬೆರಳಿಡುವಂತೆ ಮಾಡಿದ್ದಾರೆ. ಅತಿ ಹತ್ತಿರದ ಬಂಧುವೊಬ್ಬರ ಮದುವೆಯಲ್ಲಿ ತೊಡಲು ಪೂನಂ ಆಸೆಯಿಂದ ಖರೀದಿಸಿದ್ದ ಸೀರೆಗೆ ಬ್ಲೌಸ್ ಹೊಲಿಸಲು ಡಿಸೈನರ್ ವೇರ್ ಒಂದಕ್ಕೆ ತೆರಳಿದ್ದರು. ಅಲ್ಲಿ ಅದಕ್ಕಾಗಿ ₹ 4,395 ಮುಂಗಡವನ್ನೂ ನೀಡಿದ್ದರು. ಕಡೆಗೆ ಟೇಲರ್ ಹೇಳಿದ್ದ ದಿನ ಬ್ಲೌಸ್ ಪಡೆಯಲು ಹೋದ ಅವರಿಗೆ ಆಘಾತ ಕಾದಿತ್ತು. ಆ ಬ್ಲೌಸ್ ಅವರು ಹೇಳಿದ ವಿನ್ಯಾಸದಲ್ಲಿ ಇರಲಿಲ್ಲ ಮಾತ್ರವಲ್ಲ, ಕೆಲವೆಡೆ ಕಲೆಯೂ ಆಗಿಹೋಗಿತ್ತು. ಆಗ ಏನೋ ಒಂದು ಸಬೂಬು ಹೇಳಿದ್ದ ಟೇಲರ್, ಎಲ್ಲವನ್ನೂ ಸರಿಪಡಿಸಿ ಮದುವೆಗೆ ಇನ್ನು ಹತ್ತು ದಿನ ಮುಂಚಿತವಾಗಿಯೇ ಕೊಡುವುದಾಗಿ ಹೇಳಿ ಕಳಿಸಿದ್ದರು. ಆದರೆ ಮದುವೆಯ ದಿನ ಬಂದರೂ ಆ ಬ್ಲೌಸ್ ಮಾತ್ರ ಪೂನಂ ಕೈಸೇರಲೇ ಇಲ್ಲ. ವಿಧಿಯಿಲ್ಲದೆ ಬೇರೆ ಸೀರೆ ತೊಟ್ಟು ಮದುವೆಯಲ್ಲಿ ಪಾಲ್ಗೊಂಡ ಆಕೆ, ನಂತರ ಬಂದು ಮುಂಗಡ ಹಣ ವಾಪಸ್ ಕೊಡುವಂತೆ ಕೇಳಿದ್ದರು. ಅದಕ್ಕೆ ನಿರಾಕರಿಸಿದ ಟೇಲರ್, ಬೇಕಿದ್ದರೆ ಹೇಗಿದೆಯೋ ಹಾಗೇ ಬ್ಲೌಸ್ ತೆಗೆದುಕೊಂಡು ಹೋಗಿ ಎಂದು ಖಡಕ್ಕಾಗಿ ಹೇಳಿಬಿಟ್ಟರು.

ಸಿಟ್ಟಿಗೆದ್ದ ಪೂನಂ ಸೀದಾ ಹೋಗಿ 'ಅಹಮದಾಬಾದ್ ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗ'ದ ಬಾಗಿಲು ಬಡಿದರು. ಆರಂಭದಲ್ಲಿ ಟೇಲರ್ ಹಾಜರಾಗದಿದ್ದರೂ ವಿಚಾರಣೆಯನ್ನು ಮುಂದುವರಿಸಿದ ಆಯೋಗ, ಆತನ ಸೇವಾ ವೈಫಲ್ಯವನ್ನು ಗುರುತಿಸಿತು. ಅಲ್ಲದೆ ಅದಕ್ಕಾಗಿ ಪೂನಂ ಅವರಿಗೆ ಆದ ಮಾನಸಿಕ ಕಿರುಕುಳವನ್ನೂ ಪರಿಗಣಿಸಿ ಅವರ ಪರವಾಗಿ ತೀರ್ಪಿತ್ತಿತು.

4,395 ಮುಂಗಡ ಹಣವನ್ನು ವಾರ್ಷಿಕ ಶೇ 7ರಷ್ಟು ಬಡ್ಡಿಯೊಂದಿಗೆ 45 ದಿನಗಳೊಳಗೆ ಪಾವತಿಸಬೇಕು, ಮಾನಸಿಕ ಕಿರುಕುಳಕ್ಕಾಗಿ ₹ 2,000 ದಂಡ ಮತ್ತು ಆಯೋಗಕ್ಕೆ ಎಡತಾಕಲು ಮಾಡಿದ ಖರ್ಚು ₹ 2,000 ಸೇರಿ ಒಟ್ಟು 11,500 ರೂಪಾಯಿಯನ್ನು ಪೂನಂ ಅವರಿಗೆ ತೆರಬೇಕು ಎಂದು ಟೇಲರ್‌ಗೆ ಸೂಚಿಸಿತು.

'ಹಣ ವಸೂಲು ಮಾಡುವುದಷ್ಟೇ ನನ್ನ ಉದ್ದೇಶ ಆಗಿರಲಿಲ್ಲ, ನ್ಯಾಯವನ್ನು ಎತ್ತಿ ಹಿಡಿಯಬೇಕಿತ್ತು. ಗ್ರಾಹಕರೊಂದಿಗೆ ಅನುಚಿತವಾಗಿ ವರ್ತಿಸುವುದು ಸರಿಯಲ್ಲ. ನನಗೀಗ ಸಮಾಧಾನ ಆಗಿದೆ. ಈ ಪ್ರಕರಣ ದಿಂದ ಇತರರೂ ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಹೊಂದುವಂತೆ ಆಗಬೇಕು' ಎಂದಿದ್ದಾರೆ ಪೂನಂ.



ಗರ್ಭಜಲ ಹೆಚ್ಚಾಗಿದೆಯೇ?



ಸ್ಪಂದನ
ಡಾ. ವೀಣಾ ಎಸ್. ಭಟ್

• **ನನಗೆ 32 ವರ್ಷ, ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಮದುವೆಯಾಗಿ ಮೂರನೇ ವರ್ಷ. ಮೊದಲ ಬಾರಿ ಗರ್ಭ ಧರಿಸಿದ್ದು, 7ನೇ ತಿಂಗಳು ನಡೆಯುತ್ತಿದೆ. ಖಾಸಗಿ ಆಸ್ಪತ್ರೆಯಲ್ಲಿ ತೋರಿಸಿಕೊಳ್ಳುತ್ತಿರುವೆ. ನನಗೆ ಆಗಾಗ ಹೊಟ್ಟೆನೋವು ಬರುತ್ತಿದ್ದರಿಂದ ಕಳೆದ ವಾರ ಮತ್ತೊಮ್ಮೆ ಸ್ಕ್ಯಾನ್ ಮಾಡಿದರು. ಗರ್ಭಜಲ (ನೆತ್ತಿನೀರು)/ ಆಮ್ನಿಯೋಟಿಕ್ ದ್ರವ ಹೆಚ್ಚಾಗಿದೆ, ಮಗು ಬೇಗ ಬೆಳೆಯುತ್ತಿದೆ, ಸಿಹಿ ತಿನ್ನಬೇಡಿ, ಡಯಾಬಿಟಿಸ್ ಬರಬಹುದು ಎಂದಿದ್ದಾರೆ. ಗಾಬರಿಯಾಗುತ್ತಿದೆ, ಏನು ಮಾಡಲಿ?**

ವರ್ಣಶ್ರೀ, ಮೈಸೂರು

ಗರ್ಭಜಲ ಎಂದರೆ ಬರೀ ನೀರಲ್ಲ. ಗರ್ಭಾವಸ್ಥೆಯಲ್ಲಿ ಶಿಶುವನ್ನು ಸುತ್ತುವರಿದಿರುವ ಒಂದು ಜೀವಜಲ ಎನ್ನಬಹುದು. ಇದರ ಉತ್ಪಾದನೆಯಲ್ಲಿ ತಾಯಿ– ಮಗು ಇಬ್ಬರ ಪಾತ್ರವೂ ಇರುತ್ತದೆ. ಗರ್ಭಧಾರಣೆಯ ಆರಂಭಿಕ ಹಂತದಲ್ಲಿ ಮೂರು ತಿಂಗಳವರೆಗೆ ಗರ್ಭಜಲ ತಾಯಿಯ ರಕ್ತದಿಂದಲೇ ಉತ್ಪತ್ತಿಯಾಗುತ್ತದೆ. ನಂತರದ ದಿನಗಳಲ್ಲಿ ಮಗುವೇ ಈ ಗರ್ಭಜಲದ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಗುವಿನ ಮೂತ್ರಪಿಂಡ ಕಾರ್ಯನಿರ್ವಹಿಸಲು ಆರಂಭಿಸಿದ ಮೇಲೆ ಅದರ ಮೂತ್ರ ವಿಸರ್ಜನೆಯು ಆಮ್ನಿಯೋಟಿಕ್ ದ್ರವದ ಪ್ರಮುಖ ಮೂಲವಾಗುತ್ತದೆ. ಮಗುವಿನ ಶ್ವಾಸಕೋಶ ಕೂಡ ಈ ಗರ್ಭಜಲಕ್ಕೆ ದ್ರವವನ್ನು ಸ್ರವಿಸಿ ಹೀರಿಕೊಳ್ಳುತ್ತದೆ. ಪ್ಲಾಸೆಂಟಾ ಸಹ ಇದರ ಉತ್ಪಾದನೆಗೆ ಸಹಾಯ ಮಾಡುತ್ತದೆ. ಇದರಲ್ಲಿ ಸಕ್ಕರೆ, ಲವಣ, ಸಸಾರಜನಕ, ಪ್ರೋಸ್ಟ್‌ಗ್ಲಾಂಡಿನ್‌ನಂತಹ ರಸದೂತಗಳು, ಶಿಶುವಿನ ತ್ಯಕ್ತ ಜೀವಕೋಶಗಳಂತಹವು ಇರುತ್ತವೆ. ಇದರ ಪ್ರಮಾಣ 20 ವಾರಗಳಲ್ಲಿ 50 ಮಿಲಿ ಲೀಟರ್ ಇದ್ದು, 36 ವಾರಗಳಲ್ಲಿ ಒಂದು ಲೀಟರ್‌ನಷ್ಟು ಆಗುತ್ತದೆ. ನಂತರ ಇದರ ಪ್ರಮಾಣ ಸ್ವಲ್ಪ ಕಡಿಮೆಯಾಗುತ್ತಾ ಬರುತ್ತದೆ. ಈ ದ್ರವವು ಗರ್ಭಸ್ಥ ಶಿಶುವನ್ನು ಆಘಾತಗಳಿಂದ ರಕ್ಷಿಸುವುದಲ್ಲದೆ, ಮಗುವಿನ ಚಲನೆಗೆ ಅವಕಾಶ ನೀಡಿ ಸ್ನಾಯು ಮತ್ತು ಮೂಳೆಗಳ ಬೆಳವಣಿಗೆ, ಉಸಿರಾಟದ ವ್ಯವಸ್ಥೆ, ಜೀರ್ಣಾಂಗ ವ್ಯವಸ್ಥೆಗೆ ಸಹಾಯ ಮಾಡುತ್ತದೆ. ಈ ದ್ರವದ ಪ್ರಮಾಣವನ್ನು ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಸಹಾಯದಿಂದ ಪರೀಕ್ಷಿಸಿ ಅದರ ಸೂಚ್ಯಂಕವನ್ನು ಗುರುತಿಸುತ್ತಾರೆ. ಅದು 8ರಿಂದ 18ರಷ್ಟು ಇದ್ದರೆ ಸಾಮಾನ್ಯ ಎಂದಾಗುತ್ತದೆ. 24ಕ್ಕಿಂತ ಹೆಚ್ಚಾದಾಗ ಅದನ್ನು ಜಲಗರ್ಭ (ಪಾಲಿಹೈಡ್ರಾಮ್ನಿಯಾಸ್) ಎನ್ನುತ್ತಾರೆ.

ಇದಕ್ಕೆ ಕಾರಣಗಳು ಹಲವು. ಮಗುವಿಗೆ ಅನ್ನನಾಳದ ಸಮಸ್ಯೆ ಇದ್ದಾಗ, ಶ್ವಾಸನಾಳ ಹಾಗೂ ಅನ್ನನಾಳದ ಫಿಸ್ಟುಲಾ ಇದ್ದಾಗ ನರಮಂಡಲವು ಅಸಹಜವಾಗಿ ಇದ್ದಾಗ, ಆ್ಯನ್‌ಎನ್‌ಸೆಫಲಿ, ಸ್ಪೈನಾ ಬೈಫಿಡಾದಂತಹ ಕಾರಣಗಳಿದ್ದಾಗ, ವರ್ಣತಂತುವಿನ ಸಮಸ್ಯೆ, ಹೃದಯದ ಸಮಸ್ಯೆ ಇದ್ದಾಗಲೂ ಗರ್ಭಜಲ ಹೆಚ್ಚಾಗಬಹುದು. ಅವಳಿ ಗರ್ಭದಲ್ಲಿ, ರಕ್ತದ ಗುಂಪಿನಲ್ಲಿ ಸಾಮರಸ್ಯ ಇಲ್ಲದಿದ್ದಾಗ, ತಾಯಿಗೆ ಕೆಲವು ಸೋಂಕುಗಳಿದ್ದಾಗಲೂ ಈ ಆಮ್ನಿಯಾಟಿಕ್ ದ್ರವವು ಹೆಚ್ಚಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ, ಇತ್ತೀಚಿನ ದಿನಗಳಲ್ಲಿ ಗರ್ಭಧಾರಣೆಯಲ್ಲಿ ಮಧುಮೇಹ ಉಂಟಾಗುವುದು ಹೆಚ್ಚುತ್ತಿದೆ. ಇದರಿಂದ ಮಗುವಿಗೆ ಹೆಚ್ಚು ಮೂತ್ರ ಉತ್ಪಾದಿಸುವಂತೆ ಪ್ರಚೋದನೆಯಾಗಿ ಗರ್ಭಜಲ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಗರ್ಭಧಾರಣೆ ಖಚಿತವಾದ ತಕ್ಷಣ ಮತ್ತು ನಂತರ 24ರಿಂದ 28 ವಾರಗಳೊಳಗೆ ಒಜಿಸಿಟಿ ಪರೀಕ್ಷೆ– 75 ಗ್ರಾಮ್ ಗ್ಲೂಕೋಸ್ ಕುಡಿಸಿ ಪರೀಕ್ಷೆ– ಮಾಡಿಸಿದಾಗ ಇದರ ಬಗ್ಗೆ ಮಾಹಿತಿ ಸಿಗುತ್ತದೆ.

ಪ್ರತಿ ಗರ್ಭಿಣಿಗೂ ಮಧುಮೇಹ ಬರದ ಹಾಗೆ ಮುಂಜಾಗ್ರತೆ ವಹಿಸಲು ವೈದ್ಯರು ತಿಳಿಸುತ್ತಾರೆ. ಹೆಚ್ಚು ನಾರಿನಾಂಶ ಇರುವ ಹಸಿರುಸೊಪ್ಪು, ತರಕಾರಿಗಳು, ಪ್ರೋಟೀನ್ ಅಂಶವಿರುವ ಬೇಳೆಕಾಳುಗಳು, ಮೊಟ್ಟೆ, ಒಮೇಗಾ-3 ಅಂಶವುಳ್ಳ ಒಣ ಬಾದಾಮಿ, ವಾಲ್ನಟ್‌ನಂತಹವುಗಳನ್ನು ಸೇವಿಸಬೇಕು. ಸಾಧ್ಯವಾದಷ್ಟೂ ದೈಹಿಕ ಚಟುವಟಿಕೆಗೆ ಪ್ರಾಮುಖ್ಯ ಕೊಡಬೇಕು. ಸಿಹಿ ಪದಾರ್ಥ, ಜಂಕ್‌ಫುಡ್ ಸೇವನೆ ಬಿಡಬೇಕು. ಇನ್ನು ಈ ಗರ್ಭಜಲ ಹೆಚ್ಚಾದಾಗ ಗರ್ಭಿಣಿಯರಿಗೆ ಆಗಾಗ ಹೊಟ್ಟೆನೋವು ಬಂದಹಾಗೆ ಆಗುವುದು, ಓಡಾಡಿದಾಗ ಏದುಸಿರು ಉಂಟಾಗಿ ನಡೆದಾಡುವುದು ಕಷ್ಟವಾಗಬಹುದು. ಬೆನ್ನುನೋವು, ಕಾಲು ಊತ, ಕೆಲವೊಮ್ಮೆ ಅಕಾಲಿಕವಾಗಿ ಗರ್ಭಜಲ ಸೋರಿಕೆಯಾಗಬಹುದು. ಆಗ ಹೆರಿಗೆ ನೋವು ಆರಂಭವಾಗಿ ಅಕಾಲಿಕ ಹೆರಿಗೆಗೂ ಕಾರಣವಾಗಬಹುದು. ಅಕಾಲಿಕವಾಗಿ ಕಸ ಬಿಟ್ಟುಕೊಳ್ಳುವುದು, ಹೊಕ್ಕಳುಬಳ್ಳಿ ಜಾರುವಂತಹ ಅವಘಡಗಳು ಆಗಬಹುದು. ಹಾಗಾಗಿ, ಸೂಕ್ತ ಸಮಯದಲ್ಲಿ ವೈದ್ಯರ ತಪಾಸಣೆಗೆ ಒಳಗಾಗಿ ಚಿಕಿತ್ಸೆ ತೆಗೆದುಕೊಳ್ಳುವುದು ಒಳ್ಳೆಯದು. ಗಾಬರಿಯಾಗಬೇಡಿ, ಮುಂಜಾಗ್ರತೆ ವಹಿಸಿ. ಅಷ್ಟಕ್ಕೂ ಶೇಕಡ 60ಕ್ಕಿಂತ ಹೆಚ್ಚಿನ ಸಂದರ್ಭಗಳಲ್ಲಿ ಗರ್ಭಜಲ ಹೆಚ್ಚಳಕ್ಕೆ ಕಾರಣ ಇನ್ನೂ ಅಸ್ಪಷ್ಟವೇ ಆಗಿದೆ ಮತ್ತು ಗರ್ಭಜಲ ಸ್ವಲ್ಪ ಹೆಚ್ಚಾದಾಗ ಏನೂ ತೊಂದರೆ ಆಗುವುದಿಲ್ಲ. ನೀವು ಧೈರ್ಯವಾಗಿ ಇರುವುದು ಮುಖ್ಯ.

ಅಧ್ಯಾಪಕ, ಸಿಬ್ಬಂದಿಗೆ 'ಆಧಾರ್' ಹಾಜರಾತಿ

ಅನಧಿಕೃತ ಗೈರು, ತಡವಾಗಿ ಹಾಜರು, ಬೇಗ ಹೊರಡುವ ಚಾಳಿಗೆ ಕಡಿವಾಣ ಹಾಕುವ ಆಶಯ

● ಎ.ಎಂ.ಸುರೇಶ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿ, ಸರ್ಕಾರಿ ಪದವಿ ಕಾಲೇಜುಗಳ ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗೆ ಆಧಾರ್ ಆಧಾರಿತ ಬಯೊಮೆಟ್ರಿಕ್ ಹಾಜರಾತಿ ವ್ಯವಸ್ಥೆ ಕಡ್ಡಾಯ ಮಾಡಲಾಗಿದೆ. ಅನಧಿಕೃತ ಗೈರು, ತಡವಾಗಿ ಕಾಲೇಜಿಗೆ ಬರುವುದು, ಬೇಗ ಹೊರಡುವ ಚಾಳಿಗಳಿಗೆ ಕಡಿವಾಣ ಹಾಕುವ ಉದ್ದೇಶವನ್ನು ಹೊಸ ವ್ಯವಸ್ಥೆ ಹೊಂದಿದೆ.

ಇಲಾಖೆಯ ಅಧೀನದಲ್ಲಿ ಬರುವ ಎಲ್ಲ ಸಿಬ್ಬಂದಿ ತಮ್ಮ ಮೊಬೈಲ್‌ನಲ್ಲಿ AadhaarBAS ಮತ್ತು AadhaarFaceRD ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಅದರ ಮೂಲಕವೇ ಕಡ್ಡಾಯವಾಗಿ ಹಾಜರಾತಿಯನ್ನು ದಾಖಲಿಸಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತೆ ಎನ್. ಮಂಜುಶ್ರೀ ಅವರು ಸುತ್ತೋಲೆ ಹೊರಡಿಸಿದ್ದಾರೆ.

ಮುಖ್ಯಾಂಶಗಳು

- ಸಿಬ್ಬಂದಿಯ ಮೇಲೆ ನಿಗಾ ಇಡಲು ಅನುಕೂಲ
- ದೂರುಗಳ ನೈಜತೆ ಪರಿಶೀಲನೆಗೂ ಸಹಕಾರಿ
- ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಈಗಾಗಲೇ ಬಹುತೇಕ ಜಾರಿ

ಸಿಬ್ಬಂದಿಯು ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ನಂತರ ಆಧಾರ್ ಕಾರ್ಡ್‌ನ ಕೊನೆಯ ಆರು ಅಂಕಿಗಳನ್ನು ನೀಡಿ ಎಂಟ್ರಿ ಮಾಡಿಕೊಳ್ಳಬೇಕು. ಬಳಿಕ ಅದರಲ್ಲಿ ಅವರ ಕೆಲಸಕ್ಕೆ ಸಂಬಂಧಿಸಿದ ವಿವರಗಳನ್ನು ಅಪ್‌ಲೋಡ್ ಮಾಡಬೇಕು. ಇದನ್ನು ಒಮ್ಮೆ ಮಾಡಿದರೆ ಸಾಕು, ಎಲ್ಲ ಮಾಹಿತಿ ಅದರಲ್ಲಿ ಕಾಯಂ ಆಗಿ ಸಂಗ್ರಹವಾಗಿರುತ್ತದೆ. ಇದಾದ ಬಳಿಕ ಸಿಬ್ಬಂದಿಯ ಲಾಗಿನ್, ಲಾಗ್‌ಔಟ್ ಮೊಬೈಲ್ ಆ್ಯಪ್ ಮೂಲಕವೇ ದಾಖಲಾಗುತ್ತದೆ.

'ಕೆಲಸ ಮಾಡುವ ಸ್ಥಳದ ನೂರು ಮೀಟರ್ ವ್ಯಾಪ್ತಿಯ ಒಳಗೆ ಇದ್ದರೆ ಮಾತ್ರ ಲಾಗಿನ್, ಲಾಗ್‌ಔಟ್ ಆಗಲು ಸಾಧ್ಯ. ಆ ವ್ಯಾಪ್ತಿಗಿಂತ ದೂರ ಇದ್ದರೆ ಆ್ಯಪ್ ಓಪನ್ ಆಗುವುದಿಲ್ಲ. ಹೀಗಾಗಿ, ಕಾಲೇಜಿಗೆ ಹೋಗಿಯೇ ಹಾಜರಾತಿ ದಾಖಲಿಸಬೇಕಾಗುತ್ತದೆ. ದುರುಪಯೋಗಕ್ಕೆ ಅವಕಾಶ ಇರುವುದಿಲ್ಲ. ಇದು ಮೊಬೈಲ್ ಆಧಾರಿತ ಬಯೊಮೆಟ್ರಿಕ್ ವ್ಯವಸ್ಥೆ ಆಗಿದ್ದು, ಕೇಂದ್ರ ಕಚೇರಿಯಲ್ಲಿನ ಹಿರಿಯ ಅಧಿಕಾರಿಗಳು ಆನ್‌ಲೈನ್ ಮೂಲಕವೇ ಹಾಜರಾತಿಯನ್ನು ಪರಿಶೀಲಿಸಬಹುದು' ಎಂದು ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ' ತಿಳಿಸಿದರು.

ಹೊಸ ಮೊಬೈಲ್ ಖರೀದಿಸಬೇಕಾಗಿದೆ...

'ಆಧಾರ್ ಆಧಾರಿತ ಬಯೊಮೆಟ್ರಿಕ್ ಹಾಜರಾತಿ ವ್ಯವಸ್ಥೆಯ ಆ್ಯಪ್ ಕೆಲವೊಂದು ಮೊಬೈಲ್ ಫೋನ್‌ಗಳಲ್ಲಿ ಡೌನ್ ಲೋಡ್ ಆಗುತ್ತಿಲ್ಲ. ಇದಕ್ಕಾಗಿ 5ಜಿ ಮೊಬೈಲ್ ಖರೀದಿಸಬೇಕಾಗಿದೆ. ಯಾವುದೇ ಹೊಸ ಫೋನ್ ಖರೀದಿಸಿದರೂ ಸಾಮಾನ್ಯವಾಗಿ ಎರಡು ವರ್ಷಕ್ಕೆ ತಂತ್ರಜ್ಞಾನ ಬದಲಾಗಿರುತ್ತದೆ. ಆಗ ಮತ್ತೆ ಹೊಸ ಫೋನ್ ಖರೀದಿಸಬೇಕಾಗುತ್ತದೆ' ಎಂದು ಅಧ್ಯಾಪಕರೊಬ್ಬರು ತಿಳಿಸಿದರು.

'ನಿಯಮಾವಳಿ ಪ್ರಕಾರ ಐದು ಸಾವಿರಕ್ಕಿಂತ ಹೆಚ್ಚಿನ ಬೆಲೆಯ ಯಾವುದೇ ವಸ್ತು ಖರೀದಿಸಬೇಕಾದರೆ ಇಲಾಖೆಯ ಅನುಮತಿ ಪಡೆಯಬೇಕು. ಆದರೆ, ಇಲಾಖೆಯಲ್ಲಿ ಯಾವುದಕ್ಕೂ ಅನುಮತಿ ನೀಡುತ್ತಿಲ್ಲ. ಹೀಗಾಗಿ ಎಲ್ಲರೂ ವಾಮಮಾರ್ಗದ ಮೂಲಕವೇ ಫೋನ್ ಖರೀದಿಸುತ್ತಾರೆ. ನಿಯಮ ಉಲ್ಲಂಘಿಸಲು ಸರ್ಕಾರವೇ ಪರೋಕ್ಷವಾಗಿ ದಾರಿ ಮಾಡಿಕೊಟ್ಟಿದೆ' ಎಂದೂ ಅವರು ಹೇಳಿದರು.

'ಅಕ್ಟೋಬರ್ 31ರ ಒಳಗೆ ಎಲ್ಲ ಸಿಬ್ಬಂದಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ವೈಯಕ್ತಿಕ ವಿವರಗಳನ್ನು ಅಪ್‌ಲೋಡ್ ಮಾಡಬೇಕು ಎಂದು ಸೂಚಿಸಲಾಗಿತ್ತು. ಬಹುತೇಕ ಸಿಬ್ಬಂದಿ ಮಾಡಿದ್ದಾರೆ. ನವೆಂಬರ್ ಒಂದರಿಂದ ನೂತನ ಹಾಜರಾತಿ ವ್ಯವಸ್ಥೆಯನ್ನು ಕಡ್ಡಾಯ ಮಾಡಲಾಗಿದೆ. ಕೆಲವರಿಗೆ ತಾಂತ್ರಿಕ ತೊಂದರೆ ಎದುರಾಗಿದೆ ಎಂಬ ಮಾಹಿತಿಗಳು ಬಂದಿವೆ. ಕೆಲ ದಿನಗಳಲ್ಲಿ ಸರಿಯಾಗಲಿದೆ' ಎಂದು ಹೇಳಿದರು.

'ಆಧಾರ್ ಆಧಾರಿತ ಹಾಜರಾತಿಯಿಂದಾಗಿ ಸಿಬ್ಬಂದಿಯ ಚಲನವಲನದ ಮೇಲೆ ನಿಗಾ ಇಡಬಹುದು. ಪ್ರಾಂಶುಪಾಲರಿಗೆ ಸಿಬ್ಬಂದಿಯ ಮೇಲೆ ನಿಯಂತ್ರಣ ಇರುತ್ತದೆ. ಅಲ್ಲದೆ ಅವರ ಕೆಲಸವೂ ಸುಲಭವಾಗುತ್ತದೆ. ಕಚೇರಿ ಕೆಲಸಕ್ಕೆ ತೊಂದರೆ ಆಗುವುದಿಲ್ಲ. ಕೆಲಸ ಮಾಡುವ ಸಿಬ್ಬಂದಿಗೆ ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ. ಆದರೆ, ಅನಧಿಕೃತವಾಗಿ ಗೈರುಹಾಜರಾಗುತ್ತಿದ್ದ, ಇಷ್ಟಬಂದ ಹಾಗೆ ಕಚೇರಿಗೆ ಬರುತ್ತಿದ್ದವರಿಗೆ ಹೊಸ ವ್ಯವಸ್ಥೆ ಇಷ್ಟ ಆಗದೇ ಇರಬಹುದು' ಎಂದು ಅಧ್ಯಾಪಕರೊಬ್ಬರು ಅಭಿಪ್ರಾಯಪಟ್ಟರು.

ತಡವಾಗುವುದಾದರೆ ಎಂಟ್ರಿ ಅಗತ್ಯ: ಬಸ್, ರೈಲು ವಿಳಂಬದಿಂದಾಗಿ ಒಂದು ವೇಳೆ ತಡವಾಗಿ ಬರುವುದಾದರೆ ಆ್ಯಪ್ ಮೂಲಕವೇ ಎಂಟ್ರಿ ಮಾಡಿ ಪ್ರಾಂಶುಪಾಲರ ಒಪ್ಪಿಗೆ ಪಡೆಯಬೇಕು. ಇದಕ್ಕೆ ಅವಕಾಶ ಕಲ್ಪಿಸಲಾಗಿದೆ. 'ಡಿ' ದರ್ಜೆ ಸಿಬ್ಬಂದಿ, ಅತಿಥಿ ಉಪನ್ಯಾಸಕರಿಗೂ ಆಧಾರ್ ಆಧಾರಿತ ಹಾಜರಾತಿ ವ್ಯವಸ್ಥೆ ಅನ್ವಯವಾಗಲಿದೆ. ಅಲ್ಲದೆ, ಎಲ್ಲರೂ ದಿನಕ್ಕೆ ಏಳು ಗಂಟೆ ಕಾಲ ಕಚೇರಿಯಲ್ಲಿ ಇರುವುದು ಕಡ್ಡಾಯವಾಗಲಿದೆ.

ಹೊಸ ಗಡುವು ನಿಗದಿ

'ನವೆಂಬರ್ 1ರಿಂದ ಆಧಾರ್ ಆಧಾರಿತ ಬಯೊಮೆಟ್ರಿಕ್ ಹಾಜರಾತಿ ವ್ಯವಸ್ಥೆ ಕಡ್ಡಾಯಗೊಳಿಸಲಾಗಿದೆ. ಆದರೆ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಿಬ್ಬಂದಿ ತೊಡಗಿದ್ದ ಕಾರಣ ಕೆಲವು ಕಾಲೇಜುಗಳಲ್ಲಿ ಇನ್ನೂ ಜಾರಿಯಾಗಿಲ್ಲ. ಈ ತಿಂಗಳ ಅಂತ್ಯದ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳಲಿದೆ' ಎಂದು ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತೆ ಎನ್. ಮಂಜುಶ್ರೀ 'ಪ್ರಜಾವಾಣಿ'ಗೆ ತಿಳಿಸಿದರು.


ಮಂಜುಶ್ರೀ

'ಅಧ್ಯಾಪಕರ ಗೈರು, ತಡವಾಗಿ ಬರುವುದು ಇತ್ಯಾದಿಗಳ ಬಗ್ಗೆ ದೂರುಗಳು ಬರುತ್ತವೆ. ಆದರೆ, ಕೆಲವೊಂದು ದೂರುಗಳಲ್ಲಿ ನೈಜತೆ ಇರುವುದಿಲ್ಲ. ಹೊಸವ್ಯವಸ್ಥೆಯಿಂದಾಗಿ ಕೇಂದ್ರ ಕಚೇರಿಯಿಂದಲೇ ಎಲ್ಲವನ್ನೂ ನಿರ್ವಹಣೆ ಮಾಡಬಹುದು. ಅಧ್ಯಾಪಕರ ಮೇಲೆ ನಿಗಾ ಇಡಲು ಅನುಕೂಲವಾಗಲಿದೆ' ಎಂದು ಅವರು ತಿಳಿಸಿದರು.

'ಬಯೊಮೆಟ್ರಿಕ್ ಈಗಲೂ ಇದೆ. ಆದರೆ, ಅದು ಆಧಾರ್ ಆಧಾರಿತ ಅಲ್ಲ. ಹೀಗಾಗಿ ಆನ್‌ಲೈನ್ ಮೂಲಕ ನಿಗಾ ಇಡಲು ಸಾಧ್ಯವಾಗುತ್ತಿರಲಿಲ್ಲ. ಹೊಸ ವ್ಯವಸ್ಥೆ ಆಧಾರ್ ಆಧಾರಿತವಾಗಿದ್ದು, ಎಲ್ಲವೂ ಆನ್‌ಲೈನ್‌ಮಯವಾಗಿದೆ. ರಜೆಯನ್ನು ಸಹ ಆನ್‌ಲೈನ್ ಮೂಲಕವೇ ಎಂಟ್ರಿ ಮಾಡಬಹುದು' ಎಂದು ಅಧ್ಯಾಪಕರೊಬ್ಬರು ತಿಳಿಸಿದರು.

'ಸಿಬ್ಬಂದಿ ನಿಯಂತ್ರಿಸುವುದು ನಮಗೆ ಸುಲಭವಾಗಲಿದೆ. ಅಲ್ಲದೆ ಅಧ್ಯಾಪಕರಲ್ಲಿ ಶಿಸ್ತು ಬರಲಿದೆ ಎಂಬುದು ನಿಜ. ಆದರೆ, ವಿದ್ಯಾಸಂಸ್ಥೆಗಳು ಕಾರ್ಖಾನೆಗಳಲ್ಲ, ಅಧ್ಯಾಪಕರು ಪಾಠ ಮಾಡುವ ಮುನ್ನ ಮನೆಯಲ್ಲಿ ಸಿದ್ಧತೆ ನಡೆಸುತ್ತಾರೆ. ಅದನ್ನೂ ಗಮನಿಸಬೇಕಾಗಿತ್ತು. ಹೊಸ ವ್ಯವಸ್ಥೆಯಿಂದ ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಬರಬಹುದು' ಎಂದು ಪ್ರಾಂಶುಪಾಲರೊಬ್ಬರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಜಾತಿ ಪ್ರಮಾಣಪತ್ರ ವಿತರಣೆಗೆ ಸಿ.ಎಂ ಕ್ರಮ: ಆಂಜನೇಯ

ಬೆಂಗಳೂರು: 'ಒಳಮೀಸಲಾತಿ ಸೌಲಭ್ಯದಡಿ ವೈದ್ಯಕೀಯ ಸೀಟು ಪಡೆಯಲು ಜಾತಿ ಪ್ರಮಾಣಪತ್ರಗಳನ್ನು ಒದಗಿಸಬೇಕೆಂಬ ಆದೇಶ ಆತಂಕಕ್ಕೆ ಕಾರಣವಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಅನುಸಾರ 'ಗ್ರಾಮ ಒನ್' ಸೇರಿ ಸರ್ಕಾರದ ಅಧೀನದಲ್ಲಿರುವ ಸೇವಾ ಕೇಂದ್ರಗಳಲ್ಲಿ ಜಾತಿ ಪ್ರಮಾಣ ಪತ್ರ ನೀಡಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ' ಎಂದು ಮಾಜಿ ಸಚಿವ ಎಚ್. ಆಂಜನೇಯ ತಿಳಿಸಿದ್ದಾರೆ.



ಜಾತಿ ಪ್ರಮಾಣಪತ್ರ ವಿತರಣೆ ವಿಷಯದಲ್ಲಿದ್ದ ಗೊಂದಲಕ್ಕೆ ಸಂಬಂಧಿಸಿದಂತೆ ಆಂಜನೇಯ ಅವರು ಸಿದ್ದರಾಮಯ್ಯ ಅವರ ಜತೆ ಮಾತುಕತೆ ನಡೆಸಿದರು. ಬಳಿಕ ಈ ಬಗ್ಗೆ ಮಾಹಿತಿ ನೀಡಿರುವ ಅವರು, 'ಜಾತಿ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ತಕ್ಷಣ ಸಮಸ್ಯೆ ಪರಿಹರಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಸೋಮವಾರದಿಂದಲೇ ಮಾದಿಗ-ಛಲವಾದಿ ಸಮುದಾಯದವರು ಪ್ರಮಾಣಪತ್ರ ಪಡೆಯಬಹುದು' ಎಂದು ಹೇಳಿದರು.

'ಮಾದಿಗ ಮೂಲ ಜಾತಿಯವರು ಜಾತಿಸೂಚಕ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರಕ್ಕೆ ಸೇರಿದವರಾಗಿದ್ದರೇ ಪ್ರವರ್ಗ ಎ, ಹೊಲೆಯ ಮೂಲ ಜಾತಿಯವರು ಜಾತಿಸೂಚಕ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರಕ್ಕೆ ಸೇರಿದವರಾಗಿದ್ದರೆ ಪ್ರವರ್ಗ ಬಿ ಎಂದು ಪ್ರಮಾಣಪತ್ರ ಪಡೆಯಬಹುದು' ಎಂದರು.

ಪ್ರಚಾರಕ್ಕಾಗಿ ಕಾಗೇರಿ ಹೇಳಿಕೆ: ಲಾಡ್

ಧಾರವಾಡ: 'ಜನಗಣಮನ ... ರಾಷ್ಟ್ರಗೀತೆಯ ಅರ್ಥವನ್ನು ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ತಿಳಿಯಬೇಕು. ಪ್ರಚಾರಕ್ಕಾಗಿ ಹೇಳಿಕೆ ನೀಡಿದ್ದಾರೆ' ಎಂದು ಸಚಿವ ಸಂತೋಷ ಲಾಡ್ ಕುಟುಕಿದರು.

ಬ್ರಿಟಿಷ್ ಅಧಿಕಾರಿ ಹೊಗಳಲು ರಾಷ್ಟ್ರ ಗೀತೆ ಬರೆಯಲಾಗಿತ್ತು ಎಂದು ಕಾಗೇರಿ ಹೇಳಿಕೆ ಕುರಿತ ಸುದ್ದಿಗಾರರ ಪ್ರಶ್ನೆಗೆ, ಅವರು,'60 ವರ್ಷಗಳಿಂದ ಆ ರಾಷ್ಟ್ರ ಗೀತೆ ಹಾಡಿ, ತಗಾದೆ ಎತ್ತಿರುವುದು ಏಕೆ' ಎಂದು ಅವರು ಪ್ರಶ್ನಿಸಿದರು.

10 ವಿದ್ಯಾರ್ಥಿಗಳಿಗೆ ಲಲಿತಕಲಾ ಅಕಾಡೆಮಿ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿ ಹಮ್ಮಿಕೊಂಡಿದ್ದ ಪ್ರತಿಭಾನ್ವೇಷಣೆ ಸ್ಪರ್ಧೆಯಲ್ಲಿ 10 ವಿದ್ಯಾರ್ಥಿಗಳು ಬಹುಮಾನಕ್ಕೆ ಭಾಜನರಾಗಿದ್ದಾರೆ.

ಇಳಕಲ್‌ನ ವಿಜಯ ಚಿತ್ರಕಲಾ ಮಹಾವಿದ್ಯಾಲಯದ ಬನಶ್ರೀ ವಗ್ಗಾ, ಬೆಂಗಳೂರಿನ ಚಿತ್ರಕಲಾ ಮಹಾ ವಿದ್ಯಾಲಯದ ನೇಹ ಜಯದೇವ್, ಗೌತಮ್ ಎಸ್., ಮಂಗಳೂರಿನ ಮಹಾಲಸ ಚಿತ್ರಕಲಾ ಶಾಲೆಯಿಂದ ದಿಶಾ, ವೈಶಾಕ್ ರೈ, ಸಂದೇಶ್ ಎಂ.ಎಸ್., ದಾವಣಗೆರೆಯ ಲಲಿತಕಲಾ ಮಹಾವಿದ್ಯಾಲಯದ ವಿಠ್ಠಲ ಅಣ್ಣಪ್ಪ ಬರಕಳೆ, ಧಾರವಾಡದ ಸರ್ಕಾರಿ ಕಲಾ ಶಾಲೆಯ ಸುದೀಪ್ ಎ. ಕಮ್ಮಾರ, ಅರುಣ್ ಎ. ಗಾಣಗಿ ಹಾಗೂ ಕಲಬುರಗಿಯ ಎಂ.ಎಂ.ಕೆ ಕಾಲೇಜ್ ಆಫ್ ವಿಷ್ಯುಯಲ್ ಆರ್ಟ್‌ನ ಮೇಘ ಆರ್. ಅವರು ಈ ಬಹುಮಾನಕ್ಕೆ ಆಯ್ಕೆಯಾಗಿದ್ದಾರೆ.

ಈ ಬಹುಮಾನವು ತಲಾ ₹15 ಸಾವಿರ ನಗದು ಒಳಗೊಂಡಿದೆ. ಈ ಸ್ಪರ್ಧೆಯ ಭಾಗವಾಗಿ ಹಮ್ಮಿಕೊಳ್ಳಲಾದ ಕಲಾ ಶಿಬಿರಕ್ಕೆ 315 ಕಲಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ 30 ವಿದ್ಯಾರ್ಥಿಗಳು ಐದು ದಿನ ನಡೆದ ಕಲಾ ಶಿಬಿರದಲ್ಲಿ ಪಾಲ್ಗೊಂಡು, ಅತ್ಯುತ್ತಮ ಕಲಾಕೃತಿಗಳನ್ನು ರಚಿಸಿದ್ದರು. ಈ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿ, ಹತ್ತು ಮಂದಿಯನ್ನು ಬಹುಮಾನಕ್ಕೆ ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತ ತಿಳಿಸಿದ್ದಾರೆ.

ಸಂಪುಟ ಪುನರ್‌ರಚನೆಗೆ 'ಗುಜರಾತ್ ಮಾದರಿ'

ಮುಖ್ಯಮಂತ್ರಿ ಸಿದ್ದರಾಮಯ್ಯ ವೇಗಕ್ಕೆ ಡಿಕೆಶಿ ಬಣದ 'ಬೌನ್ಸರ್'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 15ರಂದು ಸಿದ್ದರಾಮಯ್ಯ ದೆಹಲಿಗೆ
- ಒಪ್ಪಿಗೆ ಸಿಕ್ಕರೆ ಇದೇ 30ಗಳಲ್ಲಿ ಸಂಪುಟ ಪುನರ್‌ರಚನೆ
- 15 ಸಚಿವರ ಕೈಬಿಡಲು ಹೈಕಮಾಂಡ್ ಒಲವು


ಸಿದ್ದರಾಮಯ್ಯ


ಶಿವಕುಮಾರ್

ನವದೆಹಲಿ: ಕರ್ನಾಟಕ ಕಾಂಗ್ರೆಸ್ ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಿದ ಬೆನ್ನಲ್ಲೇ ಸಚಿವ ಸಂಪುಟಕ್ಕೆ ಭರ್ಜರಿ ಸರ್ಜರಿ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಸಾಹ ತೋರುತ್ತಿರುವ ಹೊತ್ತಿನಲ್ಲೇ, 'ಗುಜರಾತ್ ಮಾದರಿ'ಯಲ್ಲಿ ಸಂಪುಟ ಪುನರ್ ರಚನೆ ಆಗಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ ದಾಳ ಉರುಳಿಸಿದೆ.

ಸಿದ್ದರಾಮಯ್ಯ ಅವರು ಇದೇ 15ರಂದು ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅವರು 2–3 ದಿನ ಇಲ್ಲೇ ಇದ್ದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಸಂಪುಟ ಪುನರ್ ರಚನೆಗೆ ಒಪ್ಪಿಗೆ ಪಡೆಯುವ ಇರಾದೆಯಲ್ಲಿದ್ದಾರೆ. ಹೈಕಮಾಂಡ್ ನಾಯಕರ ಒಪ್ಪಿಗೆ ಸಿಕ್ಕರೆ ನವೆಂಬರ್ 26ರೊಳಗೆ ಪುನರ್ ರಚನೆ ಮಾಡುವ ಯೋಚನೆಯಲ್ಲಿದ್ದಾರೆ.

ಜಲವಿವಾದ ಬಗೆಹರಿಸಲು ಕಾನೂನು ತಜ್ಞರೊಂದಿಗೆ ಸಮಾಲೋಚನೆ ಹಾಗೂ ಮತಕಳವು ಅಭಿಯಾನದ ಬಗ್ಗೆ ರಾಷ್ಟ್ರೀಯ ನಾಯಕರೊಂದಿಗೆ ಚರ್ಚಿಸಲು ರಾಷ್ಟ್ರ ರಾಜಧಾನಿಗೆ ಬಂದಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಬೆಳಿಗ್ಗೆ ವಾಪಸಾಗಿದ್ದಾರೆ. ಸಂಘಟನೆ ಜತೆಗೆ ರಾಜ್ಯ ಕಾಂಗ್ರೆಸ್‌ನಲ್ಲಾಗುತ್ತಿರುವ ಬೆಳವಣಿಗೆಗಳ ಬಗ್ಗೆ ರಾಷ್ಟ್ರೀಯ ನಾಯಕರ ಗಮನಕ್ಕೆ ತಂದಿದ್ದಾರೆ. ಶಿವಕುಮಾರ್ ಅವರು ವಾರಾಂತ್ಯದಲ್ಲಿ ಮತ್ತೆ ಬರಲಿದ್ದಾರೆ.

ನಿಷ್ಕ್ರಿಯ, ಪಕ್ಷ ಸಂಘಟನೆಗೆ ಕೊಡುಗೆ ನೀಡದ ಹಾಗೂ ಕಾರ್ಯಕರ್ತರ ಕೈಗೆ ಸಿಗದ ಸುಮಾರು 15 ಸಚಿವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಪಕ್ಷದ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಸಚಿವರ ಸಾಧನೆ ಕುರಿತು ಹೈಕಮಾಂಡ್ ವರದಿ ತರಿಸಿಕೊಂಡಿದೆ. ಸಂಪುಟ ಪುನರ್ ರಚನೆಗೆ ವೇಳೆ 'ಕಾಮರಾಜ್ ಸೂತ್ರ' ಅನುಸರಿಸುವ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆಗಳು ಆರಂಭವಾಗಿವೆ. ಹಿರಿಯ ಸಚಿವರನ್ನು ಕೈಬಿಟ್ಟು ಅವಕಾಶ ವಂಚಿತರನ್ನು ಪರಿಗಣಿಸಬೇಕು ಎಂದು ಶಾಸಕ ಬೇಳೂರು ಗೋಪಾಲಕೃಷ್ಣ, ಕೆ.ವೈ. ನಂಜೇಗೌಡ ಸೇರಿದಂತೆ ಹಲವರು ಧ್ವನಿ ಎತ್ತಿದ್ದಾರೆ. ಅದೇ ವೇಳೆ, ರಾಜ್ಯದಲ್ಲೂ ಗುಜರಾತ್ ಮಾದರಿ ಪುನರ್ ರಚನೆ ಆಗಬೇಕು ಎಂದು ಡಿ.ಕೆ.ಶಿವಕುಮಾರ್ ಬಣದವರು ಪ್ರಸ್ತಾಪಿಸಿದ್ದಾರೆ.

ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ತಮ್ಮ ಸಂಪುಟದ ಎಲ್ಲ 16 ಸಚಿವರಿಂದ ಕಳೆದ ತಿಂಗಳು ರಾಜೀನಾಮೆ ಪಡೆದಿದ್ದರು. ಸಂಪುಟ ವಿಸ್ತರಣೆ ವೇಳೆ ಹೊಸದಾಗಿ 19 ಶಾಸಕರಿಗೆ ಸಚಿವ ಸ್ಥಾನ ನೀಡಿದ್ದರು. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ 16 ಜನರ ಪೈಕಿ ಆರು ಮಂದಿಯನ್ನಷ್ಟೇ ಸಂಪುಟದಲ್ಲಿ ಉಳಿಸಿಕೊಂಡಿದ್ದರು. 2027ರ ವಿಧಾನಸಭಾ ಚುನಾವಣೆ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಟೇಲ್ ಈ ಕ್ರಮ ತೆಗೆದುಕೊಂಡಿದ್ದರು. ಗುಜರಾತ್‌ನಲ್ಲಿ ಬಿಜೆಪಿ ಎರಡು ದಶಕಗಳಿಂದ ಅಧಿಕಾರದಲ್ಲಿ ಇರುವುದು ಇಂತಹ ಪ್ರಯೋಗಗಳಿಂದಲೇ. ರಾಜ್ಯದಲ್ಲೂ ಇದೇ ಮಾದರಿ ಅನುಸರಿಸಬೇಕು. ಈ ವಿಷಯವನ್ನು ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಹಿರಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೊರತುಪಡಿಸಿ ಉಳಿದವರೆಲ್ಲ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು. ಸಾಧ್ಯವಾದಷ್ಟು ಹೊಸಬರಿಗೆ ಹಾಗೂ ಅವಕಾಶ ವಂಚಿತರಿಗೆ ಸ್ಥಾನ ಕಲ್ಪಿಸಬೇಕು. ಹಿರಿಯ ಸಚಿವರನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಿ ಹೊಣೆ ನಿಗದಿಪಡಿಸಬೇಕು. ಆಗ ಸಂಪುಟದಲ್ಲಿ ಹೊಸತನ ಬರಲಿದೆ. ಪಕ್ಷ ಸಂಘಟನೆಗೂ ಅನುಕೂಲವಾಗಲಿದೆ' ಎಂದು ಅವರು ಹೇಳಿದರು.

'ಕಂದಾಯ ಸಚಿವ ಕೃಷ್ಣ ಬೈರೇಗೌಡ ಸಚಿವ ಸ್ಥಾನ ತ್ಯಾಗದ ಮಾತುಗಳನ್ನಾಡಿದ್ದಾರೆ. ಉಳಿದ ಹಿರಿಯ ಸಚಿವರು ಅದೇ ರೀತಿಯ ಔದಾರ್ಯ ತೋರಲಿ. ನಮಗೂ ದಾರಿ ಮಾಡಿಕೊಡಲಿ' ಎಂದು ಶಾಸಕರೊಬ್ಬರು ಒತ್ತಾಯಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಕೆಲವು ನಾಯಕರು ಆಯಕಟ್ಟಿನ ಇಲಾಖೆಗಳ ಸಚಿವರಾಗುತ್ತಿದ್ದಾರೆ. ಪಕ್ಷ ಸಂಘಟನೆಗೆ ಅವರಿಂದ ಭಾರಿ ಕೊಡುಗೆಯೇನೂ ಸಿಗುತ್ತಿಲ್ಲ. ಅಂತಹವರಿಗೆ ಕೊಕ್ ನೀಡಬೇಕು' ಎಂಬ ಬೇಡಿಕೆಯನ್ನು ಡಿಕೆಶಿ ಬಣ ಮುಂದಿಟ್ಟಿದೆ.

ತಂತ್ರಕ್ಕೆ ಪ್ರತಿತಂತ್ರ

ಹೆಚ್ಚುವರಿ ಉಪಮುಖ್ಯಮಂತ್ರಿಗಳ ಸೃಷ್ಟಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗಬೇಕು ಎಂದು ಸಿದ್ದರಾಮಯ್ಯ ಆಪ್ತ ಸಚಿವರು ವರ್ಷದಿಂದ ಪರೋಕ್ಷವಾಗಿ ಧ್ವನಿ ಎತ್ತುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸತೀಶ್ ಜಾರಕಿಹೊಳಿ ಅಥವಾ ಈಶ್ವರ ಖಂಡ್ರೆ ಅವರನ್ನು ನೇಮಿಸಬೇಕು ಎಂದು ಸಿಎಂ ಬಣದ ಸಚಿವರು ಪ್ರಸ್ತಾಪಿಸುತ್ತಿದ್ದಾರೆ. ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿಸುವ ಮೂಲಕ ಶಿವಕುಮಾರ್ ಅವರ ಹಿಡಿತ ತಗ್ಗಿಸುವುದು ಈ ಬಣದ ಆಲೋಚನೆ. ಈ ತಂತ್ರಗಳಿಗೆ ತಿರುಗೇಟು ನೀಡಲು 'ಗುಜರಾತ್ ಮಾದರಿ'ಯನ್ನು ಡಿಕೆಶಿ ಬಣ ಮುಂದಿಟ್ಟಿದೆ. ಜತೆಗೆ, ಸಿದ್ದರಾಮಯ್ಯ ಆಪ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಸಂಪುಟದಲ್ಲಿದ್ದಾರೆ. ಅವರ 'ಹಾರಾಟ'ಕ್ಕೆ ಕಡಿವಾಣ ಹಾಕುವುದು ಹಾಗೂ ಸಂಪುಟ ಪುನರ್ ರಚನೆಯನ್ನು ಸಾಧ್ಯವಾದಷ್ಟು ಮುಂದೂಡುವುದು ಬಣದ ತಂತ್ರ ಎಂದು ಮೂಲಗಳು ಹೇಳಿವೆ.

ಪ್ರಜಾವಾಣಿ DH DECCAN HERALD
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ
ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ನಾರ್ಬರ್ಟ್ ಡಿಸೋಜಾ,** ಜಮಖಂಡಿ	1,00,000
2	**ರವಿ ಕೃಷ್ಣಮೂರ್ತಿ,** ನಂ.95, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು	50,000
3	**ನಾರಾಯಣ ಜೆ,** ಬೆಂಗಳೂರು	50,000
4	**ಬಿ.ಎಸ್.ನೂಲಾ,** ನಂ.225ಎ, ಮಾತೃ ಛಾಯಾ, ಮೊದಲ ಮಹಡಿ, 54ನೇ ಅಡ್ಡರಸ್ತೆ, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು	40,000
5	**ಆರ್.ನಾರಾಯಣ,** ಬೆಂಗಳೂರು	25,000
6	**ಕಾತ್ಯಾಯನಿ ಎಂ.ಎಸ್,** ಬೆಂಗಳೂರು	20,000
7	**ಗುರುಪಾದು ಕೆ.ಎಂ,** ನಂ. 40, ಮೊದಲ ಮಹಡಿ, 3ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ಶ್ರೇಯಸ್ ಕಾಲೊನಿ, 7ನೇ ಹಂತ, ಬೆಂಗಳೂರು	10,000
8	**ನರಸಿಂಹಮೂರ್ತಿ ಎ.ಆರ್,** ನಂ. 372/374, ಧನುಷ್ ಪ್ಯಾರಡೈಸ್, 5ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ವಿಜಯ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು	10,000
9	**ಮಧುಸೂದನ್ ಕೆ.ಪಿ,** ನಂ.1869/28, ಮಧುರ, 7ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಸ್ವಾಮಿ ವಿವೇಕಾನಂದ ಲೇಔಟ್, ಬೆಂಗಳೂರು	10,000
10	**ನಾರಾಯಣ್ ಶೆಟ್ಟಿ,** ಮೇಟಗಳ್ಳಿ, ಮೈಸೂರು	10,000
11	**ವಿ.ಬುಧ್ಯ,** ಬೆಂಗಳೂರು	10,000
12	**ವಸಂತ್,** ಬೆಂಗಳೂರು	7,500
13	**ವಿಜಯ್‌ಕುಮಾರ್ ಡಿ.ವಿ,** ಬೆಂಗಳೂರು	6,200
14	**ಭಿಕ್ಕು ಗೋಪಾಲ್ ಶೆಟ್ಟಿ,** ಬೆಂಗಳೂರು	5,100
15	**ಶಾಂತಾ ಡಿ. ಗೌಡ,** ನಂ. 1626, ಪದ್ಮಸಿರಿ, ಮೊದಲ ಮಹಡಿ, 6ನೇ ಅಡ್ಡರಸ್ತೆ, 21ನೇ ಮುಖ್ಯರಸ್ತೆ, 1ನೇ ಸೆಕ್ಟರ್, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು	5,100
16	**ನಾಗರಾಜ್,** ನಂ. 1026, 4ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಶ್ರೀರಾಂಪುರ 2ನೇ ಹಂತ, ಬೆಂಗಳೂರು	5,001
17	**ನಾಗರತ್ನ,** ಬೆಂಗಳೂರು	5,001
18	**ಸ್ನೇಹಕಾವೇರಿ,** ಬೆಂಗಳೂರು	5,001
19	**ಸುರೇಶ್ ಅಂಗಡಿ,** ಹೂವಿನಹಡಗಲಿ, ಬಳ್ಳಾರಿ	5,000

ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.finc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ

ಚಿಟಿಕೆ ಸುದ್ದಿ

ಶಿರಾಡಿ ಘಾಟ್: ರೈಲು-ಹೆದ್ದಾರಿ ಅಭಿವೃದ್ಧಿಗೆ ತಜ್ಞರ ಸಮಿತಿ ರಚನೆ

ಮಂಗಳೂರು: ಮಂಗಳೂರು-ಬೆಂಗಳೂರು ನಡುವಿನ ಹೈಸ್ಪೀಡ್ ಕಾರಿಡಾರ್ ಸಂಬಂಧ ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ ಸೇರಿ ರೈಲ್ವೆ, ಹೆದ್ದಾರಿಗಳ ಸಮಗ್ರ ಅಭಿವೃದ್ಧಿಗೆ ಜಂಟಿ ಸಮೀಕ್ಷೆಗೆ ಕೇಂದ್ರ ಸರ್ಕಾರ ತಜ್ಞರ ಜಂಟಿ ಕಾರ್ಯಕಾರಿ ಸಮಿತಿ ರಚಿಸಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.

'ವಿಸ್ತೃತ ಯೋಜನಾ ವರದಿ ಸಿದ್ಧಪಡಿಸುವುದಕ್ಕೆ ಸಂಬಂಧಿಸಿ ಎರಡೂ ಇಲಾಖೆಗಳ ಸಹಭಾಗಿತ್ವದಲ್ಲಿ ಜಂಟಿ ಸಮೀಕ್ಷೆ ನಡೆಸಲು ತಜ್ಞರ ಸಮಿತಿ ರಚಿಸುವಂತೆ ಕೇಂದ್ರ ಹೆದ್ದಾರಿ ಸಚಿವಾಲಯಕ್ಕೆ ಮನವಿ ಮಾಡಲಾಗಿತ್ತು' ಎಂದು ಹೇಳಿದ್ದಾರೆ.

'ತಜ್ಞರ ಸಮಿತಿಯು ಶಿರಾಡಿ ಘಾಟ್ ಪ್ರದೇಶದಲ್ಲಿ ರೈಲು ಮತ್ತು ರಸ್ತೆ ಸಂಪರ್ಕಿತ ಸುರಂಗ ಮಾರ್ಗದ ಸಾಧ್ಯತೆ ಹಾಗೂ ಸಾಧಕ-ಬಾಧಕಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲಿದೆ' ಎಂದು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಚೌಟ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಲೋಕಾಯುಕ್ತ ಬಲೆಗೆ ಹೆಡ್ ಕಾನ್‌ಸ್ಟೆಬಲ್

ಮಳವಳ್ಳಿ: ರೌಡಿ ಪಟ್ಟಿಗೆ ಸೇರಿಸುವುದಾಗಿ ಬೆದರಿಸಿ ಆರೋಪಿಯಿಂದ ₹5 ಸಾವಿರ ಲಂಚ ಪಡೆಯುತ್ತಿದ್ದ ಗ್ರಾಮಾಂತರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ವೆಂಕಟೇಶ್ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು.


ವೆಂಕಟೇಶ್

ಜಾಮೀನು ಪಡೆದು ಬಿಡುಗಡೆಯಾಗಿದ್ದ ತಾಲ್ಲೂಕಿನ ಅಂಚೆದೊಡ್ಡಿ ಗ್ರಾಮದ ನವೀನ್ ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಗುರುವಾರ ರಾತ್ರಿ ಠಾಣೆಯ ಎದುರಿನ ಹೋಟೆಲ್‌ವೊಂದರ ಬಳಿ ಲಂಚ ಪಡೆಯುತ್ತಿದ್ದಾಗಲೇ ಲೋಕಾಯುಕ್ತ ಸಿಬ್ಬಂದಿ ದಾಳಿ ಕಾರ್ಯಾಚರಣೆ ನಡೆಸಿದರು.

ಶ್ರೀಕಂಠೇಶ್ವರ ದೇಗುಲದಲ್ಲಿ ಎಚ್‌ಡಿಕೆ ತುಲಾಭಾರ ಸೇವೆ

ಮೈಸೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಶುಕ್ರವಾರ ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಹಾಗೂ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀಕಂಠೇಶ್ವರ ದೇವಾಲಯದಲ್ಲಿ 'ತುಲಾಭಾರ ಸೇವೆ' ಸಲ್ಲಿಸಿ ಹರಕೆ ತೀರಿಸಿದರು. ಪತ್ನಿ ಅನಿತಾ ಕುಮಾರಸ್ವಾಮಿ, ಮೆಲ್ಮನೆ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಸಾ.ರಾ.ಮಹೇಶ್ ಇದ್ದರು.

ವಿದ್ಯಾರ್ಥಿನಿ ಗರ್ಭಿಣಿ: ಯುವಕನ ಬಂಧನ

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಗ್ರಾಮವೊಂದರ 9ನೇ ತರಗತಿ ವಿದ್ಯಾರ್ಥಿನಿ ಜೊತೆ ದೈಹಿಕ ಸಂಪರ್ಕ ಬೆಳೆಸಿ ಗರ್ಭಧಾರಣೆಗೆ ಕಾರಣನಾದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ.

ಶಿವಮೂರ್ತಿ (26) ಬಂಧಿತ ಆರೋಪಿ. ದೈಹಿಕ ಸಂಪರ್ಕ ಬೆಳೆಸಿದ್ದ ಆರೋಪಿ, ನಿರಂತರವಾಗಿ ಗರ್ಭ ನಿರೋಧಕ ಮಾತ್ರೆ ನೀಡಿದ್ದ. ಬಾಲಕಿ ಅಸ್ವಸ್ಥಗೊಂಡಿದ್ದಳು. ಮನೆಯವರು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಕೃತ್ಯ ಗೊತ್ತಾಗಿದೆ. ಮಸ್ಕಿ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮೆರವಣಿಗೆ: ವಿವಿಧ ದಿನಗಳಲ್ಲಿ ಅನುಮತಿ

ಚಿತ್ತಾಪುರ ಆರ್‌ಎಸ್‌ಎಸ್ ಉದ್ದೇಶಿತ ಪಥಸಂಚಲನ ಕೋರಿ ಅರ್ಜಿ • ಹೈಕೋರ್ಟ್‌ಗೆ ಎ.ಜಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಚಾರಣೆ ಇದೇ 13ಕ್ಕೆ ಮುಂದೂಡಿಕೆ
- ವಾರದ ಒಳಗಾಗಿ ಅನುಮತಿ



ಪಥಸಂಚಲನ ಮತ್ತು ಮೆರವಣಿಗೆಗೆ ಅನುಮತಿ ಕೋರಿರುವ ಎಲ್ಲ ಸಂಘಟನೆಗಳ ಜತೆ ನವೆಂಬರ್ 5ರಂದು ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ನಡೆಸಲಾಗಿರುವ ಶಾಂತಿಸಭೆ ಫಲಪ್ರದವಾಗಿದೆ.
ನ್ಯಾ.ಎಂ.ಜಿ.ಎಸ್.ಕಮಲ್

ಬೆಂಗಳೂರು: 'ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಉದ್ದೇಶಿತ ಪಥಸಂಚಲನವೂ ಸೇರಿದಂತೆ ಮೆರವಣಿಗೆ ನಡೆಸಲು ಕೋರಿರುವ ವಿವಿಧ ಸಂಘಟನೆಗಳಿಗೆ ಬೇರೆ-ಬೇರೆ ದಿನಾಂಕಗಳಲ್ಲಿ ಅನುಮತಿ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

'ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಪಥಸಂಚಲನಕ್ಕೆ ಅನುಮತಿ ಕೋರಿರುವ ಮನವಿ ಪರಿಗಣಿಸಲು ಜಿಲ್ಲಾಡಳಿತಕ್ಕೆ ನಿರ್ದೇಶಿಸಬೇಕು' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಲಬುರಗಿ ಜಿಲ್ಲಾ ಸಂಚಾಲಕ ಅಶೋಕ್ ಪಾಟೀಲ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ನ್ಯಾಯಪೀಠ ಈ ಹಿಂದಿನ ವಿಚಾರಣೆ ವೇಳೆ ನೀಡಿದ್ದ ಸಲಹೆಯ ಅನುಸಾರ ನವೆಂಬರ್ 5ರಂದು ಬೆಂಗಳೂರಿನ ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ಶಾಂತಿಸಭೆ ನಡೆದಿದೆ. ನಾವು ಈ ಸಭೆಯಲ್ಲಿ ಭಾಗಿಯಾಗಿ ನಮ್ಮ ಪ್ರಸ್ತಾವನೆ ಸಲ್ಲಿಸಿದ್ದೇವೆ. ಸರ್ಕಾರ ತನ್ನ ನಿರ್ಧಾರ ಪ್ರಕಟಿಸಬೇಕಿದೆಯಷ್ಟೇ' ಎಂದರು.

ಇದಕ್ಕೆ ಉತ್ತರಿಸಿದ ಶಶಿಕಿರಣ್ ಶೆಟ್ಟಿ, 'ಮನವಿ ಸಲ್ಲಿಸಿರುವ ಎಲ್ಲ ಸಂಘಟನೆಗಳಿಗೂ ಒಂದು ವಾರದೊಳಗೆ ಅನುಮತಿ ನೀಡಲಾಗುವುದು. ಯಾವ್ಯಾವ ದಿನ ಅವರಿಗೆ ಅವಕಾಶ ನೀಡಲಾಗುವುದು ಎಂಬುದನ್ನು ಲಿಖಿತವಾಗಿ ತಿಳಿಸಲಾಗುವುದು. ಅದಕ್ಕಾಗಿ ಒಂದು ವಾರ ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಅರುಣ್ ಶ್ಯಾಮ್, 'ನಮಗೆ ನವೆಂಬರ್ 13 ಅಥವಾ 16ರಂದು ಅನುಮತಿ ನೀಡಿದರೆ ಅನುಕೂಲವಾಗುತ್ತದೆ. ಸಭೆ ನಡೆಸಲು ಕಲ್ಯಾಣ ಮಂಟಪವನ್ನು ಈಗಾಗಲೇ ಕಾಯ್ದಿರಿಸಲಾಗಿದ್ದು, ನಾವು ಕೇಳಿರುವ ಎರಡು ದಿನಗಳಲ್ಲಿ ಮಾತ್ರವೇ ಕಲ್ಯಾಣ ಮಂಟಪ ಬಳಕೆಗೆ ಲಭ್ಯವಿದೆ' ಎಂದರು.

'ದೇಶದಲ್ಲಿ ಎಲ್ಲ ಕಡೆ ಪಥಸಂಚಲನ ನಡೆಸಲಾಗಿದೆ. ಎಲ್ಲೂ ಸಮಸ್ಯೆ ಆಗಿಲ್ಲ. ಕರ್ನಾಟಕದಲ್ಲೂ ಸರಿಸುಮಾರು 500 ಕಡೆಗಳಲ್ಲಿ ನಡೆಸಲಾಗಿದೆ. ಚಿತ್ತಾಪುರ ಒಂದು ಮಾತ್ರವೇ ಬಾಕಿ ಇದೆ. ಒಂದು ವೇಳೆ ಅನುಮತಿ ನೀಡುವ ನಿಟ್ಟಿನಲ್ಲಿ ನ್ಯಾಯಪೀಠವೇ ನ್ಯಾಯಾಂಗ ತೀರ್ಮಾನ ಪ್ರಕಟಿಸುವುದಾದರೆ ಉಲ್ಲೇಖಿಸಬಹುದಾದ ಇತ್ತೀಚಿನ ಮೂರು ಹೈಕೋರ್ಟ್ ತೀರ್ಪುಗಳಿವೆ' ಎಂದು ಅವುಗಳ ಪ್ರತಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಉದ್ದೇಶಿತ ಪಥಸಂಚಲನಕ್ಕೆ ಅನುಮತಿ ನೀಡುವ ಬಗ್ಗೆ ಸರ್ಕಾರ ತನ್ನ ನಿರ್ಧಾರವನ್ನು ಇದೇ 13ರ ಮಧ್ಯಾಹ್ನ 2.30ಕ್ಕೆ ತಿಳಿಸಬೇಕು' ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

ಒಂದು ಹಂತದಲ್ಲಿ ನ್ಯಾಯಪೀಠ, 'ಇದೇ 13ರ ಒಳಗಾಗಿ ನೀವೇ ಸೂಕ್ತ ಆದೇಶ ಮಾಡುತ್ತೀರೋ ಅಥವಾ ನಾವೇ ನ್ಯಾಯಾಂಗ ಆದೇಶ ಹೊರಡಿಸಬೇಕಾ' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿತು. ಇದಕ್ಕೆ ಅಡ್ವೊಕೇಟ್ ಜನರಲ್, 'ಸರ್ಕಾರವೇ ಸೂಕ್ತ ತೀರ್ಮಾನ ಕೈಗೊಳ್ಳಲಿದೆ' ಎಂದು ಭರವಸೆ ನೀಡಿದರು.

ಅರ್ಜಿಯಲ್ಲಿ ಏನಿದೆ?

'2025ರ ಅಕ್ಟೋಬರ್ 19ರಂದು ಚಿತ್ತಾಪುರದ ಬಜಾಜ್ ಕಲ್ಯಾಣ ಮಂಟಪದಿಂದ ಶುರುವಾಗಿ ಪುನಃ ಅಲ್ಲಿಗೇ ಮರಳುವಂತೆ ಪಥಸಂಚಲನ ಮತ್ತು ಆನಂತರದ ಸಾರ್ವಜನಿಕ ಸಮಾವೇಶ ನಡೆಸಲು ಅನುಮತಿ ನೀಡಬೇಕು' ಎಂದು ಕೋರಿ ಅಶೋಕ್ ಪಾಟೀಲ್ ಅಕ್ಟೋಬರ್ 13ರಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಅಕ್ಟೋಬರ್ 18ರಂದು ನಿರಾಕರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಹೈಕೋರ್ಟ್ ಮೆಟ್ಟಿಲೇರಿದೆ.

ಬ್ಯಾಂಕ್ ದರೋಡೆ: ಸಂಚುಕೋರನ ಬಂಧನ

ನವದೆಹಲಿ(ಪಿಟಿಐ): ಕರ್ನಾಟಕ ಮತ್ತು ಮಹಾರಾಷ್ಟ್ರದ ಹಲವು ಬ್ಯಾಂಕ್‌ಗಳಲ್ಲಿ ದರೋಡೆ ನಡೆಸಿರುವ 'ಮಮು ಗ್ಯಾಂಗ್'ನ ಪ್ರಮುಖ ಸಂಚುಕೋರ, ಹಣ್ಣಿನ ವ್ಯಾಪಾರಿಯ ವೇಷದಲ್ಲಿದ್ದ ವ್ಯಕ್ತಿಯನ್ನು ದೆಹಲಿ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಈ ಮೂಲಕ ಕರ್ನಾಟಕದಲ್ಲಿ ಮೂರು ಪ್ರಮುಖ ಬ್ಯಾಂಕ್‌ಗಳಲ್ಲಿ ದರೋಡೆ ನಡೆಸಿರುವ ಜಾಲವನ್ನು ಪೊಲೀಸರು ಭೇದಿಸಿದ್ದಾರೆ.

ಬಂಧಿತ ಆರೋಪಿ ಕಮ್ರುಲ್ ಅಲಿಯಾಸ್ ಮಮು ಉತ್ತರ ಪ್ರದೇಶ ನಿವಾಸಿಯಾಗಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಹಲವು ಬ್ಯಾಂಕ್ ದರೋಡೆಗಳನ್ನು ನಡೆಸಿ, ತಲೆಮರೆಸಿಕೊಂಡಿದ್ದ. ಗ್ಯಾಂಗ್‌ನ ನಾಯಕನಾಗಿದ್ದ ಆತ ದರೋಡೆ ಸಂಚು ರೂಪಿಸುವುದರಲ್ಲಿ ಮತ್ತು ವೇಷ ಬದಲಿಸುತ್ತಾ ಓಡಾಡುವುದರಲ್ಲಿ ನಿಷ್ಣಾತನಾಗಿದ್ದ.

'ಹಣ್ಣಿನ ವ್ಯಾಪಾರಿಯ ಸೋಗಿನಲ್ಲಿ ಜನರ ಮಧ್ಯೆ ಇರುತ್ತಿದ್ದ ಆರೋಪಿ ಬ್ಯಾಂಕ್ ಸುತ್ತಮುತ್ತಲಿನ ವಾತಾವರಣವನ್ನು ಗಮನಿಸುತ್ತಿದ್ದ, ದೈನಂದಿನ ಚಟುವಟಿಕೆಗಳು, ಭದ್ರತಾ ಲೋಪಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದ ' ಎಂದು ಪೊಲೀಸ್ ಅಧಿಕಾರಿ ಶುಕ್ರವಾರ ತಿಳಿಸಿದ್ದಾರೆ.

ಆತನ ಚಲನವಲನದ ಬಗ್ಗೆ ಮಾಹಿತಿ ಪಡೆದ ಪೊಲೀಸರು ನೈರುತ್ಯ ದೆಹಲಿಯ ಮಹಾವೀರ ಪ್ರದೇಶದಲ್ಲಿ ಬಂಧಿಸಿದ್ದಾರೆ.

ಬೆಂಗಳೂರಿನ ಶ್ರೀ ಗುರು ರಾಘವೇಂದ್ರ ಬ್ಯಾಂಕ್‌ನಲ್ಲಿ ₹1,544 ಕೋಟಿ ವಂಚಿಸಿದ ಹಗರಣ

6 ವಾರಗಳಲ್ಲಿ ದೋಷಾರೋಪ ನಿಗದಿ: 'ಸುಪ್ರೀಂ' ನಿರ್ದೇಶನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬ್ಯಾಂಕ್ ಅಧ್ಯಕ್ಷ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ವಿಚಾರಣೆ
- ಬೋಗಸ್ ದಾಖಲೆಗಳಿಗೆ ಸಾಲ ವಿತರಣೆ: ಆರೋಪ

ನವದೆಹಲಿ: ಬೆಂಗಳೂರಿನ 'ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ' ಮತ್ತು 'ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್' ನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಠೇವಣಿದಾರರಿಗೆ ₹1,544 ಕೋಟಿ ವಂಚಿಸಿದ ಪ್ರಕರಣದ ಆರೋಪಿಗಳ ವಿರುದ್ಧ ಆರು ವಾರಗಳಲ್ಲಿ ದೋಷಾರೋಪ ನಿಗದಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

ಜಾಮೀನು ಅರ್ಜಿ ವಜಾಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಬ್ಯಾಂಕ್ ಅಧ್ಯಕ್ಷ ಕೆ.ರಾಮಕೃಷ್ಣ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ. ಎಂ. ಸುಂದರೇಶ್ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠವು, 'ದೋಷಾರೋಪ ನಿಗದಿ ಹಾಗೂ ವಿಚಾರಣೆ ಸಮಯದಲ್ಲಿ ಆರೋಪಿ ಅರ್ಜಿದಾರರು ಸಹಕರಿಸಬೇಕು' ಎಂದು ಸೂಚಿಸಿದೆ.

ಜಾರಿ ನಿರ್ದೇಶನಾಲಯದ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ಆರೋಪಿಗಳ ವಿರುದ್ಧ ಈವರೆಗೂ ದೋಷಾರೋಪ ನಿಗದಿಯಾಗಿಲ್ಲ' ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ದೋಷಾರೋಪ ನಿಗದಿಯಾದ ಬಳಿಕ ವಿಚಾರಣಾ ನ್ಯಾಯಾಲಯವು ವಿಚಾರಣೆ ಪ್ರಾರಂಭಿಸಬೇಕು ಎಂದೂ ಪೀಠ ಹೇಳಿದೆ. ಪ್ರಕರಣದ ವಿಚಾರಣೆಯನ್ನು ಜನವರಿಗೆ ಮುಂದೂಡಲಾಗಿದೆ.

2024ರ ನವೆಂಬರ್ 24ರಂದು ಜಾಮೀನು ಅರ್ಜಿ ವಜಾಗೊಳಿಸಿದ್ದ ಹೈಕೋರ್ಟ್, 'ಅರ್ಜಿದಾರ ಕೆ.ರಾಮಕೃಷ್ಣ ವಿರುದ್ಧ ಪಿಎಂಎಲ್ ಕಾಯ್ದೆ-2002, ಭಾರತೀಯ ದಂಡ ಸಂಹಿತೆ-1860 ಮತ್ತು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಹೂಡಿಕೆದಾರರ ಹಿತರಕ್ಷಣಾ ಕಾಯ್ದೆ–2005ರ ಅಡಿಯಲ್ಲಿನ ವಿವಿಧ ಕಲಂಗಳ ಅನುಸಾರ ಪ್ರತ್ಯೇಕವಾಗಿ ಒಂದಕ್ಕಿಂತ ಹೆಚ್ಚು ಅಪರಾಧ ಪ್ರಕರಣಗಳು ದಾಖಲಾಗಿವೆ. ಅಂತೆಯೇ ₹1,544 ಕೋಟಿ ದುರ್ಬಳಕೆ ಮಾಡಿಕೊಂಡ ಆಪಾದನೆಯೂ ಇವರ ಮೇಲಿದೆ' ಎಂದು ಅಭಿಪ್ರಾಯಪಟ್ಟಿತ್ತು.

ಬ್ಯಾಂಕ್‌ನಲ್ಲಿ ₹ 1,544 ಕೋಟಿ ಮೊತ್ತದ ಹಗರಣ ನಡೆದಿರುವುದು ಸಿಐಡಿ ತನಿಖೆಯಲ್ಲಿ ಪತ್ತೆಯಾಗಿತ್ತು. ಕೆ. ರಾಮಕೃಷ್ಣ, ಉಪಾಧ್ಯಕ್ಷರೂ ಆಗಿದ್ದ ಅವರ ಮಗ ಕೆ.ಆರ್. ವೇಣುಗೋಪಾಲ್ ಸೇರಿದಂತೆ 27 ಮಂದಿ ₹920.46 ಕೋಟಿ ಮೊತ್ತದ ಸಾಲ ಪಡೆದು ವಂಚಿಸಿರುವುದು ತನಿಖೆಯಲ್ಲಿ ಕಂಡು ಬಂದಿತ್ತು. 'ರಾಮಕೃಷ್ಣ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಕಾಲದಲ್ಲಿ 2,876 ಸಾಲಗಳನ್ನು ನೀಡಿದ್ದರು. ಈ ಮೊತ್ತ ₹1,544.43 ಕೋಟಿ. ಇದರಲ್ಲಿ ₹ 892.85 ಕೋಟಿ ಬೋಗಸ್ ದಾಖಲೆಗಳಿಗೆ ಸಾಲ ಕೊಡಲಾಗಿದೆ' ಎಂದು ಬಸವನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ರಾಮಕೃಷ್ಣ ಅವರನ್ನು 2022ರ ಫೆಬ್ರುವರಿಯಲ್ಲಿ ಬಂಧಿಸಲಾಗಿತ್ತು.

ರೋಷನ್ ಸಲ್ದಾನ ಆಸ್ತಿ ಮುಟ್ಟುಗೋಲು ಹಾಕಿದ ಇ.ಡಿ

ಮಂಗಳೂರು: ಬಹುಕೋಟಿ ವಂಚನೆ ಪ್ರಕರಣದ ಪ್ರಮುಖ ಆರೋಪಿ ರೋಷನ್ ಸಲ್ದಾನ ಮನೆ ಮತ್ತು ಬ್ಯಾಂಕ್ ಖಾತೆ ಸೇರಿ ಒಟ್ಟು ₹2.85 ಕೋಟಿ ಆಸ್ತಿಯನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಮಂಗಳೂರು ಉಪವಲಯ ಕಚೇರಿಯು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

ರೋಷನ್ ಸಲ್ದಾನ, ಡಫ್ನಿ ನೀತು ಡಿಸೋಜ ಮತ್ತು ಇತರರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳ ಆಧಾರದ ಮೇಲೆ ಇ.ಡಿ ತನಿಖೆ ಪ್ರಾರಂಭಿಸಿದೆ.

ಕಬ್ಬಿಗೆ ₹3,300 ದರ, ₹50 ಪ್ರೋತ್ಸಾಹಧನ


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕ್ಕರೆ ಕಾರ್ಖಾನೆ ಮಾಲೀಕರು, ರೈತ ಮುಖಂಡರ ಸಭೆಯನ್ನು ವಿಧಾನಸೌಧದಲ್ಲಿ ಶುಕ್ರವಾರ ನಡೆಸಿದರು

ಒಂದನೇ ಪುಟದಿಂದ...

ಕಾರ್ಖಾನೆಗಳು ಒಂದು ಟನ್‌ಗೆ ಹಿಂದೆ ನಿಗದಿಯಾಗಿದ್ದ ₹3,200ರ ಜತೆಗೆ ಹೆಚ್ಚುವರಿಯಾಗಿ ₹50 ನೀಡಿದರೆ, ರಾಜ್ಯ ಸರ್ಕಾರವು ಒಂದು ಅವಧಿಯ ಪ್ರೋತ್ಸಾಹ ಧನವಾಗಿ ₹50 ಪಾವತಿಸಲಿದೆ. ಸಾಗಣೆ ಮತ್ತು ಕಟಾವು ವೆಚ್ಚ ಹೊರತುಪಡಿಸಿ ಶೇ 11.25 ಇಳುವರಿ ಪ್ರಮಾಣ ಇರುವ ಪ್ರತಿ ಟನ್ ಕಬ್ಬಿಗೆ ₹3,300 ಹಾಗೂ ಶೇ 10.5 ಇಳುವರಿ ಪ್ರಮಾಣ ಇರುವ ಕಬ್ಬಿಗೆ ₹3,200 ದರ ಸಿಗಲಿದೆ.

ಕೇಂದ್ರ ಸರ್ಕಾರ ಕಟಾವು ಮತ್ತು ಸಾಗಣೆ ವೆಚ್ಚ ಸೇರಿಸಿ ಶೇ 10.5 ಇಳುವರಿ ಪ್ರಮಾಣ ಇರುವ ಪ್ರತಿ ಟನ್ ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ದರ (ಎಫ್‌ಆರ್‌ಪಿ) ₹3,550 ನಿಗದಿಪಡಿಸಿದೆ. ಸಾಗಣೆ, ಕಟಾವು ವೆಚ್ಚ ಹೊರತುಪಡಿಸಿ ಸಕ್ಕರೆ ಕಾರ್ಖಾನೆಗಳಿಗೆ ಪೂರೈಸುವ ಕಬ್ಬಿಗೆ ₹3,500 ದರ ನೀಡಬೇಕು ಎಂದು ಆಗ್ರಹಿಸಿ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಹಾವೇರಿ ಮತ್ತು ಕಲಬುರಗಿ ಸೇರಿದಂತೆ ವಿವಿಧೆಡೆ ರೈತರು ಅ.30ರಿಂದ ಪ್ರತಿಭಟನೆ ನಡೆಸುತ್ತಿದ್ದರು. ಸಚಿವರು ಸ್ಥಳಕ್ಕೆ ತೆರಳಿ ಮಾತುಕತೆ ನಡೆಸಿದರೂ ರೈತರು ಪಟ್ಟು ಸಡಿಲಿಸಿರಲಿಲ್ಲ. ಬೆಳಗಾವಿ ಜಿಲ್ಲಾಧಿಕಾರಿ ನಿಗದಿ ಮಾಡಿದ್ದ ₹3,200 ದರವನ್ನೂ ಬೆಳೆಗಾರರು ತಿರಸ್ಕರಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ರೈತ ಮುಖಂಡರ ಸಭೆ ನಡೆಸಿ, ಪರಿಷ್ಕೃತ ದರ ಘೋಷಣೆ ಮಾಡಿದರು. ಕಬ್ಬಿನ ಇಳುವರಿ ಪ್ರಮಾಣ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಾಗುತ್ತದೆ. ಹಾಗಾಗಿ, ಎಲ್ಲ ಇಳುವರಿ ಪ್ರಮಾಣದ ಕಬ್ಬಿಗೂ ಪ್ರತಿ ಟನ್‌ಗೆ ₹100ರೂ ಹೆಚ್ಚಳ ಅನ್ವಯವಾಗಲಿದೆ ಎಂದು ಖಚಿತಪಡಿಸಿದರು.

ಕೇಂದ್ರದ ಅಧಿಕಾರ, ರಾಜ್ಯ ಹೇಗೆ ಹೊಣೆ?: ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಮಸ್ಯೆಗಳನ್ನು ಬಗೆಹರಿಸಲು ಸಿದ್ಧರಿದ್ದೇವೆ. ಕೇಂದ್ರ ಸರ್ಕಾರ ಪರಿಹರಿಸಬೇಕಾದ ಸಮಸ್ಯೆಗೂ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರೆ ಹೇಗೆ' ಎಂದು ರೈತ ಮುಖಂಡರನ್ನು ಪ್ರಶ್ನಿಸಿದರು.

ಸಕ್ಕರೆಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ), ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರ. ಎಥೆನಾಲ್ ಹಂಚಿಕೆ, ಸಕ್ಕರೆ ರಫ್ತು ಮಿತಿ ನಿಗದಿಪಡಿಸುವುದೂ ಕೇಂದ್ರ ಸರ್ಕಾರ. ಅವರಿಂದ ಆಗಿರುವ ಸಮಸ್ಯೆಗೆ ರಾಜ್ಯ ಸರ್ಕಾರದಿಂದ ಪರಿಹಾರ ಕೇಳಿದರೆ ಹೇಗೆ ಎಂದು ಪ್ರಶ್ನಿಸಿದರು. ತೂಕದಲ್ಲಿ ಮೋಸ, ಇಳುವರಿ ಪ್ರಮಾಣ ಕಡಿಮೆ ತೋರಿಸುವುದು ಸೇರಿದಂತೆ ಸಕ್ಕರೆ ಕಾರ್ಖಾನೆಗಳ ಕುರಿತು ಕಬ್ಬು ಬೆಳೆಗಾರರ ಎಲ್ಲ ಅಹವಾಲುಗಳನ್ನೂ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

'ಎಫ್‌ಆರ್‌ಪಿ ನಿಗದಿ ಮಾಡುವಾಗ ಕೇಂದ್ರ ಸರ್ಕಾರ ಅವೈಜ್ಞಾನಿಕ ಕ್ರಮ ಅನುಸರಿಸಿದೆ. ಉತ್ಪಾದನಾ ವೆಚ್ಚ ಹಿಂದಿನ ವರ್ಷಗಳಿಗಿಂತ ₹ 4 ಸಾವಿರ ಕಡಿಮೆ ತೋರಿಸಿದ್ದಾರೆ. ಇದ್ಯಾವ ಲೆಕ್ಕಾಚಾರ. ಕೇಂದ್ರ ಸರ್ಕಾರ ಕಬ್ಬಿಗೆ ನಿಗದಿಪಡಿಸಿರುವ ಎಫ್‌ಆರ್‌ಪಿ ವೈಜ್ಞಾನಿಕ ವಾಗಿಲ್ಲ. ಕೆಲವು ಕಾರ್ಖಾನೆಗಳು ಹಳೆಯ ಬಾಕಿಯನ್ನು ಉಳಿಸಿಕೊಂಡಿದ್ದು, ಇದರ ಪಾವತಿಗೆ ಕ್ರಮ ಕೈಗೊಳ್ಳಬೇಕು' ಎಂದು ರೈತ ಮುಖಂಡರು ಮುಖ್ಯಮಂತ್ರಿಗೆ ಮನವಿ ಮಾಡಿದರು.


ಇದಕ್ಕೂ ಮೊದಲು ಸಕ್ಕರೆ ಕಾರ್ಖಾನೆ ಮಾಲೀಕರ ಜತೆ ಸಭೆ ನಡೆಸಿದ ಸಿದ್ದರಾಮಯ್ಯ, 'ರೈತರ ಬೇಡಿಕೆ ಈಡೇರಿಸುವುದರಲ್ಲಿ ಕೇಂದ್ರ ಸರ್ಕಾರದ ಜತೆಗೆ ಕಾರ್ಖಾನೆಗಳ ಜವಾಬ್ದಾರಿಯೂ ಇದೆ. ರಾಜ್ಯ ಸರ್ಕಾರ ರೈತರ ಪರವಾಗಿ ನಿಲ್ಲಲಿದೆ. ಕಬ್ಬು ಬೆಳೆಗಾರರಿಗೆ ನೆರವಾಗುವುದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಜವಾಬ್ದಾರಿ. ಎಫ್‌ಆರ್‌ಪಿಯಲ್ಲಿ ಸಾಗಣೆ ಮತ್ತು ಕಟಾವು ವೆಚ್ಚವೂ ಸೇರಿದೆ. ಸಕ್ಕರೆಯ ಎಂಎಸ್‌ಪಿ ಹೆಚ್ಚಳ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಕೇಂದ್ರ ಸರ್ಕಾರ ಸಮಸ್ಯೆ ಸೃಷ್ಟಿಸಿದೆ' ಎಂದು ದೂರಿದರು.

ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಎಂಎಸ್‌ಪಿ ಹೆಚ್ಚಿಸುವಂತೆ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರ ಪ್ರದರ್ಶಿಸಿದ ಸಿದ್ದರಾಮಯ್ಯ, 'ಈ ಪತ್ರದಂತೆ ಎಂಎಸ್‌ಪಿ ಹೆಚ್ಚಳಕ್ಕೆ ಒತ್ತಾಯಿಸೋಣ. ಸಕ್ಕರೆ ಕಾರ್ಖಾನೆಗಳು ಮಾರಾಟ ಮಾಡುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ 60 ಪೈಸೆ ತೆರಿಗೆ ನಿಗದಿಪಡಿಸುವ ಪ್ರಸ್ತಾವನೆಯನ್ನು ಮರು ಪರಿಶೀಲಿಸಲಾಗುವುದು' ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ, ಶಿವಾನಂದ ಪಾಟೀಲ, ಎಂ.ಬಿ. ಪಾಟೀಲ, ಸತೀಶ ಜಾರಕಿಹೊಳಿ, ಆರ್. ಬಿ.ತಿಮ್ಮಾಪುರ, ಪ್ರಿಯಾಂಕ್ ಖರ್ಗೆ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಸಕ್ಕರೆ ಕಾರ್ಖಾನೆ ನಡೆಸುವುದು ಕಷ್ಟವಾಗಿದ್ದರೆ ಒಂದು ಕಾರ್ಖಾನೆ ಇದ್ದವರು ಎರಡು, ಮೂರು ಕಾರ್ಖಾನೆ ಮಾಲೀಕರಾಗಿದ್ದು ಹೇಗೆ ಎನ್ನುವ ರೈತರ ಪ್ರಶ್ನೆಗೆ ಏನು ಉತ್ತರ ಹೇಳುತ್ತೀರಿ?
ಸಿದ್ದರಾಮಯ್ಯ, ಮುಖ್ಯಮಂತ್ರಿ

ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರ ಜತೆಗೆ ಸಭೆಯ ನಂತರ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಬಿಜೆಪಿ ಸ್ವಾಗತಿಸುತ್ತದೆ. ಇದು ರೈತರು ಮತ್ತು ರೈತ ಸಂಘಟನೆಗಳಿಗೆ ದೊರೆತ ಜಯ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



ಕಬ್ಬು ಬೆಳೆಗಾರರ ಸಂಘಟಿತ ಹೋರಾಟಕ್ಕೆ ಮಣಿದಿರುವ ಸರ್ಕಾರ ಪ್ರತಿ ಟನ್ ಕಬ್ಬಿಗೆ ₹3,300 ದರ ನಿಗದಿ ನಿರ್ಧಾರವನ್ನು ಪ್ರಾಮಾಣಿಕವಾಗಿ ಜಾರಿಗೊಳಿಸುವ ಅನುಮಾನಗಳಿವೆ
ಆರ್.ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಬೇಡಿಕೆಗಳು ಏನು?

ಕಬ್ಬು ಬೆಳೆಗಾರರು

- ಕೇಂದ್ರ ಸರ್ಕಾರ ಕಬ್ಬಿಗೆ ವೈಜ್ಞಾನಿಕವಾಗಿ ಎಫ್‌ಆರ್‌ಪಿ ನಿಗದಿ ಮಾಡಬೇಕು
- ಸಕ್ಕರೆ ಕಾರ್ಖಾನೆಗಳು ಕಬ್ಬಿನ ಇಳುವರಿ ಪ್ರಮಾಣ ಕಡಿಮೆ ತೋರಿಸುತ್ತಿವೆ
- ಪ್ರತಿ ಕಾರ್ಖಾನೆ ಎದುರು ಸರ್ಕಾರವೇ ಇಳುವರಿ ಪ್ರಮಾಣ ಖಚಿತಪಡಿಸುವ ಯಂತ್ರ ಸ್ಥಾಪಿಸಬೇಕು
- ತೂಕದಲ್ಲಿ ಮೋಸ ಮಾಡುವ ಕಾರ್ಖಾನೆಗಳ ವಿರುದ್ಧ ಕ್ರಮಕೈಗೊಳ್ಳಬೇಕು
- ಕಾರ್ಖಾನೆಗಳು ಬಾಕಿ ಪಾವತಿಸಬೇಕು

ಮಾಲೀಕರದ್ದು

- ಪ್ರತಿ ಯೂನಿಟ್ ವಿದ್ಯುತ್‌ಗೆ ನಿಗದಿ ಮಾಡಿದ 60 ಪೈಸೆ ತೆರಿಗೆ ಪ್ರಸ್ತಾವನೆ ಪರಿಶೀಲಿಸಬೇಕು
- ಸಕ್ಕರೆಗೆ ಎಂಎಸ್‌ಪಿ ₹41 ನಿಗದಿ ಮಾಡಲು ಕೇಂದ್ರದ ಮೇಲೆ ರಾಜ್ಯ ಒತ್ತಡ ಹಾಕಬೇಕು
- ಸಕ್ಕರೆ ಕಾರ್ಖಾನೆಗಳ ನಡುವಿನ ಅಂತರ ಕನಿಷ್ಠ 25 ಕಿ.ಮೀ ನಿಗದಿಪಡಿಸಬೇಕು
- ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿ ಒಪ್ಪಂದವನ್ನು ನವೀಕರಣ ಮಾಡಬೇಕು
- ಸಕ್ಕರೆ ರಫ್ತಿನ ಮೇಲೆ ಕೇಂದ್ರ ಸರ್ಕಾರ ಏರಿದ ನಿರ್ಬಂಧ ತೆರವುಗೊಳಿಸಬೇಕು

ಮುಂದುವರಿದ ಪ್ರತಿಭಟನೆ

ಬೆಳಗಾವಿ: ಕಬ್ಬು ದರ ನಿಗದಿ ಕುರಿತು ಬೆಂಗಳೂರಿನಲ್ಲಿ ನಡೆದ ಸಭೆಯ ಫಲಶ್ರುತಿ ತಿಳಿಯದೇ ಇಲ್ಲಿ ಹೋರಾಟ ನಡೆಸುತ್ತಿರುವ ರೈತರಲ್ಲಿ ಗೊಂದಲ ಮೂಡಿತು. 'ಕಾರ್ಖಾನೆಗಳು ಟನ್ ಕಬ್ಬಿಗೆ ₹3,250, ರಾಜ್ಯ ಸರ್ಕಾರ ₹50 ಸೇರಿಸಿ ಒಟ್ಟು ₹3,300 ಸಿಗಲಿದೆ. ಹೋರಾಟಕ್ಕೆ ಜಯವಾಗಿದೆ' ಎಂದು ರೈತ ಸಂಘದ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ತಿಳಿಸಿದರು. ಗುರೂಜಿ ಮಾತು ಆಲಿಸಿ ರೈತರು ಸಂಭ್ರಮಿಸಿದರು. ಇನ್ನೊಂದೆಡೆ, 'ಅಧಿಕೃತ ಮಾಹಿತಿ ಇಲ್ಲದೆ, ನಿರ್ಧಾರ ತಿಳಿಸುವುದು ಕಷ್ಟ' ಎಂದು ರೈತ ಸಂಘದ ಅಧ್ಯಕ್ಷ ಚೂನಪ್ಪ ಪೂಜಾರಿ ಮಾಧ್ಯಮಗಳಿಗೆ ತಿಳಿಸಿದರು. ಒಂದು ಹಂತದಲ್ಲಿ ಪ್ರತಿಭಟನಕಾರರು ಹೆದ್ದಾರಿಗೆ ನುಗ್ಗಿ ಕೆಲ ವಾಹನಗಳ ಮೇಲೆ ಕಲ್ಲು ತೂರಿದರು.

81 ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು | **69** ಖಾಸಗಿ ಕಾರ್ಖಾನೆಗಳು | **11** ಸಹಕಾರಿ ಕಾರ್ಖಾನೆಗಳು | **1** ಸರ್ಕಾರಿ ಸ್ವಾಮ್ಯದ ಕಾರ್ಖಾನೆ

5.6 ಕೋಟಿ ಟನ್ ಕಳೆದ ವರ್ಷದ ಕಬ್ಬು ಬೆಳೆ

6 ಕೋಟಿ ಟನ್ ಈ ವರ್ಷದ ಉತ್ಪಾದನೆಯ ನಿರೀಕ್ಷೆ



ಕಷ್ಟವಾದರೆ ಬಾಗಿಲು ಮುಚ್ಚಿ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿನ ದರ ಪರಿಷ್ಕರಣೆ ಕುರಿತು ನಡೆದ ಸಭೆಯ ಅಂತಿಮ ಸುತ್ತಿನ ಮಾತುಕತೆಯಲ್ಲಿ ₹50 ಹೆಚ್ಚುವರಿ ಕೊಡಲು ಸಕ್ಕರೆ ಕಾರ್ಖಾನೆ ಮಾಲೀಕರು ಹಿಂದೇಟು ಹಾಕಿದಾಗ ಅಸಮಾಧಾನಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ 'ನಷ್ಟವಾಗುತ್ತಿದ್ದರೆ ಬಾಗಿಲು ಮುಚ್ಚಿಬಿಡಿ' ಎಂದು ಕಟುವಾಗಿ ಹೇಳಿದರು.

'ಕಾರ್ಖಾನೆ ನಡೆಸುವುದು ಬಹಳ ಕಷ್ಟಕರವಾಗಿದೆ. ಸಕ್ಕರೆ, ಎಥೆನಾಲ್, ವಿದ್ಯುತ್ ಉತ್ಪಾದನೆ ಮಾಡಿದರೂ ನಾವು ಸಂಕಷ್ಟದಲ್ಲಿದ್ದೇವೆ. ರೈತರಿಂದಲೂ ಕೆಟ್ಟ ಬೈಗುಳ ಕೇಳಬೇಕಿದೆ. ಕೇಂದ್ರದ ನೀತಿ, ರೈತರ ಒತ್ತಡದಿಂದ ಕಾರ್ಖಾನೆ ನಡೆಸುವುದೇ ಕಷ್ಟವಾಗಿದೆ. ಬೇಕಿದ್ದರೆ ಸರ್ಕಾರವೇ ಕಾರ್ಖಾನೆಗಳನ್ನು ವಹಿಸಿಕೊಳ್ಳಲಿ' ಎಂದು ಮಾಲೀಕರು ಅವಲತ್ತುಕೊಂಡರು.

'ಸಹಕಾರಿ ರಂಗದ ಇಐಡಿ ಪ್ಯಾರಿ ಶುಗರ್ ಕಾರ್ಖಾನೆ ಕಬ್ಬು ಬೆಳೆಗಾರರಿಗೆ ₹3,211ಪಾವತಿಸುತ್ತಿದೆ. ಇದೇ ಮಾದರಿಯಲ್ಲಿ ಉಳಿದ ಕಾರ್ಖಾನೆಗಳಿಗೆ ಯಾಕೆ ಪಾವತಿ ಸಾಧ್ಯವಿಲ್ಲ? ನೆಪ ಹೇಳದೆ ಹೆಚ್ಚುವರಿ ₹100ರಲ್ಲಿ ₹50 ನೀವು ಕೊಡಿ. ಸರ್ಕಾರ ₹50 ಭರಿಸುತ್ತದೆ' ಎಂದು ಸಿದ್ದರಾಮಯ್ಯ ಹೇಳಿದರು.

'ನಾವು ಉದ್ಯೋಗ ಸೃಷ್ಟಿಸಿ ಗ್ರಾಮೀಣ ಆರ್ಥಿಕತೆಗೆ ಅಪಾರ ಕೊಡುಗೆ ನೀಡುತ್ತಿದ್ದೇವೆ. ಕೇಂದ್ರದ ನೀತಿಗಳಿಂದಲೂ ನಮಗೆ ನಷ್ಟ ಆಗುತ್ತಿದೆ' ಎಂಬ ಮಾಲೀಕರ ಮಾತಿಗೆ ಪ್ರತಿಕ್ರಿಯಿಸಿದ ಸಕ್ಕರೆ ಸಚಿವ ಶಿವಾನಂದ ಪಾಟೀಲ, 'ಈ ಸಮಸ್ಯೆ ಸೃಷ್ಟಿ ಆಗಿರುವುದು ಕೇಂದ್ರ ಸರ್ಕಾರದ ಕಾರಣದಿಂದ ಎಂದು ನೀವೆಲ್ಲಾ ಒಟ್ಟಾಗಿ ಮಾಧ್ಯಮಗಳ ಮುಂದೆ ಸತ್ಯ ಹೇಳಿ, ಕೇಂದ್ರಕ್ಕೆ ಪತ್ರ ಬರೆಯಿರಿ' ಎಂದರು.

‘ದೆಹಲಿ–ಬಿಹಾರ ಎರಡೂ ಕಡೆ ಮತ’

ಬಿಹಾರ ರ‍್ಯಾಲಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಬಂಕಾ (ಪಿಟಿಐ): ದೆಹಲಿಯಲ್ಲಿ ಮತ ಚಲಾಯಿಸಿದ್ದ ಬಿಜೆಪಿ ನಾಯಕರು ಬಿಹಾರ ವಿಧಾನಸಭೆಯ ಮೊದಲ ಹಂತದ ಚುನಾವಣೆಯಲ್ಲೂ ಮತ ಚಲಾಯಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಆರೋಪಿಸಿದರು.

ಬಂಕಾದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಹರಿಯಾಣ ಚುನಾವಣೆಗಳಲ್ಲಿ ನಡೆದ ‘ಮತ ಕಳ್ಳತನ’ ಕುರಿತು ಕಾಂಗ್ರೆಸ್ ಸಾಕ್ಷ್ಯಗಳನ್ನು ಬಿಡುಗಡೆ ಮಾಡಿದೆ. ಚುನಾವಣಾ ಆಯೋಗವು ಈ ಆರೋಪವನ್ನು ಅಲ್ಲಗಳೆಯುವಂತಿಲ್ಲ’ ಎಂದು ಹೇಳಿದರು.

ಹರಿಯಾಣ ರಾಜ್ಯದ ಎರಡು ಕೋಟಿ ಮತದಾರರ ಪೈಕಿ 29 ಲಕ್ಷ ಮತದಾರರು ನಕಲಿ. ಬಿಜೆಪಿಯು ಮಧ್ಯಪ್ರದೇಶ, ಛತ್ತೀಸಗಢ ಮತ್ತು ಹರಿಯಾಣದಲ್ಲಿ ಮತ ಅಕ್ರಮ ಎಸಗಿದೆ. ಬಿಹಾರದಲ್ಲೂ ಅಂಥದ್ದೇ ಯತ್ನ ನಡೆಸಲು ಮುಂದಾಗಿದೆ. ಈ ಅಕ್ರಮ ಮರುಕಳಿಸಲು ರಾಜ್ಯದ ಜನರು ಅವಕಾಶ ನೀಡುವುದಿಲ್ಲ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ರೈತರು, ಕಾರ್ಮಿಕರು ಮತ್ತು ನೇಕಾರರಿಗೆ ಬ್ಯಾಂಕುಗಳಿಂದ ಸಾಲವೂ ಸಿಗುತ್ತಿಲ್ಲ, ಇರುವ ಸಾಲ ಮನ್ನವೂ ಆಗುತ್ತಿಲ್ಲ. ಬಿಜೆಪಿ ನೇತೃತ್ವದ ಸರ್ಕಾರ ಯಾವಾಗಲೂ ಕೆಲವು ಕಾರ್ಪೊರೇಟ್‌ಗಳ ಸಾಲವನ್ನಷ್ಟೇ ಮನ್ನಾ ಮಾಡುತ್ತದೆ ಎಂದು ವಾಗ್ದಾಳಿ ನಡೆಸಿದರು.


ಬಂಕಾದಲ್ಲಿ ರಾಹುಲ್ ಗಾಂಧಿ ಅಭಿಮಾನಿಯ ಕೈಕುಲುಕಿದರು —ಪಿಟಿಐ ಚಿತ್ರ

‘ರಾಜಕೀಯ ಪ್ರೇರಿತ ಆರೋಪ’

ಪಟ್ನಾ: ದೆಹಲಿ ಮತ್ತು ಬಿಹಾರ ವಿಧಾನಸಭೆಗಳೆರಡರಲ್ಲೂ ಮತ ಚಲಾಯಿಸಲಾಗಿದೆ ಎಂಬ ಆರೋಪವು ‘ರಾಜಕೀಯ ಪ್ರೇರಿತ’ ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ರಾಕೇಶ್ ಸಿನ್ಹಾ ಶುಕ್ರವಾರ ಸ್ಪಷ್ಟನೆ ನೀಡಿದರು.

‘ಕಾನೂನು ಪ್ರಕ್ರಿಯೆ ಮತ್ತು ಚುನಾವಣಾ ಆಯೋಗದ ನಿಗದಿತ ಮಾರ್ಗಸೂಚಿಯ ಅನುಸಾರವೇ ಬಿಹಾರದ ಮತದಾರರ ಪಟ್ಟಿಗೆ ನನ್ನ ಹೆಸರನ್ನು ಸೇರ್ಪಡೆ ಮಾಡಲಾಗಿದೆ’ ಎಂದರು.

‘ಮೊದಲು ದೆಹಲಿಯ ಮತದಾರರ ಪಟ್ಟಿಯಲ್ಲಿ ನನ್ನ ಹೆಸರಿತ್ತು. ಬಳಿಕ ಕಾನೂನು ಪ್ರಕ್ರಿಯೆ ಅನುಸಾರವೇ ಅದನ್ನು ಬಿಹಾರಕ್ಕೆ ವರ್ಗಾಯಿಸಿಕೊಂಡೆ’ ಎಂದು ತಿಳಿಸಿದರು.

ವಾಗ್ದಾನ ಈಡೇರಿಸುವಲ್ಲಿ ಬಿಜೆಪಿ ವಿಫಲ: ಖರ್ಗೆ

ಸಾಸರಾಮ್ (ಬಿಹಾರ): ಬಿಹಾರ ಜನರಿಗೆ ನೀಡಿದ್ದ ವಾಗ್ದಾನವನ್ನು ಈಡೇರಿಸುವಲ್ಲಿ ಬಿಜೆಪಿ ವಿಫಲವಾಗಿದೆ. ಆದರೆ ‘ಇಂಡಿಯಾ’ ಒಕ್ಕೂಟವು ಪ್ರಣಾಳಿಕೆಯ ಎಲ್ಲ ಭರವಸೆಗಳನ್ನು ಈಡೇರಿಸಲಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಹೇಳಿದರು.

ಚೆನಾರಿಯಲ್ಲಿ ಸಾರ್ವಜನಿಕ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಮೋದಿ ಅವರು ಸುಳ್ಳು ಹೇಳಲು ಹಿಂಜರಿಯುವುದಿಲ್ಲ. ಅವರ ಸ್ನೇಹಿತ ಅಮಿತ್ ಶಾ ಕೂಡ ಅವರಂತೆಯೇ’ ಎಂದರು.

ಪ್ರತಿ ವರ್ಷ ರೈತರಿಗೆ ₹2 ಕೋಟಿ ನೀಡುವುದಾಗಿ ಮೋದಿ ಅವರು ಹೇಳಿದ್ದರು. ಅವರು ಹಣ ನೀಡಿದರೇ? ಇಲ್ಲ. ಬಡವರಿಗೆ ಒಂದು ಕೋಟಿ ಮನೆ ನಿರ್ಮಿಸುವುದಾಗಿ ಭರವಸೆ ನೀಡಿದ್ದರು. ಅದನ್ನೂ ಈಡೇರಿಸಲಿಲ್ಲ ಎಂದು ಆರೋಪಿಸಿದರು.

ನೆಹರೂ ಅವರು ಈ ದೇಶಕ್ಕೆ ಎಚ್‌ಎಂಟಿ, ಬಿಎಚ್‌ಇಎಲ್ ಮುಂತಾದ ಸಂಸ್ಥೆಗಳನ್ನು ನೀಡಿದ್ದಾರೆ. ಆದರೆ, ಬಿಜೆಪಿಯು ಆರ್‌ಎಸ್‌ಎಸ್ ಸೇನಾಪಡೆಯನ್ನು ಸ್ಥಾಪಿಸಿದೆ. ಅದು ಮನುಸ್ಮೃತಿಯ ಆಧಾರದಲ್ಲಿ ದೇಶ ನಡೆಸಲು ಪಕ್ಷಕ್ಕೆ ಸಹಾಯ ಮಾಡುತ್ತದೆ ಎಂದರು.

‘ಬಿಹಾರ ಜನರಿಂದ ಎನ್‌ಡಿಎ ತಿರಸ್ಕಾರ’

ನವದೆಹಲಿ: ಬಿಹಾರದ ಆಡಳಿತ ವ್ಯವಸ್ಥೆಯು ‘ರಿಮೋಟ್ ನಿಯಂತ್ರಣ’ದಲ್ಲಿರುವುದು ರಾಜ್ಯ ಜನರಿಗೆ ತಿಳಿದಿದೆ. ಹೀಗಾಗಿ ಅವರು ಎನ್‌ಡಿಎಯನ್ನು ತಿರಸ್ಕರಿಸಲಿದ್ದಾರೆ ಎಂದು ಕಾಂಗ್ರೆಸ್ ಶುಕ್ರವಾರ ಹೇಳಿದೆ.

‘ಬಿಹಾರದಲ್ಲಿ ಅದಾನಿ ಸಮೂಹಕ್ಕೆ ಕೆಂಪು ಹಾಸಿನ ಸ್ವಾಗತ ಲಭಿಸುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಭ್ರಷ್ಟಾಚಾರವನ್ನು ಬಯಲಿಗೆಳೆಯಲಿದೆ’ ಎಂದು ಕೆ.ಸಿ ವೇಣುಗೋಪಾಲ್ ಅವರು ‘ಎಕ್ಸ್’ನಲ್ಲಿ ಹೇಳಿದರು.

‘ಆರ್.ಕೆ.ಸಿಂಗ್ ಅವರು 2017ರಿಂದ 2024ರವರೆಗೆ ಕೇಂದ್ರ ಸಚಿವರಾಗಿದ್ದರು. ಅವರು ಬಿಹಾರದಲ್ಲಿ ನಡೆದ ₹60,000 ಕೋಟಿ ಹಗರಣವನ್ನು ಬಯಲಿಗೆಳೆದಿದ್ದಾರೆ. ಪ್ರಧಾನಿ ಅವರು ಬಿಹಾರದಲ್ಲಿ ಅದಾನಿ ಸಮೂಹಕ್ಕೆ ಕೆಂಪು ಹಾಸಿನ ಸ್ವಾಗತ ನೀಡಿದ್ದರಿಂದ ಈ ಹಗರಣ ನಡೆದಿದೆ’ ಎಂದು ದೂರಿದರು.

‘ಮೋದಿ–ನಿತೀಶ್ ಮೇಲೆ ನಂಬಿಕೆ’

ಸೋಲಿನ ವಿವರಣೆ ನೀಡಲು ಕಾಂಗ್ರೆಸ್ ಅಭ್ಯಾಸ: ಪ್ರಧಾನಿ

ಔರಂಗಾಬಾದ್/ ಭಭುವಾ (ಬಿಹಾರ) (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ದಾಖಲೆಯ ಮತದಾನ ನಡೆದಿರುವುದು ‘ಜನರು ನರೇಂದ್ರ ಮೋದಿ ಮತ್ತು ನಿತೀಶ್ ಕುಮಾರ್ ಅವರ ಸಾಧನೆಯಲ್ಲಿ ತಮ್ಮ ನಂಬಿಕೆ ಇಟ್ಟಿರುವುದಕ್ಕೆ ಪುರಾವೆಯಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದರು.

ಔರಂಗಾಬಾದ್ ಮತ್ತು ಭಭುವಾದಲ್ಲಿ ಚುನಾವಣಾ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡ ಅವರು, ಈ ಚುನಾವಣೆಯಲ್ಲಿ ಎನ್‌ಡಿಎ ತನ್ನ ಅತಿದೊಡ್ಡ ಗೆಲುವು ದಾಖಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಮೊದಲ ಹಂತದ ಮತದಾನದ ವೇಳೆ ಬಿಹಾರದ ಮತದಾರರು ಎಲ್ಲಾ ದಾಖಲೆಗಳನ್ನು ಮುರಿದರು. ಇಷ್ಟೊಂದು ಪ್ರಮಾಣದಲ್ಲಿ ಮತದಾನ ನಡೆದಿರುವುದನ್ನು ರಾಜ್ಯದ ಇತಿಹಾಸ ಹಿಂದೆಂದೂ ಕಂಡಿಲ್ಲ. ಇದರ ಹೆಚ್ಚಿನ ಶ್ರೇಯಸ್ಸು ತಾಯಂದಿರು ಮತ್ತು ಸಹೋದರಿಯರಿಗೆ ಸಲ್ಲುತ್ತದೆ. ಅವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿದರು. ಅವರೆಲ್ಲರೂ ನರೇಂದ್ರ-ನಿತೀಶ್ ಸಾಧನೆಯ ಮೇಲೆ ನಂಬಿಕೆ ಇಟ್ಟಿದ್ದಾರೆ ಎಂಬುದು ಸ್ಪಷ್ಟವಾಗಿದೆ’ ಎಂದು ಹೇಳಿದರು.

ಬಿಹಾರದಲ್ಲಿ ಉತ್ತಮ ಆಡಳಿತವನ್ನು ಖಾತರಿಪಡಿಸುವ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿರಬೇಕೆಂದು ಬಯಸಿ ಜನರು ಮತ ಚಲಾಯಿಸಿದ್ದಾರೆ ಎಂದು ಪ್ರತಿಪಾದಿಸಿದರು.

‘ಮತ ಕಳ್ಳತನ’ ಅರೋಪ ಮಾಡುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಟೀಕಿಸಿದ ಪ್ರಧಾನಿ, ‘ವಿರೋಧ ಪಕ್ಷವು ತನಗೆ ಸನ್ನಿಹಿತವಾಗಿರುವ ಸೋಲಿಗೆ ನೆಪಗಳನ್ನು ಹುಡುಕುವಲ್ಲಿ ಈಗಾಗಲೇ ನಿರತವಾಗಿದೆ. ಅವರು ಬಿಹಾರದಲ್ಲಿ ಏಕೆ ಸೋಲು ಎದುರಾಯಿತು ಎಂಬುದನ್ನು ಹೇಗೆ ವಿವರಿಸಬೇಕೆಂದು ಅಭ್ಯಾಸ ನಡೆಸುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.

‘ಬಿಹಾರಿಗಳನ್ನು ಅವಮಾನಿಸಿದ ಸ್ಟಾಲಿನ್’

ಭಾಗಲ್ಪುರ/ಬಿಹಾರ (ಪಿಟಿಐ): ಆರ್‌ಜೆಡಿ ಅಧ್ಯಕ್ಷ ಲಾಲೂ ಪ್ರಸಾದ್ ವಿರುದ್ಧ ವಾಗ್ದಾಳಿ ನಡೆಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ಬಿಹಾರಿಗಳನ್ನು ಬೀಡಿಯೊಂದಿಗೆ ಹೋಲಿಸಿ ಅವಮಾನಿಸಿದ ಡಿಎಂಕೆಯ ಎಂ.ಕೆ. ಸ್ಟಾಲಿನ್ ಅವರು, ನಿಮ್ಮ ಪುತ್ರ ತೇಜಸ್ವಿ ಯಾದವ್ ಅವರ ನೆಚ್ಚಿನ ಮುಖ್ಯಮಂತ್ರಿ’ ಎಂದು ದೂರಿದ್ದಾರೆ. ಭಾಗಲ್ಪುರದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಸ್ಟಾಲಿನ್ ಪಕ್ಷವು ಸನಾತನ ಧರ್ಮ ಮತ್ತು ರಾಮ ಮಂದಿರ ನಿರ್ಮಾಣವನ್ನೂ ವಿರೋಧಿಸಿತ್ತು. ಆದರೆ, ಬಿಹಾರದಲ್ಲಿ ಸೀತಾ ಮಾತೆ ಮಂದಿರ ನಿರ್ಮಾಣವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ’ ಎಂದರು.

‘ಯುಪಿಎ ಅವಧಿಯಲ್ಲಿ ಪಾಕಿಸ್ತಾನಿ ಭಯೋತ್ಪಾದಕರು ನಡೆಸಿದ ದಾಳಿಗಳಿಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಮೌನ ವಹಿಸಿದ್ದಾರೆ. ಇಂತಹ ದಾಳಿಗಳಿಗೆ ಮುಯ್ಯಿ ತೀರಿಸಿಕೊಳ್ಳುವುದಾಗಲಿ, ಕನಿಷ್ಠ ಭಯೋತ್ಪಾದನೆ ವಿರುದ್ಧ ಹೇಳಿಕೆ ನೀಡುವ ಧೈರ್ಯವಾಗಲಿ ಅವರಿಗೆ ಇಲ್ಲ’ ಎಂದು ದೂರಿದರು.

‘ಮಹಾ’ ಸರ್ಕಾರದಿಂದಲೇ ಭೂಗಳ್ಳತನ: ರಾಹುಲ್

ನವದೆಹಲಿ (ಪಿಟಿಐ): ಮಹಾರಾಷ್ಟ್ರದಲ್ಲಿ ದಲಿತರಿಗಾಗಿ ಮೀಸಲಿಟ್ಟಿದ್ದ ₹1,800 ಕೋಟಿ ಮೌಲ್ಯದ ಸರ್ಕಾರಿ ಜಮೀನನ್ನು ರಾಜ್ಯದ ಸಚಿವರ ಪುತ್ರನಿಗೆ ಮಾರಾಟ ಮಾಡಲಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪ ಮಾಡಿದರು.

ಮತ ಅಕ್ರಮದ ಮೂಲಕ ಅಧಿಕಾರಕ್ಕೆ ಬಂದಿರುವ ಸರ್ಕಾರವೇ ಈ ‘ಭೂಗಳ್ಳತನ’ ಮಾಡಿದೆ ಎಂದು ಅವರು ಶುಕ್ರವಾರ ‘ಎಕ್ಸ್’ನಲ್ಲಿ ದೂರಿದರು.

₹1,800 ಕೋಟಿ ಬೆಲೆಬಾಳುವ ಭೂಮಿಯನ್ನು ಸಚಿವರ ಪುತ್ರನ ಕಂಪನಿಗೆ ಕೇವಲ ₹300 ಕೋಟಿಗೆ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಅವರೇ… ನಿಮ್ಮ ಮೌನವೇ ಎಲ್ಲವನ್ನೂ ಹೇಳುತ್ತದೆ. ದಲಿತರು ಮತ್ತು ದುರ್ಬಲರ ಹಕ್ಕುಗಳನ್ನು ಕಸಿದುಕೊಂಡು ಬದುಕುವ ಲೂಟಿಕೋರರಿಂದ ನಿಮ್ಮ ಸರ್ಕಾರ ನಡೆಯುತ್ತಿರುವ ಕಾರಣದಿಂದ ನೀವು ಮೌನವಾಗಿದ್ದೀರಾ’ ಎಂದು ಪ್ರಶ್ನಿಸಿದರು.

₹300 ಕೋಟಿ ಮೌಲ್ಯದ ಭೂವ್ಯವಹಾರವು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪುತ್ರ ಪಾರ್ಥ ಅವರ ಮಾಲೀಕತ್ವದ ಸಂಸ್ಥೆಗೆ ಸಂಬಂಧಿಸಿದ್ದಾಗಿದೆ. ಇದು ಮಹಾರಾಷ್ಟ್ರ ರಾಜ್ಯ ರಾಜಕೀಯದಲ್ಲಿ ಚರ್ಚಿತವಾಗುತ್ತಿದ್ದು, ಸರ್ಕಾರವು ಉನ್ನತ ಮಟ್ಟದ ತನಿಖೆಗೆ ಆದೇಶಿಸಿದೆ.

‘ನೀಟ್–ಪಿಜಿ ಪರೀಕ್ಷೆಗಳಿಗೆ ಕೀ–ಉತ್ತರ ಪ್ರಕಟಿಸುವ ನೀತಿ ಬಹಿರಂಗಪಡಿಸಿ’

ನವದೆಹಲಿ (ಪಿಟಿಐ): ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ಎನ್‌ಇಇಟಿ)- ಸ್ನಾತಕೋತ್ತರ (ಪಿಜಿ) ಪರೀಕ್ಷೆಗಳಿಗೆ ಕೀ–ಉತ್ತರಗಳನ್ನು ಪ್ರಕಟಿಸುವ ಬಗ್ಗೆ ತನ್ನ ನೀತಿಯನ್ನು ಬಹಿರಂಗಪಡಿಸುವಂತೆ ಸುಪ್ರೀಂ ಕೋರ್ಟ್ ರಾಷ್ಟ್ರೀಯ ಪರೀಕ್ಷಾ ಮಂಡಳಿಗೆ (ಎನ್‌ಬಿಇ) ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ವಿಪುಲ್ ಪಾಂಚೋಲಿ ಅವರ ಪೀಠವು, ಪ್ರಮಾಣಪತ್ರ ಸಲ್ಲಿಸಿ ತನ್ನ ನಿಲುವನ್ನು ಸ್ಪಷ್ಟಪಡಿಸುವಂತೆ ಎನ್‌ಬಿಇ ಪರ ವಕೀಲರಿಗೆ ಸೂಚಿಸಿದೆ.

ನೀಟ್–ಪಿಜಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿವಿಧ ಸಮಸ್ಯೆಗಳ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಇದರಲ್ಲಿ, ಪಾರದರ್ಶಕತೆ ಕಾಯ್ದುಕೊಳ್ಳಲು ಕೀ–ಉತ್ತರಗಳನ್ನು ಬಹಿರಂಗಪಡಿಸುವುದೂ ಸೇರಿದೆ. ವಿಚಾರಣೆಯ ಸಮಯದಲ್ಲಿ ಎನ್‌ಬಿಇ ಪರ ವಕೀಲರು, ‘ಪ್ರಶ್ನೆಪತ್ರಿಕೆಗಳ ಕೀ–ಉತ್ತರಗಳನ್ನು ಪಡೆಯುವ ಉದ್ದೇಶದಿಂದ ಕೋಚಿಂಗ್ ಸಂಸ್ಥೆಗಳು ಕೋರ್ಟ್‌ಗೆ ಅರ್ಜಿಗಳನ್ನು ಸಲ್ಲಿಸಿವೆ. ಇದು ಪರೀಕ್ಷೆಯ ಗುಣಮಟ್ಟಕ್ಕೆ ಧಕ್ಕೆ ತರುತ್ತದೆ’ ಎಂದು ವಾದಿಸಿದರು.

ಸೆಪ್ಟೆಂಬರ್ 26ರಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠವು, ನೀಟ್–ಪಿಜಿ 2025ರ ಕೀ–ಉತ್ತರಗಳನ್ನು ಪ್ರಕಟಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಗಳ ಕುರಿತು ಕೇಂದ್ರ ಮತ್ತು ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷೆ ಮಂಡಳಿಗೆ ನೋಟಿಸ್ ಜಾರಿ ಮಾಡಿತ್ತು.

ಕೀ–ಉತ್ತರಗಳ ಪ್ರಕಟಣೆ ಸೇರಿದಂತೆ ನೀಟ್–ಪಿಜಿ ಪರೀಕ್ಷೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆಯನ್ನು ಕೋರ್ಟ್ ನಡೆಸುತ್ತಿದೆ.

ಎಸ್‌ಐಆರ್: 11ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿನಲ್ಲಿ ಭಾರತೀಯ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲು ಮುಂದಾಗಿರುವುದನ್ನು ಪ್ರಶ್ನಿಸಿ ಡಿಎಂಕೆ ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ನವೆಂಬರ್ 11ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಬಿಹಾರ ವಿಧಾನಸಭೆ ಚುನಾವಣೆಗೂ ಮುನ್ನ ಜೂನ್ 24ರಂದು ಎಸ್‌ಐಆರ್ ಆರಂಭಗೊಂಡಿತ್ತು. 12 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇದನ್ನು ವಿಸ್ತರಿಸಲು ಚುನಾವಣಾ ಆಯೋಗ ನಿರ್ಧರಿಸಿದೆ.

‘ವಿಮಾನ ದುರಂತಕ್ಕೆ ಪೈಲಟ್ ಕಾರಣರಲ್ಲ’

ನವದೆಹಲಿ (ಪಿಟಿಐ): ‘ಏರ್ ಇಂಡಿಯಾ ಡ್ರೀಮ್‌ಲೈನರ್ ವಿಮಾನ ಪತನಗೊಳ್ಳಲು ಪೈಲಟ್ ಕಾರಣರಲ್ಲ. ಯಾರೂ ಅವರನ್ನು ದೂಷಿಸಿಲ್ಲ. ಪ್ರಾಥಮಿಕ ವರದಿಯಲ್ಲೂ ಅವರ ವಿರುದ್ಧ ಯಾವುದೇ ಆರೋಪಗಳಿಲ್ಲ. ಇದೊಂದು ದುರ್ಘಟನೆ. ನೀವು ಮಾನಸಿಕವಾಗಿ ಕುಗ್ಗಬೇಡಿ, ಅನಗತ್ಯವಾಗಿ ಒತ್ತಡಕ್ಕೆ ಒಳಗಾಗಿ ಸಂಕಟ ಪಡಬೇಡಿ’.



ಅಹಮದಾಬಾದ್‌ನಲ್ಲಿ ಜೂನ್ 12ರಂದು ಸಂಭವಿಸಿದ ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ ಪೈಲಟ್ ಕ್ಯಾ.ಸುಮಿತ್ ಸಭರ್‌ವಾಲ್ ಅವರ 91 ವರ್ಷದ ತಂದೆಗೆ, ಸುಪ್ರೀಂ ಕೋರ್ಟ್‌ನ ಪೀಠ ಶುಕ್ರವಾರ ವಿಚಾರಣೆ ವೇಳೆ ನೀಡಿದ ಭರವಸೆಯ ನುಡಿಗಳಿವು.

‘ವಿಮಾನ ದುರಂತಕ್ಕೆ ಪೈಲಟ್ ಕಾರಣ ಎಂದು ಕೆಲವರು ದೂರುತ್ತಿದ್ದಾರೆ. ‘ವಾಲ್‌ಸ್ಟ್ರೀಟ್ ಜರ್ನಲ್’ನಲ್ಲೂ ಈ ಬಗ್ಗೆ ಲೇಖನ ಪ್ರಕಟಗೊಂಡಿದೆ. ಇಂತಹ ಆರೋಪಗಳಿಂದ ಮನಸ್ಸಿಗೆ ನೋವಾಗುತ್ತಿದೆ’ ಎಂದು ಸಮಿತ್ ಅವರ ತಂದೆ ಪುಷ್ಕರಾಜ್ ಸಭರ್‌ವಾಲ್ ದೂರಿದ್ದರು. ಭಾರತೀಯ ಪೈಲಟ್‌ಗಳ ಒಕ್ಕೂಟವೂ ಅವರ ಬೆಂಬಲಕ್ಕೆ ನಿಂತು, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಅಹಮದಾಬಾದ್ ವಿಮಾನ ದುರಂತದ ಬಗ್ಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ, ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸುವಂತೆ ಮನವಿಯಲ್ಲಿ ಆಗ್ರಹಿಸಲಾಗಿದೆ.

ವಾದ ಆಲಿಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಪುಷ್ಕರಾಜ್ ಅವರಿಗೆ, ‘ನೀವು ದುಃಖಿಸಬೇಡಿ’ ಎಂದು ಹೇಳಿದ್ದಲ್ಲದೆ, ಕೇಂದ್ರ ಸರ್ಕಾರ ಮತ್ತು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೆ (ಡಿಜಿಸಿಎ) ಈ ಬಗ್ಗೆ ನೋಟಿಸ್ ಜಾರಿಗೊಳಿಸಿತು.

‘ವಾಲ್‌ಸ್ಟ್ರೀಟ್ ಜರ್ನಲ್’ನಲ್ಲಿ ಭಾರತವನ್ನು ದೂಷಿಸಲು ಈ ಕೀಳು ಅಭಿರುಚಿಯ ವರದಿ ಪ್ರಕಟಿಸಲಾಗಿದೆ. ವಿಮಾನ ಅಪಘಾತ ತನಿಖಾ ಮಂಡಳಿಯು (ಎಎಐಬಿ) ಜುಲೈ 12ರಂದು ವರದಿ ಪ್ರಕಟಿಸಿದೆ. ಈ ವರದಿಯನ್ನು ಕೋರ್ಟ್ ಗಮನಿಸಿದೆ. ಇದರಲ್ಲಿ ಎಲ್ಲೂ ಪೈಲಟ್ ಮೇಲೆ ಆರೋಪ ಹೊರಿಸಿಲ್ಲ. ಅವರನ್ನು ದೂಷಿಸಿಲ್ಲ’ ಎಂದು ನ್ಯಾಯಪೀಠ ಹೇಳಿತು.

ಈ ಪ್ರಕರಣವೂ ಸೇರಿ ವಿಮಾನ ದುರಂತಕ್ಕೆ ಸಂಬಂಧಿಸಿದ ಇನ್ನಿತರ ಪ್ರಕರಣಗಳ ವಿಚಾರಣೆಯನ್ನು ನ.20ಕ್ಕೆ ಮುಂದೂಡಿತು.

ಕ್ರಿಕೆಟಿಗ ಶಮಿಗೆ ನೋಟಿಸ್

‘ನನಗೆ ಮತ್ತು ಅಪ್ರಾಪ್ತ ವಯಸ್ಸಿನ ಮಗಳಿಗೆ ನೀಡುತ್ತಿರುವ ಮಧ್ಯಂತರ ಜೀವನಾಂಶದ ಮೊತ್ತವನ್ನು ಹೆಚ್ಚಿಸಬೇಕು’ ಎಂದು ಕೋರಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರ ಪರಿತ್ಯಕ್ತ ಪತ್ನಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಮೊಹಮ್ಮದ್ ಶಮಿ ಅವರಿಗೆ ನೋಟಿಸ್ ಜಾರಿಗೊಳಿಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಜುಲೈ 1 ಮತ್ತು ಆಗಸ್ಟ್ 25ರಂದು ಕಲ್ಕತ್ತ ಹೈಕೋರ್ಟ್ ನೀಡಿರುವ ಆದೇಶಗಳನ್ನು ಪ್ರಶ್ನಿಸಿ ಶಮಿ ಅವರಿಂದ ದೂರವಾಗಿರುವ ಪತ್ನಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠವು ವಿಚಾರಣೆ ನಡೆಸಿ ಶಮಿ ಅವರಿಗೆ ನೋಟೀಸ್ ಜಾರಿ ಮಾಡಿತು.

ಶಮಿ ಅವರು ಪರಿತ್ಯಕ್ತ ಪತ್ನಿ ಮತ್ತು ಮಗಳಿಗೆ ಪಾವತಿಸಬೇಕಾದ ಮಧ್ಯಂತರ ಜೀವನಾಂಶ ಮೊತ್ತವನ್ನು ಕ್ರಮವಾಗಿ ₹1.5 ಲಕ್ಷ ಮತ್ತು ₹2.5 ಲಕ್ಷಕ್ಕೆ ಹೈಕೋರ್ಟ್ ಹೆಚ್ಚಿಸಿ ಆದೇಶಿಸಿತ್ತು. ಎಂಟು ತಿಂಗಳ ಬಾಕಿಯನ್ನು ಎಂಟು ಮಾಸಿಕ ಕಂತುಗಳಲ್ಲಿ ತೀರಿಸಲು ಆಟಗಾರನಿಗೆ ಅವಕಾಶ ನೀಡಿತ್ತು.

ಶಮಿ ಅವರ ಹಣಕಾಸಿನ ಸ್ಥಿತಿ ಮತ್ತು ಸಿರಿವಂತ ಜೀವನ ಶೈಲಿ ಪರಿಗಣಿಸಿದರೆ ಈಗ ನೀಡುತ್ತಿರುವ ಮೊತ್ತ ‘ಏನೇನೂ ಸಾಲದು’ ಎಂದು ಪತ್ನಿ ಮನವಿಯಲ್ಲಿ ತಿಳಿಸಿದ್ದರು. ತಮಗೆ ಮಾಸಿಕ ₹7 ಲಕ್ಷ ಮತ್ತು ಮಗಳಿಗೆ ₹3 ಲಕ್ಷ ನೀಡಬೇಕು ಎಂದು ಮನವಿ ಮಾಡಿದ್ದರು.

2021–22ರಲ್ಲಿ ಶಮಿ ಸಲ್ಲಿಸಿದ ಆದಾಯ ತೆರಿಗೆ ರಿಟರ್ನ್ ಪ್ರಕಾರ, ಅವರ ವಾರ್ಷಿಕ ಆದಾಯ ₹48 ಕೋಟಿ ಇದೆ ಎಂದು ಪತ್ನಿ ಅರ್ಜಿಯಲ್ಲಿ ತಿಳಿಸಿದ್ದರು. ಅವರ ಬಳಿ ವಿಲಾಸಿ ಕಾರುಗಳಾದ ರೇಂಜ್ ರೋವರ್, ಜಾಗ್ವಾರ್, ಮರ್ಸಿಡಿಸ್, ಟೊಯಟಾ ಫಾರ್ಚುನರ್ ಇದೆ ಎಂದೂ ಗಮನಸೆಳೆದಿದ್ದರು. ದಂಪತಿ 2014ರಲ್ಲಿ ವಿವಾಹವಾಗಿದ್ದರು.

ಬೀದಿನಾಯಿ ಸ್ಥಳಾಂತರಿಸಿ: ಸುಪ್ರೀಂ

ಒಂದನೇ ಪುಟದಿಂದ...

‘ಸಂಸ್ಥೆಯ ಆವರಣದೊಳಗೆ ಬೀದಿನಾಯಿಗಳು ಪ್ರವೇಶಿಸದಂತೆ ತಡೆದು, ಸ್ವಚ್ಛತೆ ಕಾಪಾಡಲು ಅನುಕೂಲವಾಗುವಂತೆ ನಿರ್ದಿಷ್ಟ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಗೊತ್ತುಪಡಿಸಿದ ಅಧಿಕಾರಿಯ ಹೆಸರನ್ನು ಸಂಸ್ಥೆಯ ಪ್ರವೇಶ ದ್ವಾರದಲ್ಲಿಯೇ ಶಾಶ್ವತವಾಗಿ ನಮೂದಿಸುವಂತೆ ಸೂಚಿಸಬೇಕು’ ಎಂದು ಸ್ಥಳೀಯ ಆಡಳಿತ ಸಂಸ್ಥೆ ಹಾಗೂ ಪ್ರಾಧಿಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಇದಲ್ಲದೇ, ಸ್ಥಳೀಯ ಸಂಸ್ಥೆ ಅಧಿಕಾರಿಗಳು ಹಾಗೂ ಪಂಚಾಯಿತಿ ಅಧಿಕಾರಿಗಳು ಇಡೀ ಆವರಣದ ಒಳಭಾಗದಲ್ಲಿ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಿ, ಸಂಸ್ಥೆಗಳ ಆವರಣವು ಬೀದಿನಾಯಿಗಳಿಂದ ಮುಕ್ತಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು’ ಎಂದೂ ಹೇಳಿದೆ.

‘ಸಂಸ್ಥೆಗಳ ಆವರಣಗಳಲ್ಲಿ ಕಂಡುಬರುವ ಬೀದಿನಾಯಿಗಳನ್ನು ಪ್ರಾಣಿಗಳ ಜನನ ನಿಯಂತ್ರಣ ನಿಯಮದಂತೆ ಸೆರೆಹಿಡಿದು, ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕು. ಅವುಗಳಿಗೆ ಸೂಕ್ತ ಲಸಿಕೆ ಹಾಕಿದ ನಂತರ ಆಶ್ರಯತಾಣಗಳಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದು ಆಯಾ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ. ಬೀದಿ ನಾಯಿಗಳನ್ನು ಸೆರೆ ಹಿಡಿದ ಜಾಗಕ್ಕೆ ಮರಳಿ ಬಿಡಬಾರದು’ ಎಂದು ತಾಕೀತು ಮಾಡಿದೆ.

ಬೀದಿನಾಯಿಗಳಿಗೆ ಸಂಬಂಧಿಸಿದ ವಿಷಯದಲ್ಲಿ ಜುಲೈ 28ರಂದು ದಾಖಲಿಸಿಕೊಂಡಿದ್ದ ಸ್ವಯಂಪ್ರೇರಿತ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಬೀಡಾಡಿ ದನಗಳ ಸ್ಥಳಾಂತರಕ್ಕೂ ಸೂಚನೆ

ಒಂದನೇ ಪುಟದಿಂದ...

ಅವುಗಳನ್ನು ಸೆರೆಹಿಡಿದು ‘ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ನಿಯಂತ್ರಣ ಕಾಯ್ದೆ’ ಹಾಗೂ ‘ಪ್ರಾಣಿಗಳ ಜನನ ನಿಯಂತ್ರಣ’ ನಿಬಂಧನೆಗೆ ಅನುಗುಣವಾಗಿ ಸೂಕ್ತ ಕೇಂದ್ರ ಅಥವಾ ಪಶು ವೈದ್ಯಕೀಯ ಆರೈಕೆ ಕೇಂದ್ರಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ಈ ಕೇಂದ್ರಗಳಲ್ಲಿ ಸೂಕ್ತ ಆಹಾರ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಪಶುವೈದ್ಯರ ನೇಮಕ ಮಾಡಬೇಕು. ಹೆದ್ದಾರಿಗಳಲ್ಲಿ ನಿರಂತರ ನಿಗಾ ವಹಿಸಲು ನಿರ್ದಿಷ್ಟ ಹೆದ್ದಾರಿ ಗಸ್ತು ತಂಡ ನಿಯೋಜಿಸಿ, ಸಂಚಾರಕ್ಕೆ ಅಡ್ಡಿಉಂಟುಮಾಡುವ ಅವುಗಳನ್ನು ಸ್ಥಳಾಂತರಿಸಬೇಕು. ನಿರ್ದಿಷ್ಟ ಸಹಾಯವಾಣಿ ಸಂಖ್ಯೆಯನ್ನು ತೆರೆಯಬೇಕು. ಮತ್ತೆ ಅವು ಕಂಡುಬಂದಲ್ಲಿ ಅಥವಾ ಅವುಗಳಿಂದ ಅಪಘಾತ ಉಂಟಾದ ಸಂದರ್ಭದಲ್ಲಿ ಪ್ರಯಾಣಿಕರು ಕೂಡ ದೂರು ನೀಡಲು ಅವಕಾಶ ನೀಡಬೇಕು. ಈ ಸಹಾಯವಾಣಿಯೂ ಹತ್ತಿರದ ನಿಯಂತ್ರಣ ಕೊಠಡಿ, ಪೊಲೀಸ್ ಠಾಣೆ, ಹೆದ್ದಾರಿ ಪ್ರಾಧಿಕಾರ ಕಚೇರಿ ಹಾಗೂ ಜಿಲ್ಲಾಡಳಿಗೂ ಸಂಪರ್ಕ ಹೊಂದಿರಬೇಕು. ಇದರಿಂದ ಈ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಲು ನೆರವಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಚೆನ್ನೈ ವಿಮಾನ ನಿಲ್ದಾಣ: ಪ್ರತಿಭಟನೆ ನಡುವೆ ಭೂಸ್ವಾಧೀನ ಚುರುಕು

ಪ್ರಜಾವಾಣಿ ವಾರ್ತೆ

ಚೆನ್ನೈ: ಗ್ರಾಮಸ್ಥರ ಪ್ರತಿಭಟನೆ ನಡುವೆಯೂ ಚೆನ್ನೈ ಸಮೀಪ ಹೊಸ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ನಿರ್ಮಿಸಲು ತಮಿಳುನಾಡು ಸರ್ಕಾರ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಿದೆ.

5,746 ಎಕರೆ ಪ್ರದೇಶ ಯೋಜನೆಗೆ ಅಗತ್ಯವಿದ್ದು, ಕಾಂಚಿಪುರಂ ಜಿಲ್ಲೆಯ ಪರಂದೂರಿನಲ್ಲಿ ಈಗಾಗಲೇ ಶೇ 30ರಷ್ಟು (ಸುಮಾರು 3,800 ಎಕರೆ) ಭೂಮಿಯನ್ನು ಖಾಸಗಿಯವರಿಂದ ಸರ್ಕಾರ ಖರೀದಿಸಿದೆ. 2026ರ ವಿಧಾನಸಭೆ ಚುನಾವಣೆಗೂ ಮುನ್ನ ಉಳಿದ ಶೇ 40ರಷ್ಟು ಭೂಮಿ ಖರೀದಿಸುವ ವಿಶ್ವಾಸದಲ್ಲಿ ಸರ್ಕಾರ ಇದೆ.

ಆರಂಭದಲ್ಲಿ ಇಲ್ಲಿನ ಜನರು ಯೋಜನೆಗೆ ಭೂಮಿ ನೀಡಲು ನಿರಾಕರಿಸಿದ್ದರು. ಮಾರ್ಗಸೂಚಿ ದರಕ್ಕಿಂತ ಮೂರರಿಂದ ಏಳುಪಟ್ಟು ಹೆಚ್ಚು ದರ ನಿಗದಿ, ಪುನರ್ ವಸತಿ ಕಲ್ಪಿಸುವ ಪರಿಹಾರ ಪ್ಯಾಕೇಜ್ ರೈತರ ಪ್ರತಿರೋಧ ತಗ್ಗಿಸುವಲ್ಲಿ ಕೆಲಸ ಮಾಡಿದೆ ಎಂದು ಮೂಲಗಳು ಹೇಳಿವೆ.

ಆದರೆ, ಏಕನಾಪುರಂ ಗ್ರಾಮಸ್ಥರು 2022ರಿಂದ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಗ್ರಾಮದ 500 ಎಕರೆ ಭೂಮಿ ಸ್ವಾಧೀನ ಆಗಲಿದ್ದು, ಯೋಜನೆಗಾಗಿ 1000 ಮನೆಗಳ ಪೈಕಿ ಶೇ 60ರಷ್ಟು ಮನೆಗಳನ್ನು ನೆಲಸಮ ಮಾಡಬೇಕಿದೆ. ಗ್ರಾಮಸ್ಥರ ಒಪ್ಪಿಗೆ ಇಲ್ಲದೇ ವಿಮಾನ ನಿಲ್ದಾಣ ಸಾಧ್ಯವಿಲ್ಲ. ನಿಲ್ದಾಣದ ರನ್‌ವೇಗಾಗಿ ಈ ಭೂಮಿ ಅಗತ್ಯವಿದೆ.

ವಿಧಾನಸಭೆ ಚುನಾವಣೆ ಮುಗಿಯುವವರೆಗೂ ಹೋರಾಟವನ್ನು ಬಲಪ್ರಯೋಗದಿಂದ ನಿಯಂತ್ರಿಸದೇ ಇರಲು ಸರ್ಕಾರ ತೀರ್ಮಾನಿಸಿದೆ.

‘ವಂದೇ ಮಾತರಂ’ ಗೀತೆಯ ಕೆಲ ಸಾಲುಗಳನ್ನು 1937ರಲ್ಲಿ ಕೈಬಿಡಲಾಗಿದೆ: ಪ್ರಧಾನಿ

‘ವಿಭಜಕ ಮನಃಸ್ಥಿತಿಯೇ ಸವಾಲು’

ನವದೆಹಲಿ (ಪಿಟಿಐ): ‘ವಂದೇ ಮಾತರಂ’ ಗೀತೆಯ ಕೆಲ ಪ್ರಮುಖ ಸಾಲುಗಳನ್ನು 1937ರಲ್ಲಿ ಕೈಬಿಟ್ಟದ್ದು, ದೇಶ ವಿಭಜನೆಯ ಬೀಜ ಬಿತ್ತಲು ಕಾರಣವಾಯಿತು. ಅಂತಹ ‘ವಿಭಜಕ ಮನಃಸ್ಥಿತಿ’ ಇನ್ನೂ ದೇಶಕ್ಕೆ ಸವಾಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

‘ವಂದೇ ಮಾತರಂ’ ಗೀತೆಯು 150 ವರ್ಷ ಪೂರೈಸಿರುವ ಅಂಗವಾಗಿ ವರ್ಷಪೂರ್ತಿ ನಡೆಯಲಿರುವ ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಅಂಚೆ ಚೀಟಿ ಮತ್ತು ನಾಣ್ಯ ಬಿಡುಗಡೆ ಮಾಡಿದರು.

‘ವಂದೇ ಮಾತರಂ ಗೀತೆಯು ಭಾರತದ ಸ್ವಾತಂತ್ರ್ಯ ಹೋರಾಟದ ಧ್ವನಿಯಾಗಿ ಬದಲಾಗಿತ್ತಲ್ಲದೆ, ಅದು ಪ್ರತಿಯೊಬ್ಬ ಭಾರತೀಯನ ಭಾವನೆಗಳನ್ನು ಹೊರಹೊಮ್ಮುವಂತೆ ಮಾಡಿತು. ದುರದೃಷ್ಟವಶಾತ್, 1937ರಲ್ಲಿ ಗೀತೆಯ ಪ್ರಮುಖ ಸಾಲುಗಳನ್ನು ಕೈಬಿಡಲಾಯಿತು. ಅದರ ಆತ್ಮದ ಒಂದು ಭಾಗ ಬೇರ್ಪಟ್ಟಿತು. ರಾಷ್ಟ್ರ ನಿರ್ಮಾಣದ ‘ಮಹಾ ಮಂತ್ರ’ ಎನಿಸಿರುವ ಗೀತೆಗೆ ಏಕೆ ಈ ಅನ್ಯಾಯವನ್ನು ಮಾಡಲಾಯಿತು ಎಂಬುದನ್ನು ಇಂದಿನ ಪೀಳಿಗೆ ತಿಳಿದುಕೊಳ್ಳಬೇಕು' ಎಂದು ಹೇಳಿದರು.

‘ಆಪರೇಷನ್ ಸಿಂಧೂರ’ವನ್ನು ಪರೋಕ್ಷವಾಗಿ ಉಲ್ಲೇಖಿಸುತ್ತಾ ಪ್ರಧಾನಿ, ‘ವಂದೇ ಮಾತರಂ’ ಎಲ್ಲಾ ಯುಗಗಳಿಗೂ ಪ್ರಸ್ತುತವಾಗಿದೆ ಎಂದು ಹೇಳಿದರು. ‘ಶತ್ರುಗಳು ಭಯೋತ್ಪಾದನೆ ಮೂಲಕ ನಮ್ಮ ಭದ್ರತೆ ಹಾಗೂ ಗೌರವದ ಮೇಲೆ ದಾಳಿ ಎಸಗಲು ಧೈರ್ಯ ಮಾಡಿದಾಗ, ಅದನ್ನು ಎದುರಿಸಲು ದುರ್ಗೆಯ ರೂಪವನ್ನು ಹೇಗೆ ತಾಳಬೇಕೆಂಬುದನ್ನು ಭಾರತವು ಜಗತ್ತಿಗೆ ತೋರಿಸಿಕೊಟ್ಟಿತು’ ಎಂದರು.

ಬಿಜೆಪಿ ಆರೋಪ: ನೆಹರೂ ಅವರು ಅಧ್ಯಕ್ಷರಾಗಿದ್ದಾಗ ಕಾಂಗ್ರೆಸ್ ತನ್ನ ಕೋಮು ಕಾರ್ಯಸೂಚಿಯ ಭಾಗವಾಗಿ ‘ವಂದೇ ಮಾತರಂ’ ಗೀತೆಯ ಕೆಲವು ಸಾಲುಗಳನ್ನು ಕೈಬಿಟ್ಟು, ಮೊಟಕುಗೊಳಿಸಿದ ಗೀತೆಯನ್ನು ಮಾತ್ರ ಅಳವಡಿಸಿಕೊಂಡಿತು ಎಂದು ಬಿಜೆಪಿ ಆರೋಪಿಸಿದೆ.

ಕಾಂಗ್ರೆಸ್ ಪಕ್ಷವು ಧಾರ್ಮಿಕ ಕಾರಣಗಳನ್ನು ಉಲ್ಲೇಖಿಸಿ ಉದ್ದೇಶಪೂರ್ವಕವಾಗಿ ದುರ್ಗಾ ದೇವಿಯನ್ನು ಹೊಗಳಿದ ವಂದೇ ಮಾತರಂನ ಸಾಲುಗಳನ್ನು ತೆಗೆದುಹಾಕಿದೆ’ ಎಂದು ಬಿಜೆಪಿ ವಕ್ತಾರ ಸಿ.ಆರ್ ಕೇಶವನ್ ‘ಎಕ್ಸ್’ನಲ್ಲಿ ಪೋಸ್ಟ್‌ನಲ್ಲಿ ಮಾಡಿದ್ದಾರೆ.



‘ವಂದೆ ಮಾತರಂ’ ಗೀತೆಯ 150ನೇ ವರ್ಷಾಚರಣೆ ಅಂಗವಾಗಿ ಅಂಚೆ ಚೀಟಿಯನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಬಿಡುಗಡೆ ಮಾಡಿದರು —ಪಿಟಿಐ ಚಿತ್ರ

ಪ್ರಧಾನಿ ಕ್ಷಮೆಗೆ ಆಗ್ರಹ

‘ವಂದೇ ಮಾತರಂ’ ಗೀತೆಯ ವಿಷಯದಲ್ಲಿ ಪ್ರಧಾನಿ ಅವರು ಕಾಂಗ್ರೆಸ್ ವಿರುದ್ಧ ಸುಳ್ಳು ಆರೋಪ ಮಾಡಿದ್ದು, ಅದಕ್ಕೆ ದೇಶದ ಕ್ಷಮೆಯಾಚಿಸಬೇಕು ಎಂದು ಕಾಂಗ್ರೆಸ್ ಶುಕ್ರವಾರ ಆಗ್ರಹಿಸಿದೆ.

‘ವಂದೇ ಮಾತರಂ ಜತೆ ವಿಶೇಷ ಸಂಬಂಧ ಹೊಂದಿದ್ದ ರವೀಂದ್ರನಾಥ ಟ್ಯಾಗೋರ್ ಅವರು ಗೀತೆಯ ಮೊದಲ ಎರಡು ಚರಣಗಳನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಿದ್ದರು. 1937ರಲ್ಲಿ ಅವರ ಸಲಹೆಯಂತೆ ಎರಡು ಚರಣಗಳನ್ನು ಅಳವಡಿಸಿ, ಉಳಿದ ಸಾಲುಗಳನ್ನು ಕೈಬಿಡಲಾಯಿತು’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸಂಪಾದಕೀಯ

ಪ್ರಶ್ನೆಗಳಿಗೆ ಉತ್ತರಿಸದ ಆಯೋಗ ಚುನಾವಣಾ ಪಾವಿತ್ರ್ಯಕ್ಕೆ ಪೆಟ್ಟು

ಮತಪಟ್ಟಿಗಳಲ್ಲಿನ ಅಕ್ರಮಗಳನ್ನು ಬಯಲಿಗೆಳೆಯುವ ಅಭಿಯಾನ ನಡೆಸುತ್ತಿರುವ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಹರಿಯಾಣದಲ್ಲಿ ನಡೆದಿದೆ ಎನ್ನಲಾದ ಚುನಾವಣಾ ಅವ್ಯವಹಾರಗಳ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಈ ದಾಖಲೆಗಳು ಚುನಾವಣೆಗಳ ಪಾವಿತ್ರ್ಯ ಮತ್ತು ಭಾರತೀಯ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವಂತಿವೆ. ರಾಹುಲ್ ಅವರ ಆರೋಪಗಳಿಗೆ ಆಯೋಗ, ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ತನ್ನ ಎಂದಿನ ಧೋರಣೆಯಲ್ಲಿ ಪ್ರತಿಕ್ರಿಯಿಸಿದೆ. ಗಂಭೀರ ಆರೋಪಗಳಿಗೆ ವಿಶ್ವಾಸಾರ್ಹ ಉತ್ತರಗಳನ್ನು ನೀಡದಿರುವುದು ಆಯೋಗದ ಕಾರ್ಯಪ್ರಕ್ರಿಯೆಯ ಬಗ್ಗೆ ಅನುಮಾನ ಮೂಡಿಸುವಂತಿದೆ. ಈ ಮೊದಲು ರಾಹುಲ್ ಮಾಡಿದ್ದ ಆರೋಪಗಳು ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿದ್ದವು. ಕರ್ನಾಟಕದ ಮಹದೇವಪುರ ಹಾಗೂ ಆಳಂದ ವಿಧಾನಸಭಾ ಕ್ಷೇತ್ರಗಳಲ್ಲಿನ ಮತಪಟ್ಟಿಗಳಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಅವರು ಗಮನಸೆಳೆದಿದ್ದರು. ಈಗಿನ ಆರೋಪ ಹರಿಯಾಣದಲ್ಲಿ ನಡೆದ 2024ರ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ್ದಾಗಿದೆ; ಆಯೋಗದ ನೆರವಿನಿಂದ ಬಿಜೆಪಿ ಫಲಿತಾಂಶವನ್ನು ತನ್ನ ಪರವಾಗಿ ಮಾಡಿಕೊಂಡಿದೆ ಎಂದು ಆರೋಪಿಸಲಾಗಿದೆ. ಚುನಾವಣೆಗೆ ಮೊದಲು ಮತ್ತು ನಂತರದ ಬಹುತೇಕ ಸಮೀಕ್ಷೆಗಳು ಕಾಂಗ್ರೆಸ್ ಪರವಾಗಿ ವ್ಯಕ್ತಪಡಿಸಿದ್ದ ಒಲವನ್ನು ‘ಆಪರೇಷನ್ ಸರ್ಕಾರ್ ಚೋರಿ’ ಕಾರ್ಯಾಚರಣೆಯ ಮೂಲಕ ಕಸಿದುಕೊಳ್ಳಲಾಯಿತು ಎಂದು ರಾಹುಲ್ ದೂರಿದ್ದಾರೆ.



ಆರೋಪಗಳಿಗೆ ಉತ್ತರಿಸಬೇಕಾದ ಚುನಾವಣಾ ಆಯೋಗ, ಮರುಪ್ರಶ್ನೆಗಳ ಮೂಲಕ ಪ್ರಶ್ನೆ ಕೇಳುವವರ ಬಾಯಿ ಮುಚ್ಚಿಸಲು ಪ್ರಯತ್ನಿಸುತ್ತಿರುವುದು ಪ್ರಜಾಸತ್ತಾತ್ಮಕ ನಡವಳಿಕೆಯಲ್ಲ.

ರಾಹುಲ್ ಅವರು ತಮ್ಮ ಆರೋಪಗಳಿಗೆ ಸಾಕ್ಷ್ಯದ ರೂಪದಲ್ಲಿ ಹರಿಯಾಣದ ರಾಯ್ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿ ಹಂಚಿಕೊಂಡಿದ್ದಾರೆ. ಆ ಪಟ್ಟಿಯಲ್ಲಿ ಬ್ರೆಜಿಲ್‌ನ ಮಹಿಳಾ ರೂಪದರ್ಶಿಯೊಬ್ಬರ ಫೋಟೊ, 19 ಮತಗಟ್ಟೆಗಳಲ್ಲಿ 22 ಬಾರಿ ಬೇರೆ ಬೇರೆ ಹೆಸರುಗಳಲ್ಲಿ ಬಳಕೆಯಾಗಿದೆ. ಹರಿಯಾಣದ ಪ್ರತಿ ಎಂಟು ಮತದಾರರಲ್ಲಿ ಒಬ್ಬರು (ಒಟ್ಟು 25 ಲಕ್ಷಕ್ಕೂ ಹೆಚ್ಚು) ನಕಲಿ ಮತದಾರರಾಗಿದ್ದಾರೆ; 1,22,177 ಮತದಾರರ ಹೆಸರಿನೊಂದಿಗೆ ನಕಲಿ ಫೋಟೊಗಳಿವೆ ಎಂದು ಆರೋಪಿಸಿದ್ದಾರೆ. ಆಯೋಗದ ದಾಖಲೆಗಳನ್ನು ಉಲ್ಲೇಖಿಸಿಯೇ ರಾಹುಲ್ ಆರೋಪಗಳನ್ನು ಮಾಡಿದ್ದಾರೆ ಹಾಗೂ ನಡೆದಿವೆ ಎನ್ನಲಾದ ಅಕ್ರಮಗಳು ಅವರು ಈ ಮೊದಲು ಬೇರೆಡೆಗಳಲ್ಲಿ ಬಯಲು ಮಾಡಿದ್ದ ಚುನಾವಣಾ ಅವ್ಯವಹಾರಗಳನ್ನೇ ಹೋಲುತ್ತಿವೆ. ದೇಶದ ಬೇರೆ ಬೇರೆ ಭಾಗಗಳಲ್ಲಿನ ಮತದಾರರ ಪಟ್ಟಿಗಳಲ್ಲಿ ಪತ್ತೆಯಾಗಿರುವ ಅಕ್ರಮಗಳಲ್ಲಿ ಸಾಮ್ಯತೆಯಿದ್ದು, ಬಿಜೆಪಿಗೆ ಅನುಕೂಲ ಆಗುವಂತೆ ಚುನಾವಣಾ ಪ್ರಕ್ರಿಯೆಯನ್ನು ತಿರುಚುವ ಷಡ್ಯಂತ್ರವನ್ನು ರೂಪಿಸಲಾಗಿದೆ ಎನ್ನುವ ಆರೋಪಗಳಿಗೆ ಚುನಾವಣಾ ಆಯೋಗ ನಂಬಲರ್ಹ ದಾಖಲೆಗಳ ಮೂಲಕ ಉತ್ತರಿಸಬೇಕಾಗಿದೆ.

ಚುನಾವಣಾ ಅಕ್ರಮದ ಆರೋಪಗಳ ಬಗ್ಗೆ ಆಯೋಗ ಅಥವಾ ಬಿಜೆಪಿ ಇದುವರೆಗೂ ಸಮರ್ಪಕ ಉತ್ತರ ನೀಡಿಲ್ಲ. ಆರೋಪಗಳನ್ನು ಸಾರಾಸಗಟಾಗಿ ತಳ್ಳಿಹಾಕಿರುವ ಆಯೋಗ, ಮತದಾರರ ಪಟ್ಟಿಯಲ್ಲಿ ಲೋಪದೋಷಗಳು ಇದ್ದಲ್ಲಿ ಅದನ್ನು ಕಾಂಗ್ರೆಸ್‌ನ ಬೂತ್ ಮಟ್ಟದ ಏಜೆಂಟರು ಏಕೆ ಪರಿಶೀಲಿಸಲಿಲ್ಲ ಎಂದು ಪ್ರಶ್ನಿಸಿದೆ. ಪಟ್ಟಿಗಳು ದೊರೆಯುವುದು ತೀರಾ ವಿಳಂಬವಾದುದರಿಂದ ಪರಿಶೀಲನೆಗೆ ಸಮಯವಿರಲಿಲ್ಲ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ನ್ಯಾಯಸಮ್ಮತ ಚುನಾವಣೆ ನಡೆಸುವ ಹೊಣೆ ಹೊತ್ತಿರುವ ಆಯೋಗ, ತನ್ನ ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳೆದುರಾದಾಗ, ಮರು ಪ್ರಶ್ನೆಗಳನ್ನು ಕೇಳುವ ಮೂಲಕ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸಬಾರದು. ನಿರೀಕ್ಷಿಸಿದಂತೆಯೇ, ರಾಹುಲ್ ಅವರನ್ನು ಲೇವಡಿ ಮಾಡಿರುವ ಬಿಜೆಪಿ, ಆರೋಪಗಳಿಗೆ ಸಂಬಂಧಿಸಿದಂತೆ ಉತ್ತರ ನೀಡಿಲ್ಲ. ಚುನಾವಣಾ ಅಕ್ರಮಗಳನ್ನು ಪ್ರಶ್ನಿಸುತ್ತಿರುವ ಕಾಂಗ್ರೆಸ್ ಮುಖಂಡ ನ್ಯಾಯಾಲಯದ ಮೊರೆ ಹೋಗಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಆಗಿರುವ ಲೋಪಗಳನ್ನು ತುರ್ತಾಗಿ ಸರಿಪಡಿಸುವುದು ಅಗತ್ಯವೇ ಹೊರತು, ಕಾನೂನು ಹೋರಾಟದ ಮೂಲಕ ಸಮಸ್ಯೆಯನ್ನು ದೀರ್ಘಕಾಲ ಮುಂದುವರಿಸುವುದು, ಇನ್ನಷ್ಟು ಸಂಕೀರ್ಣಗೊಳಿಸುವುದು ಸರಿಯಲ್ಲ. ಪಾರದರ್ಶಕ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ಅಪೇಕ್ಷಿಸುವುದು ನಾಗರಿಕರ ಹಕ್ಕು. ದುರ್ಬಲ ಸಂಸ್ಥೆಗಳು ದೇಶದ ಪ್ರಜಾಪ್ರಭುತ್ವ ಸೌಧವನ್ನು ಶಿಥಿಲಗೊಳಿಸುತ್ತವೆ.

ದೇಶದ ಚಿಂತನೆ!



ಕವಿಗಳು ತಮ್ಮ ಕಾವ್ಯರಚನೆಯಲ್ಲಿ, ಪ್ರಕಾಶಕರು ಪುಸ್ತಕಗಳ ಪ್ರಕಟಣೆಯಲ್ಲಿ, ಬುದ್ಧಿಜೀವಿಗಳು ಎಡ-ಬಲ ಸಿದ್ಧಾಂತಗಳ ಸಮರ್ಥನೆಯಲ್ಲಿ ಮುಳುಗಿಹೋಗಿದ್ದಾರೆ. ಜನಸಾಮಾನ್ಯರು ಹೊಟ್ಟೆಪಾಡಿನ ದಂದುಗದಲ್ಲಿ ತೊಡಗಿ, ದೇಶದ ಬಗ್ಗೆ ಯೋಚಿಸುವುದನ್ನು ರಾಜಕಾರಣಿಗಳಿಗೆ ಬಿಟ್ಟಿದ್ದಾರೆ.

ಉದಯಕುಮಾರ್ ಹಬ್ಬು, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಗ್ಯಾರಂಟಿಗಳು ಮಾತ್ರವೇ ರಾಜ್ಯ ಸರ್ಕಾರದ ಆಡಳಿತವಾಗಿದೆಯೇ ಹೊರತು, ಅಭಿವೃದ್ಧಿಯಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದುರಾಡಳಿತದ ಪರಮಾವಧಿಯಿಂದಲೇ ಪ್ರಸ್ತುತ ರೈತರು ಬೀದಿಗೆ ಬರುವ ಸ್ಥಿತಿ ನಿರ್ಮಾಣವಾಗಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಆಹಾರ ಸಚಿವ

25 ವರ್ಷಗಳ ಹಿಂದೆ

ಬುಧವಾರ, 8-11-2000

• ಕೈದಿಗಳ ಬಿಡುಗಡೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ನ. 7– ವೀರಪ್ಪನ್ ಸಹಚರರೆನ್ನಲಾದ 51 ಕೈದಿಗಳ ಮೇಲಿನ ಟಾಡಾ ಆರೋಪ ಮತ್ತು ಪ್ರತ್ಯೇಕವಾದಿ ಸಂಘಟನೆಗೆ ಸೇರಿದವರೆನ್ನಲಾದ ಐವರು ಉಗ್ರಗಾಮಿಗಳ ಮೇಲಿನ ಟಾಡಾ ಮತ್ತು ರಾಷ್ಟ್ರೀಯ ಭದ್ರತಾ ಕಾಯ್ದೆಯ ಆರೋಪಗಳನ್ನು ಕೈಬಿಟ್ಟಿರುವ ಮೈಸೂರು ಮತ್ತು ತಮಿಳುನಾಡು ವಿಶೇಷ ನ್ಯಾಯಾಲಯಗಳ ಆದೇಶಗಳನ್ನು ಇಂದು ರದ್ದುಗೊಳಿಸಿದ ಸುಪ್ರೀಂ ಕೋರ್ಟ್, ಎರಡೂ ಸರ್ಕಾರಗಳನ್ನು ತೀವ್ರವಾಗಿ ವಾಗ್ದಂಡನೆಗೀಡು ಮಾಡಿದೆ.

ಅಪರಾಧ ದಂಡ ಸಂಹಿತೆಯ 321ನೇ ಸೆಕ್ಷನ್ ಪ್ರಕಾರ, ಟಾಡಾ ಆರೋಪಗಳನ್ನು ಹಿಂದಕ್ಕೆ ಪಡೆಯುವಾಗ ಎರಡೂ ಸರ್ಕಾರಗಳು ಭಯಭೀತಿಯಿಂದ ವರ್ತಿಸಿವೆಯೇ ಹೊರತು ಕಾನೂನನ್ನು ಪಾಲಿಸಿಲ್ಲ. ಟಾಡಾ ಆರೋಪ ವಾಪಸು ಪಡೆಯಲು ಮೈಸೂರು ವಿಶೇಷ ನ್ಯಾಯಾಲಯದ ಮುಂದೆ ಸರ್ಕಾರ ಸಲ್ಲಿಸಿರುವ ಅರ್ಜಿಯನ್ನು ನೋಡಿದರೆ, ಅದು ಆರೋಪಿಗಳ ಜತೆ ಮಾಡಿಕೊಂಡ ‘ಒಪ್ಪಂದದ ಕಂತೆ’ಯಂತೆ ಕಾಣುತ್ತದೆ ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

75 ವರ್ಷಗಳ ಹಿಂದೆ

ಬುಧವಾರ, 8-11-1950

• ‘ನೀತಿಭ್ರಷ್ಟ ಸ್ಪರ್ಧಿಗಳಿಗೆ’ ವಿರುದ್ಧ ಪ್ರತಿಸ್ಪರ್ಧಿಗಳು

ಲೂದಿಯಾನ, ನ. 7– ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನೀತಿನಿಷ್ಠೆಯಿಲ್ಲದವರಿಗೆ ಬೆಂಬಲ ಕೊಡುವುದಾದರೆ, ಆ ಹುರಿಯಾಳುಗಳಿಗೆ ವಿರುದ್ಧ ಪ್ರತಿ ಹುರಿಯಾಳುಗಳನ್ನು ನಿಲ್ಲಿಸಲು ನಾವು ಹಿಂಜರಿಯುವುದಿಲ್ಲ’ ಎಂಬುದಾಗಿ ಆಚಾರ್ಯ ಜೆ.ಬಿ. ಕೃಪಲಾನಿ ಅವರು, ಲೂದಿಯಾನದಲ್ಲಿ ಕಾಂಗ್ರೆಸ್ ಕೆಲಸಗಾರರನ್ನು ಉದ್ದೇಶಿಸಿ ಮಾತನಾಡುತ್ತಾ ಈ ವಿಷಯ ತಿಳಿಸಿದರು.

ಮುಂಬರುವ ಚುನಾವಣೆಯಲ್ಲಿ ಏನೂ ಅನ್ಯಾಯಗಳಾಗದ ಪ್ರಜಾಪ್ರಭುತ್ವ ತತ್ತ್ವದ ರೀತಿಯಲ್ಲಿ ನಿಷ್ಪಕ್ಷ ಚುನಾವಣೆಗಳಾಗಲೆಂದೇ ಕಾಂಗ್ರೆಸ್ಸಿನಲ್ಲಿ ತಾವು ಒಂದು ಪಕ್ಷ ರಚಿಸಿರುವುದು ಎಂಬುದಾಗಿ ವಿವರಿಸಿದರು.

ಪ್ರಶಸ್ತಿ, ಪ್ರಭುತ್ವ ಮತ್ತು ಪ್ರತಿಕ್ರಿಯೆ



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಪ್ರಶಸ್ತಿಯೊಂದು ಪ್ರಕಟವಾದ ಸಂದರ್ಭದಲ್ಲಿ ಅಭಿನಂದನೆಗಳ ಜೊತೆಗೆ ಟೀಕೆಗಳೂ ವ್ಯಕ್ತವಾಗುತ್ತವೆ. ಪ್ರಶಸ್ತಿಗಳ ಮಾನದಂಡಗಳೇ ಅವುಗಳ ‘ಮಾನ’ ಹೆಚ್ಚಿಸಲೂ ಕುಗ್ಗಿಸಲೂ ಕಾರಣವಾಗುತ್ತಿವೆ. ಪ್ರಶಸ್ತಿ ಪ್ರಕ್ರಿಯೆ ಬಗ್ಗೆ ರಚನಾತ್ಮಕ ಚಿಂತನೆ ನಡೆಸಲು ಇದು ಸಕಾಲ.

ಯಾವುದೇ ಪ್ರಶಸ್ತಿ ಪ್ರಕಟವಾದ ಕೂಡಲೇ ಅಭಿನಂದನೆಗಳ ಜೊತೆ ಜೊತೆಗೇ ಆಕ್ಷೇಪಗಳು ಹಿಂಬಾಲಿಸುವುದು ಇತ್ತೀಚೆಗೆ ವಾಡಿಕೆಯಾಗಿಬಿಟ್ಟಿದೆ. ಇಂಥ ಸಂದರ್ಭದ ಟೀಕೆ-ಟಿಪ್ಪಣಿಗಳ ಹಿಂದೆ ಪ್ರಶಸ್ತಿ ದೊರಕದವರ ದುಃಖ ಮತ್ತು ಅಸಮಾಧಾನದ ಪಾತ್ರವನ್ನು ಪೂರ್ತಿಯಾಗಿ ಅಲ್ಲಗಳೆಯಲಾಗದು. ಆದಾಗ್ಯೂ ಪ್ರಶಸ್ತಿಗಳನ್ನು ಕೊಡುವವರು ಮತ್ತು ಪಡೆಯುವವರು ಪ್ರಶ್ನಾತೀತರೂ, ವಿಮರ್ಶಾತೀತರೂ ಆಗಬೇಕಿಲ್ಲ ಎಂಬ ಹಿನ್ನೆಲೆಯಲ್ಲಿ ಇಂತಹ ಟೀಕೆಗಳನ್ನು ಪರಾಂಬರಿಸುವ ಅಗತ್ಯವಿದೆ. ಈ ವಿಷಯ ಕುರಿತ ಚರ್ಚೆ ಎಂದಿಗೂ ಮುಗಿಯದ ಕಥೆ ಎಂಬ ಸ್ಪಷ್ಟ ಅರಿವಿಟ್ಟುಕೊಂಡೇ, ಕಾಲಾನುಸಾರ ಚಿಂತನೆಯ ಕಿಡಿ ಹೊತ್ತಿಸುವ ಮೂಲಕ ಸಂಬಂಧಿಸಿದ ವ್ಯವಸ್ಥೆ ಮತ್ತು ವ್ಯಕ್ತಿಗಳಲ್ಲಿ ಒಂದಿಷ್ಟಾದರೂ ಎಚ್ಚರಿಕೆ ಹುಟ್ಟಿಸುವ ಪ್ರಯತ್ನಗಳು ನಿರಂತರವಾಗಿ ನಡೆಯಬೇಕಿದೆ.

ಚಂದ್ರಶೇಖರ ಪಾಟೀಲರು ತಮ್ಮದೇ ಆದ ವ್ಯಂಗ್ಯಶೈಲಿಯಲ್ಲಿ ಹೇಳಿದಂತೆ ‘ಪ್ರಶಸ್ತಿ ಪಡೆದುಕೊಳ್ಳುವ ಮತ್ತು ಹೊಡೆದುಕೊಳ್ಳುವ’ ಎರಡೂ ಬಗೆಯ ಜನರು ಎಲ್ಲಾ ಕಾಲದಲ್ಲೂ ಇರುವವರೇ. ಆದರೆ, ಪ್ರಶಸ್ತಿ-ಪುರಸ್ಕಾರಗಳ ಹಪಹಪಿ ಮತ್ತು ಪ್ರಚಾರದ ವ್ಯಸನಕ್ಕೆ ಬಲಿಯಾದವರ ಸಂಖ್ಯೆ ಇತ್ತೀಚೆಗಿನ ದಿನಮಾನಗಳಲ್ಲಿ ಯಾವ ಲೆಕ್ಕಾಚಾರಕ್ಕೂ ಸಿಗದಷ್ಟು ಅಗಾಧವಾಗಿ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ.

ಕಳೆದ ವರ್ಷ ರಾಜ್ಯೋತ್ಸವ ಪ್ರಶಸ್ತಿಗೆ ಆರೇಳು ಸಾವಿರ ಆಕಾಂಕ್ಷಿಗಳ ಅರ್ಜಿ, ಮೂವತ್ತು ಸಾವಿರ ಆನ್‌ಲೈನ್ ಶಿಫಾರಸುಗಳು ಇಲಾಖೆಯನ್ನು ತಲುಪಿದ್ದು ದಾಖಲೆಯೇ ಸರಿ. ಜೊತೆಗೆ, ಆಕಾಂಕ್ಷಿಗಳ ಅರ್ಜಿಗಳೊಂದಿಗೆ ಸಚಿವರು, ಶಾಸಕರು, ಅಧಿಕಾರಿಗಳು ಮತ್ತು ಮಠಾಧೀಶರ ಶಿಫಾರಸು ಪತ್ರಗಳ ಸುರಿಮಳೆ. ಸಾಧಕರ ಅರ್ಜಿಗಳ ಪ್ರವಾಹ ಯಾವ ರೀತಿಯಲ್ಲಿ ಹರಿದುಬಂದಿತ್ತೆಂದರೆ, ರೋಸಿಹೋದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ತಾವು ಹೋದಲ್ಲೆಲ್ಲ ಸಂಗ್ರಹವಾಗುವ ಅರ್ಜಿಗಳನ್ನು ಹೊತ್ತುತರಲು ಒಂದು ಪ್ರತ್ಯೇಕ ವಾಹನವನ್ನೇ ವ್ಯವಸ್ಥೆ ಮಾಡಿದ್ದರಂತೆ. ಬಹುಶಃ, ಈ ಅನುಭವದ ಹಿನ್ನೆಲೆಯಲ್ಲಿ ಈ ಬಾರಿ ಅರ್ಜಿ ಕರೆಯುವ ಪರಿಪಾಠವನ್ನೇ ನಿಲ್ಲಿಸಿ, ಸಮಿತಿಯ ಮೂಲಕವೇ ಸಾಧಕರನ್ನು ಗುರುತಿಸುವ ವಿಧಾನ ಆರಂಭಿಸಿದ್ದು ಆರೋಗ್ಯಕರ ಮಾರ್ಗ. ಸಚಿವ ಶಿವರಾಜ ತಂಗಡಗಿ ನೇತೃತ್ವದಲ್ಲಿ ರಚನೆಯಾದ 64 ಸದಸ್ಯರ ಆಯ್ಕೆ ಸಮಿತಿಯು, 2025ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರಕ್ಕೆ ಸಾಧಕರನ್ನು ಆಯ್ಕೆ ಮಾಡಿದೆ.

ಇಷ್ಟಾಗಿಯೂ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗಳು ವಿವಾದಕ್ಕೆ, ಅಪಸ್ವರಗಳಿಗೆ ಅತೀತವಾಗಲಿಲ್ಲ. ಇದಕ್ಕೆ ಸಾಧಕರ ಆಯ್ಕೆಗೆ ಅಳವಡಿಸಿಕೊಂಡ ಮಾನದಂಡಗಳ ಅಸ್ಪಷ್ಟತೆ, ಕ್ಲಿಷ್ಟತೆ ಜೊತೆಗೆ ಸಲಹಾ ಸಮಿತಿಯ ಆಯ್ಕೆಯ ಪ್ರಾಥಮಿಕ ಹಂತದಲ್ಲಿನ ಎಡವಟ್ಟುಗಳೂ ತಕ್ಕಮಟ್ಟಿಗೆ ಕಾರಣವಾಗಿವೆ. ಸಲಹಾ ಸಮಿತಿಯ ಸದಸ್ಯರ ಪಟ್ಟಿಯನ್ನು ಬಹಿರಂಗವಾಗಿ ಪ್ರಕಟಿಸುವ ಮೂಲಕ ಪಾರದರ್ಶಕತೆಯ ಪ್ರದರ್ಶನದ ಜೊತೆಗೆ ಲಾಬಿಕೋರರಿಗೆ ನೆರವು ನೀಡಿದಂತಾಗಿದ್ದು ವಿಪರ್ಯಾಸಕರ. ಮೊದಲ ಹಂತದಲ್ಲಿ ಸಲಹಾ ಸಮಿತಿಯ ಸದಸ್ಯರಿಗೇ ಅಭಿನಂದನೆ ಸಲ್ಲಿಸುವ, ಸನ್ಮಾನಿಸುವ ಚಟುವಟಿಕೆಗಳು ಆರಂಭವಾದವು. ಅನೇಕ ಸದಸ್ಯರು ತಮ್ಮನ್ನು ಆಯ್ಕೆ ಮಾಡಿದ ಸರ್ಕಾರಕ್ಕೆ ಕೃತಜ್ಞತೆ ಅರ್ಪಿಸುವಲ್ಲಿ ನಿರತರಾದರು.

ಪ್ರತೀ ವರ್ಷ ಸಾಧಕರ ಆಯ್ಕೆಗೆ ಅನುಸರಿಸಲು ನಿಗದಿ ಮಾಡಿಕೊಂಡಿರುವ ಪ್ರಮುಖ ಅಳತೆಗೋಲುಗಳಲ್ಲಿ ಪ್ರಾದೇಶಿಕ ಪ್ರಾತಿನಿಧ್ಯ, ಮಹಿಳಾ ಪ್ರಾತಿನಿಧ್ಯ ಹಾಗೂ ಸಾಮಾಜಿಕ ನ್ಯಾಯ ಪ್ರಮುಖವಾದವುಗಳು. ಆದರೆ, ಒಟ್ಟು ಎಪ್ಪತ್ತು ಪುರಸ್ಕೃತರ ಪಟ್ಟಿಯಲ್ಲಿ ಕೇವಲ 12 ಮಹಿಳೆಯರು ಅವಕಾಶ ಪಡೆದಿರುವುದು, ಪ್ರದೇಶವಾರು ಸಮತೋಲನದಲ್ಲಿ ಸಾಕಷ್ಟು ಹೊಯ್ದಾಟ ಕಾಣಿಸಿರುವುದು ಗಮನಾರ್ಹ ಕೊರತೆಗಳಾಗಿವೆ. ನಿರ್ದಿಷ್ಟವಾಗಿ ಪತ್ರಕರ್ತರ ಕೋಟಾ ಪರಿಶೀಲಿಸಿದರೆ, ಆಯ್ಕೆಯಾದ ಎಲ್ಲರೂ ದಕ್ಷಿಣ ಕರ್ನಾಟಕಕ್ಕೆ ಸೇರಿರುವುದು ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದ ಸಾಧಕರಲ್ಲಿ ಸಹಜವಾಗಿ ಪರಕೀಯ ಭಾವನೆಗೆ ಕಾರಣವಾಗಿದೆ. ಸರಿದೂಗಿಸುವಿಕೆಯ ಕಸರತ್ತು ಸುಲಭಸಾಧ್ಯವಲ್ಲ ಎಂಬ ಅರಿವಿನೊಂದಿಗೇ ಈ ಲೋಪವನ್ನು ಗ್ರಹಿಸುವುದು ಅನಿವಾರ್ಯ.

ಪುರಸ್ಕಾರಕ್ಕೆ ಭಾಜನರಾದ ಮತ್ತು ವಂಚಿತರಾದ ವ್ಯಕ್ತಿಗಳನ್ನು ಪ್ರತ್ಯೇಕ ಘಟಕಗಳಾಗಿ ಅವಲೋಕಿಸಿದಾಗ ಅಭಿವ್ಯಕ್ತಿ ಪಡೆಯುವ ಕಥೆಗಳಲ್ಲಿ ಸ್ವಾರಸ್ಯ, ದುರಂತ, ಯೋಗ್ಯತೆ, ದೈನ್ಯತೆ, ನಿರ್ಲಜ್ಜೆ, ಅಸಹಾಯಕತೆ ಹಾಗೂ ಅಮಾಯಕತೆಗಳನ್ನು ಸ್ಪಷ್ಟವಾಗಿ ಓದಬಹುದು. ಇನ್ನು ವಿವಿಧ ವಲಯಗಳ ಪ್ರಸಿದ್ಧರು ತಮ್ಮ ಒಲವಿನ/ಜಾತಿಯ ಸಾಧಕರ ಸಾಧನೆಯ ಯಾದಿ ಹಿಡಿದು ರಾಜ್ಯೋತ್ಸವ ಪ್ರಶಸ್ತಿಗಾಗಿ ಮಾಡುವ ಕಸರತ್ತಿಗೆ, ಸಿದ್ಧತೆಗೆ ಮಿತಿಯೇ ಇಲ್ಲ. ಅಷ್ಟೇಕೆ, ಈ ವಿಷಯದಲ್ಲಿ ತಮ್ಮ ನಿಲುವಿನ ಪ್ರತಿಭೆಗೆ ಪುರಸ್ಕಾರದ ಕಿರೀಟ ತೊಡಿಸಲು ವಿವಿಧ ಬಣ-ಪಂಥಗಳ ಪಡೆ ಹಿಂದೆ ಬೀಳುವುದಿಲ್ಲ. ಒಟ್ಟಾರೆ, ಪ್ರಶಸ್ತಿ ಪಡೆಯುವ ಅರ್ಹರಿಗಿಂತ ಹೊಡೆಯುವವರ, ಕೊಡಿಸುವವರ, ಲಾಬಿಕೋರರ ಸಂಖ್ಯೆಯೇ ಜಾಸ್ತಿ. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರಕ್ಕೆ ನಿಯಮವೇನು ಎಂಬ ಪ್ರಶ್ನೆಗೆ ಸಾಹಿತ್ಯಾಸಕ್ತ ಹಿರಿಯರೊಬ್ಬರು ಹೇಳುವಂತೆ, ‘60 ವರ್ಷ ವಯಸ್ಸಾಗಿರಬೇಕು ಮತ್ತು ಅವರ ಹೆಸರನ್ನು ಮುಖ್ಯಮಂತ್ರಿ ಕಚೇರಿ ತಿರಸ್ಕರಿಸಬಾರದು’. ಪ್ರಶಸ್ತಿ ವಲಯದ ಆಗುಹೋಗುಗಳನ್ನು ಹತ್ತಿರದಿಂದ ಬಲ್ಲ ಎಲ್ಲರಿಗೂ ಈ ಮಾತಿನಲ್ಲಿರುವ ವ್ಯಂಗ್ಯ ಮತ್ತು ವಾಸ್ತವದ ಅರಿವಿರುತ್ತದೆ.

ಇವೆಲ್ಲ ಮೇಲ್ಪದರದ ವಿಷಯಗಳಿಗೆ ಹೊರತಾಗಿ ಪ್ರಭುತ್ವ ಮತ್ತು ಪ್ರಶಸ್ತಿಗಳ ನಡುವಿನ ಸಂಬಂಧ, ಸಂಘರ್ಷಗಳನ್ನು ಕುರಿತ ಅನೇಕ ಪ್ರತಿಕ್ರಿಯೆಗಳು ವಿಶೇಷ ಗಮನಕ್ಕೆ ಅರ್ಹವಾಗಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ದಿಡ್ಡಳ್ಳಿ ಜನರ ಸಮಸ್ಯೆ ಬಗೆಹರಿಸದ, ರೈತ ವಿರೋಧಿ ಮಸೂದೆಗಳನ್ನು ಹಿಂದೆಗೆದುಕೊಳ್ಳದ, ದೇವನಹಳ್ಳಿಯ ರೈತರ ಬೇಡಿಕೆಯ ಬಗ್ಗೆ ಸ್ಪಷ್ಟ ನಿಲುವು ತಾಳದ, ನಕ್ಸಲ್ ಹೋರಾಟಗಾರರ ಹಕ್ಕೊತ್ತಾಯಗಳನ್ನು ಪರಿಹರಿಸದ, ಕಾರ್ಪೊರೇಟ್ ಸಂಸ್ಥೆಗಳ ಹಿತಕ್ಕಾಗಿ ಜನಸಮೂಹಗಳ ಒಕ್ಕಲೆಬ್ಬಿಸುವಿಕೆ ನಿಲ್ಲಿಸದ, ಗಣಿಗಾರಿಕೆಗಾಗಿ ಭೂಮಿ-ಅರಣ್ಯ ಪರಭಾರೆ ತಡೆಯದ, ಧರ್ಮಸ್ಥಳ ಪ್ರಕರಣದಲ್ಲಿ ವಿಶ್ವಾಸಾರ್ಹತೆ ಉಳಿಸಿಕೊಳ್ಳದ, ಸರ್ಕಾರಿ ಶಾಲೆಗಳನ್ನು ಉಳಿಸದ, ಜನಪರ ಹೋರಾಟಗಳನ್ನು ಸ್ವಾತಂತ್ರ್ಯ ಉದ್ಯಾನಕ್ಕೆ ಸೀಮಿತ ಮಾಡಿದ ಸರ್ಕಾರಗಳು ಕೊಡುವ ಪ್ರಶಸ್ತಿಗಳು ಏನನ್ನು ಪ್ರತಿನಿಧಿಸುತ್ತವೆ ಎಂಬ ಸೂಕ್ತ ಪ್ರಶ್ನೆಯನ್ನು ಎತ್ತಿದ್ದಾರೆ ಲೇಖಕ ಕೆ.ಎನ್. ನಂದಕುಮಾರ್. ಪ್ರಭುತ್ವ ಕೊಡಮಾಡುವ ಇಂತಹ ಪುರಸ್ಕಾರಗಳನ್ನು ಪಡೆದುಕೊಳ್ಳುವವರು ಯಾರನ್ನು /ಯಾವುದನ್ನು ಪ್ರತಿನಿಧಿಸುತ್ತಾರೆ, ಪ್ರಶಸ್ತಿ ಪಡೆದವರ ಕೃತಿಗಳಿಗೆ ಮಾತುಗಳಿಗೆ ಯಾವ ಮೌಲ್ಯ ಸೇರಿಕೊಳ್ಳುತ್ತದೆ ಎಂಬುದು ಅವರ ಪ್ರಶ್ನೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಟೀಕಿಸುವ ಕಾಂಗ್ರೆಸ್ ವಿರೋಧಿಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂಬ ಆರೋಪ ಕೂಡ ಕೆಲವು ವಲಯಗಳಿಂದ ಕೇಳಿಬಂದಿದೆ. ಅಂದರೆ, ನಿಜ ಅರ್ಥದಲ್ಲಿ ಪ್ರಗತಿಪರ ಗುಣವುಳ್ಳ ಇಂತಹ ಪ್ರಭುತ್ವದ ಟೀಕಾಕಾರರು ಪಕ್ಷ ರಾಜಕಾರಣದಲ್ಲಿ ಕಳೆದುಹೋದವರಿಗೆ ಸಹ್ಯವಾಗಿ ಕಾಣಿಸುತ್ತಿಲ್ಲ. ಪ್ರಶಸ್ತಿ ‘ವಿಜೇತರ’ ಪಟ್ಟಿಯಲ್ಲಿ ತಮ್ಮವರೊಬ್ಬರ ಹೆಸರು ನೋಡುತ್ತಲೇ ಅವರ ಫೋನಿಗೊಂದು ಮೆಸೇಜು ಹಾಕಿದ ಲೇಖಕರೊಬ್ಬರು, ‘ದಯವಿಟ್ಟು ಪ್ರಶಸ್ತಿಯನ್ನು ನಿರಾಕರಿಸುವ ಮಾತು ಆಡದಿರಿ’ ಎಂದು ಸದ್ಭಾವನೆ ವ್ಯಕ್ತಪಡಿಸುವ ಮೂಲಕ ತಮ್ಮ ಪ್ರಭುತ್ವವಾದಿ ನಿಲುವನ್ನು ತೋರ್ಪಡಿಸಿದ್ದಾರೆ.

ಮತ್ತೊಂದೆಡೆ ಪುರಸ್ಕಾರಕ್ಕೆ ಈಡಾದ ತಮ್ಮ ಪರಿಚಯದಅನೇಕರಅರ್ಹತೆಯನ್ನುಅನುಮೋದಿಸುತ್ತಲೇ ರಾಜ್ಯೋತ್ಸವ ಪ್ರಶಸ್ತಿ ‘ರಾಜಸತ್ತೆಯ ಕೆಟ್ಟ ಸಂಪ್ರದಾಯ’ದ ಮುಂದುವರಿಕೆ. ಇಂಥ ಪ್ರಶಸ್ತಿಗಾಗಿ ಆಸೆಪಡುವವರು ಸರ್ಕಾರವನ್ನು ಎಂದೂ ನೇರವಾಗಿ ಟೀಕಿಸಲಾರರು. ಅವರದೇನಿದ್ದರೂ ಚಿಂತನೆಯ ಮುಸುಕಿನೊಳಗಿರುವ ಗುಲಾಮಗಿರಿ ಎನ್ನುತ್ತಾರೆ ಜಿ.ಎನ್. ಅಶೋಕವರ್ಧನ್. ರಾಜ್ಯೋತ್ಸವ ಪ್ರಶಸ್ತಿಗಳು ಪ್ರಜಾಸತ್ತೆಗೆ ಅವಮಾನ ಎಂಬುದು ಅವರ ಖಚಿತ ನಿಲುವು.

ಇಸ್ಮತ್ ಪಜೀರ್ ಅವರದ್ದು ಇನ್ನೊಂದು ಆಯಾಮದ ಆಲೋಚನೆ. ಅವರು, ‘ವೈದ್ಯರಿಗೆ ವೈದ್ಯಕೀಯ ಸೇವೆಗಾಗಿ, ಉದ್ಯಮಿಗಳಿಗೆ ಉದ್ಯಮ ಕ್ಷೇತ್ರದ ಸಾಧನೆಗಾಗಿ, ಸಾಹಿತಿಗಳಿಗೆ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ, ಪತ್ರಕರ್ತನಿಗೆ ಮಾಧ್ಯಮ ಕ್ಷೇತ್ರದ ಸಾಧನೆಗಾಗಿ ಪ್ರಶಸ್ತಿ ನೀಡಬಹುದಾದರೆ– ಕೂಲಿ ಕಾರ್ಮಿಕರಿಗೆ, ಚಪ್ಪಲಿ ಹೊಲಿಯುವವರಿಗೆ, ಕಸ ಗುಡಿಸುವವರಿಗೆ, ತಲೆ ಹೊರೆ ವ್ಯಾಪಾರ ಮಾಡುವವರಿಗೆ, ಅವರವರ ವೃತ್ತಿ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಯಾಕೆ ಪ್ರಶಸ್ತಿ ಕೊಡಬಾರದು?’ ಎಂಬ ಪ್ರಶ್ನೆಯನ್ನು ಮುಂದಿರಿಸಿದ್ದಾರೆ. ಒಂದು ನಾಗರಿಕ ಸಮಾಜಕ್ಕೆ ವೈದ್ಯ, ಪತ್ರಕರ್ತ, ಸಾಹಿತಿ ಎಷ್ಟು ಅಗತ್ಯವೋ, ಕೂಲಿ, ಹಮಾಲಿ, ಚಮ್ಮಾರ, ಮುಂತಾದವರೂ ಅಷ್ಟೇ ಅಗತ್ಯ ಎಂಬುದು ಅವರ ತರ್ಕ.

ಜಾಗತಿಕ ಮನ್ನಣೆ ಗಳಿಸಿರುವ ನೊಬೆಲ್ ಪ್ರಶಸ್ತಿಯೂ ವಿವಾದಕ್ಕೆ ಹೊರತಾಗಿಲ್ಲ ಎಂಬುದು ಮತ್ತೊಂದು ಕಥೆ. ಅಸ್ತಿತ್ವವಾದಿ ಚಿಂತಕ, ಫ್ರೆಂಚ್ ನಾಟಕಕಾರ ಜೀನ್ ಪಾಲ್ ಸಾರ್ತ್ರೆಗೆ 1964ರಲ್ಲಿ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿ ಒಲಿದುಬಂದಿತ್ತು. ಅದನ್ನು ಸರಾಗವಾಗಿ ತಿರಸ್ಕರಿಸಿದ ಆತ ಅದಕ್ಕೆ ನೀಡಿದ ಸರಳ ಕಾರಣ: ‘ಈ ಬಗೆಯ ಪ್ರಶಸ್ತಿಗಳು ನನ್ನ ಬರಹಗಳ ಪರಿಣಾಮಗಳನ್ನು ಮಿತಗೊಳಿಸುತ್ತವೆ’. ಇಂತಹ ‘ತಿರಸ್ಕಾರದ ತಿಳಿವಳಿಕೆ’ಗೆ ತೆರೆದುಕೊಂಡಾಗ ನಮ್ಮ ‘ಪುರಸ್ಕಾರದ ಪುಳಕ’ ನಿಯಂತ್ರಣಕ್ಕೆ ಬಂದೀತು.





ಸುಭಾಷಿತ

ಆಕಾರವಿಲ್ಲದ ನಿರಾಕಾರ ಲಿಂಗವ ಕೈಯಲ್ಲಿ ಹಿಡಿದು ಕಟ್ಟಿದವೆಂಬರು ಅಜ್ಞಾನಿಜೀವಿಗಳು.

–ಅಕ್ಕಮಹಾದೇವಿ

ವಾಚಕರ ವಾಣಿ

ವನ್ಯಜೀವಿ ಸಂಘರ್ಷ: ಪರಿಹಾರ ಮರೀಚಿಕೆ

ರಾಜ್ಯದಲ್ಲಿ ಮಾನವ ಮತ್ತು ವನ್ಯಜೀವಿಗಳ ಸಂಘರ್ಷ ತಾರಕಕ್ಕೇರಿದೆ. ರೈತರು, ಕೃಷಿ ಕಾರ್ಮಿಕರು ಅಥವಾ ಕಾಡುಪ್ರಾಣಿಗಳ ಬಲಿಯೊಂದಿಗೆ ಈ ಸಂಘರ್ಷ ಕೊನೆಯಾಗುತ್ತಿದೆ. ಇತ್ತೀಚೆಗೆ ಶೃಂಗೇರಿ ತಾಲ್ಲೂಕಿನಲ್ಲಿ ಕಾಡಾನೆ ದಾಳಿಗೆ ಇಬ್ಬರು ಮೃತಪಟ್ಟಿದ್ದಾರೆ. ಇಂತಹ ಅನಾಹುತ ಸಂಭವಿಸಿದ ವೇಳೆ ಅರಣ್ಯ ಇಲಾಖೆಯು ಆನೆ ಸೆರೆಹಿಡಿದು ಸ್ಥಳಾಂತರಿಸುತ್ತದೆ. ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಿ ಕಣ್ಣೊರೆಸುವ ತಂತ್ರ ಅನುಸರಿಸುತ್ತದೆ. ಆದರೆ, ಆನೆಗಳ ಉಪಟಳಕ್ಕೆ ನೈಜ ಕಾರಣ ಹುಡುಕಿ ಪರಿಹಾರ ಸೂತ್ರ ರೂಪಿಸಲು ಮುಂದಾಗುವುದಿಲ್ಲ. ಇದರಿಂದ ಕಾಡಂಚಿನಲ್ಲಿ ಕೃಷಿಕರ ಸಂಖ್ಯೆ ಕಡಿಮೆಯಾಗಿದೆ. ವನ್ಯಜೀವಿಗಳ ಸಂಘರ್ಷ ಮುಂದುವರಿದರೆ ಕೃಷಿ ಮಾಡುವವರ ಸಂಖ್ಯೆ ಕ್ಷೀಣಿಸುವುದರಲ್ಲಿ ಅನುಮಾನವಿಲ್ಲ.

ಸಚಿನ್ ಹೊಳೆಹದ್ದು, ಶೃಂಗೇರಿ

ಕೂತು ತಿಂದರೆ ಕುಡಿಕೆ ಹಣವೂ ಸಾಲದು

ಕೆ.ಪಿ. ಕೃಷ್ಣನ್ ನೇತೃತ್ವದ ಸಂಪನ್ಮೂಲ ಕ್ರೋಡೀಕರಣ ಸಮಿತಿಯು ಸಾರ್ವಜನಿಕ ಆಸ್ತಿ ಮಾರಾಟ ಮಾಡಿ ತೆರಿಗೆಯೇತರ ಆದಾಯ ಹೆಚ್ಚಿಸುವ ಕುರಿತಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ. ಎಲ್ಲವನ್ನೂ ಮಾರಿದ ಮೇಲೆ ಏನು ಉಳಿಯುತ್ತದೆ? ಎಲ್ಲವೂ ಬಂಡವಾಳಶಾಹಿಗಳ ಕೈಗೆ ಹೋದ ಮೇಲೆ ಸರ್ಕಾರದ ಪ್ರತಿನಿಧಿಗಳ ಅವಶ್ಯಕತೆಯಾದರೂ ಇರುತ್ತದೆಯೆ? ನಮ್ಮದು ಅತಿಹೆಚ್ಚು ಜನಸಂಖ್ಯೆ ಹೊಂದಿರುವ ದೇಶ. ಸಂಪನ್ಮೂಲ ಹಂಚಿಕೆಯಾದರಷ್ಟೆ ಶಾಂತಿ. ಕೆಲವರ ಬಳಿಯಷ್ಟೆ ಹಣ ಸಂಚಯವಾದರೆ ಅದು ಸಂಘರ್ಷಕ್ಕೆ ಮೂಲವಾಗುತ್ತದಲ್ಲವೆ?

ಪ್ರಶಾಂತ್ ಕೆ.ಸಿ., ಚಾಮರಾಜನಗರ

ಅಂಚೆ ಕಚೇರಿಯಲ್ಲಿ ಸರ್ವರ್ ಸಮಸ್ಯೆ

ಅಂಚೆ ಕಚೇರಿಯಲ್ಲಿ ಕಳೆದ ಕೆಲವು ದಿನಗಳಿಂದ ಸರ್ವರ್ ಡೌನ್ ಸಮಸ್ಯೆ ಹೆಚ್ಚಿದೆ. ಇದರಿಂದ ಜ್ಞಾನ ಅಂಚೆ ಮೂಲಕ ಪುಸ್ತಕ ರವಾನೆ, ಪಾರ್ಸಲ್ ಸರ್ವಿಸ್, ಸ್ಪೀಡ್ ಪೋಸ್ಟ್ ಕಳುಹಿಸಲು ಪರದಾಡುವಂತಾಗಿದೆ. ಇತ್ತೀಚೆಗೆ ಅಂಚೆ ಕಚೇರಿಗಳಲ್ಲಿ ಹೊಸ ತಂತ್ರಾಂಶ ಅಳವಡಿಸಲಾಗಿದೆ. ಈ ಪ್ರಕ್ರಿಯೆ ಬಳಿಕ ತಾಂತ್ರಿಕ ಸಮಸ್ಯೆ ಹೆಚ್ಚುತ್ತಿದೆ. ಬೆಂಗಳೂರಿನ ಕೇಂದ್ರ ಅಂಚೆ ಕಚೇರಿಯಲ್ಲಿಯೇ ಗ್ರಾಹಕರು ಹೆಚ್ಚಿನ ಸಮಯ ಕಳೆಯಬೇಕಾಗಿ ಬಂದಿರುವುದು ವಿಪರ್ಯಾಸ. ಇಲಾಖೆಯ ಹಿರಿಯ ಅಧಿಕಾರಿಗಳು ತಾಂತ್ರಿಕ ಸಮಸ್ಯೆಯ ನಿವಾರಣೆಗೆ ಗಮನಹರಿಸಬೇಕಿದೆ.

ಅಶೋಕ ಚಿಕ್ಕಪರಪ್ಪಾ, ಬೆಂಗಳೂರು

ಮೌಲಿಕ ಸಿನಿಮಾ: ಪ್ರೇಕ್ಷಕರ ನಿರಾಸಕ್ತಿ

ಕನ್ನಡದಲ್ಲಿ ಅಲ್ಲೊಂದು ಇಲ್ಲೊಂದು ಸದಭಿರುಚಿಯ ಸಿನಿಮಾ ಬಂದರೂ ಯಾರ ಗಮನಕ್ಕೂ ಬಾರದೆ, ಕಣ್ಮರೆಯಾಗಿ ಹೋಗುವುದು ದುರಂತವೇ ಸರಿ. ಉದಾಹರಣೆಗೆ, ಇತ್ತೀಚೆಗೆ ತೆರೆಕಂಡ ‘ಏಳುಮಲೆ’ ಸಿನಿಮಾ. ಅಪರೂಪದ ವಸ್ತುನಿಷ್ಠ, ಮಾನವೀಯ ನೆಲೆಯಲ್ಲಿ ಎಲ್ಲೂ ಅಶ್ಲೀಲತೆಗೆ ಇಂಬು ಕೊಡದೆ ಎದೆ ಕಂಪಿಸುವಂತೆ ಸೃಜಿಸಲ್ಪಟ್ಟ ಚಿತ್ರ. ಆದರೂ, ಧಾರವಾಡದಂಥ ಜಿಲ್ಲಾ ಕೇಂದ್ರದ ಮಲ್ಟಿಪ್ಲೆಕ್ಸ್ ಪರದೆಯಲ್ಲಿ ದಿನಕ್ಕೊಂದೇ ಪ್ರದರ್ಶನದಂತೆ ನಾಲ್ಕೈದು ದಿನದಲ್ಲೇ ಕಣ್ಮರೆಯಾಯಿತು! ಇಂದಿನ ಪ್ರೇಕ್ಷಕರ ಅಭಿರುಚಿ ಬದಲಾಗಿದೆ. ಬರೀ ಭ್ರಮೆ, ಮೂಢನಂಬಿಕೆ, ಊಹಾತೀತ ಪೌರಾಣಿಕ ಕಟ್ಟು-ಕಥೆಗಳನ್ನೇ ಎದೆಗೊತ್ತಿಕೊಳ್ಳುತ್ತಿದ್ದಾರೆ. ಹೀಗಾಗಿ, ಬೇಸಿಗೆಯ ಮಳೆಯಂತೆ ಬರುವ, ಕೆಲವೇ ಒಳ್ಳೆಯ ಸಿನಿಮಾಗಳು ಹತ್ತರಲ್ಲಿ ಹನ್ನೊಂದಾಗಿ ಕಾಣದಂತಾಗುತ್ತವೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಬಹುಮಾನ

‘ಹೊಸ ಚಪ್ಪಲಿ ಅರ್ಪಿಸಿ
ದೇವಿಗೆ ಹರಕೆ’
ಹಳೆಯ ಚಪ್ಪಲಿಯಾದರೆ
ಅವಮಾನ;
ಹೊಸ ಚಪ್ಪಲಿಯಾದರೆ
‘ಬಹುಮಾನ’!
ಅಂತೂ ಚಪ್ಪಲಿ ಬಳಕೆ
ತಪ್ಪು, ತಪ್ಪಲಿ
ಎನ್ನುವಂತಿಲ್ಲ!

ಸಿಪಿಕೆ, ಮೈಸೂರು

‘ಜನತಂತ್ರದ ರಕ್ಷಕ’ನ ಅಮಾನವೀಯತೆ

ತಪ್ಪು ಮಾಡದಿದ್ದರೂ ಅಮೆರಿಕದ ಜೈಲಿನಲ್ಲಿ 43 ವರ್ಷ ಕಳೆದ ಭಾರತ ಮೂಲದ ಸುಬ್ರಹ್ಮಣ್ಯ ವೇದಂ ಅವರ ಕಥೆ ಓದಿ ವೇದನೆಯಾಯಿತು. ಪ್ರಜಾಪ್ರಭುತ್ವದ ಪರಿಪಾಲಕ ಎಂದು ಜಗತ್ತಿನ ದೊಡ್ಡಣ್ಣನಂತೆ ಬೀಗುವ ಅಮೆರಿಕ ಅದೆಷ್ಟು ತಾರತಮ್ಯ ಮನಃಸ್ಥಿತಿ ಹೊಂದಿದೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿ. ವೇದಂ ಅವರು, ಕಾನೂನು ಹೋರಾಟ ಮಾಡುತ್ತಲೇ ತುಂಬು ಯೌವನವನ್ನು ಸೆರೆಮನೆಯಲ್ಲಿ ಕಂಬಿಗಳ ಹಿಂದೆ ಕಳೆದಿದ್ದಾರೆ. ಇದು ಅಮೆರಿಕ ಎಸಗಿರುವ ವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಲ್ಲವೇ? ವಲಸಿಗರ ಕುರಿತು ಅಮಾನವೀಯವಾಗಿ ವರ್ತಿಸುತ್ತಿರುವ ಅಮೆರಿಕಕ್ಕೆ ಎಲ್ಲಾ ರಾಷ್ಟ್ರಗಳು ಒಗ್ಗೂಡಿ ಮೂಗುದಾರ ಹಾಕಬೇಕಿದೆ.

ಬಿ.ಆರ್. ಅಣ್ಣಾಸಾಗರ, ಸೇಡಂ

ರೈತರ ನೆರವಿಗೆ ಸರ್ಕಾರ ಸ್ಪಂದಿಸಲಿ

ಕಬ್ಬು ಬೆಳೆಗಾರರು ಸರ್ಕಾರಕ್ಕೆ ಮತ್ತೆರಡು ದಿನ ಗಡುವು ನೀಡಿರುವ ಸುದ್ದಿ ಓದಿ ಮನಸ್ಸಿಗೆ ನೋವಾಯಿತು. ಬೆಳಗಾವಿಯಲ್ಲಿ ರೈತರು ಹೋರಾಟ ಮಾಡುತ್ತಿರುವುದು ಸರಿಯಷ್ಟೇ. ಆದರೆ, ರೈತರ ಬೆಳೆಗೆ ವೈಜ್ಞಾನಿಕ ಬೆಲೆ ನೀಡಲು ಈವರೆಗಿನ ಎಲ್ಲ ಸರ್ಕಾರಗಳೂ ಹಿಂಜರಿದಿವೆ. ಚುನಾವಣೆಗೆ ಮುಂಚೆ ರೈತರ ಪರವಾಗಿ ನಾವಿದ್ದೇವೆ ಎಂದು ರಾಜಕಾರಣಿಗಳು ಘೋಷಿಸುತ್ತಾರೆ. ಗೆದ್ದ ನಂತರ ನೀಡಿದ್ದ ಭರವಸೆಗಳನ್ನು ಮರೆಯುತ್ತಾರೆ. ಎಲ್ಲರಿಗೂ ಆಹಾರ ಬೇಕು. ಹಾಗೆಯೇ ಆಹಾರ ಪದಾರ್ಥಗಳನ್ನು ಬೆಳೆಯುವ ರೈತನ ಕಾಳಜಿ ಎಲ್ಲರದ್ದಾಗಬೇಕಿದೆ. ಅನ್ನದಾತ ಉಳಿಯದಿದ್ದರೆ ನಮಗೆ ಅನ್ನ ಸಿಗುವುದಾದರೂ ಹೇಗೆ?

ಕುಂದೂರು ಮಂಜಪ್ಪ, ಹೊಳೆ ಸಿರಿಗೆರೆ

ಚುರುಮುರಿ



ವ್ಯಾಕ್… ಸುರಂಗ!

• ತುರುವೇಕೆರೆ ಪ್ರಸಾದ್

‘**ಚಾಪೆ** ಕೆಳಗೆ, ರಂಗೋಲಿ ಕೆಳಗೆ ತೂರೋದಿತ್ತು. ರಾಜಕೀಯದೋರು ಸುರಂಗದಲ್ಲಿ ತೂರ್‍ತಾವ್ರೆ’ ಎಂದ ಗುದ್ಲಿಂಗ.

‘ನೀನು ನಮ್ ಬೆಂಗ್ಳೂರು ವೊಸ ಸುರಂಗದ ಬಗ್ಗೆ ಯೋಳ್ತಿದೀಯ ಅನ್ನು! ಅಂಗೇ ತುರಂಗಕ್ಕೂ ಒಂದೊಂದು ಸುರಂಗ ಒಡುಸ್ಬುಟ್ರೆ ಈ ಸ್ಟಾರ್ ಕೈದಿಗಳು, ಅವಾಗವಾಗ ಓಗಿ ಬರೋ ರಾಜಕೀಯದೋರಿಗೂ ಶಾನೆ ಸಲೀಸಾಯ್ತದೆ’ ಎಂದ ಮಾಲಿಂಗ.

‘ಅನ್ಯಾಯವಾಗಿ ಲಾಲ್‌ಬಾಗ್ ಎಕ್ಕುಟ್ಟೋಯ್ತದೆ ಅಂತ ನಮ್ ಅಶೋಕಣ್ಣ ಶೋಕಿಸ್ತವ್ರೆ?’

‘ಅದಕ್ಯಾಕ್ಲಾ ಶೋಕ? ಕ್ಯಾಲಿಫೋರ್ನಿಯಾದ ಫ್ರೆಸ್ನೋ ಸಿಟೀಲಿ ಮಾಡ್ದಂಗೆ ಲಾಲ್‌ಬಾಗ್ನೂ ಒಳಕ್ ಸೇರಿಸಿ ಅಂಡರ್‌ಗ್ರೌಂಡ್ ಲವ್ ಗಾರ್ಡನ್ ಮಾಡುದ್ರಾಯ್ತು’ ಎಂದ ಪರ್ಮೇಶಿ.

‘ನಿನ್ ಸಿಎಂ ಮಾಡ್ಬುಟ್ರೆ ಏರ್‌ಪೋರ್ಟು, ಚಿನ್ನಸ್ವಾಮಿ ಸ್ಟೇಡಿಯಂನೂ ನೆಲದೊಳಗೆ ಹೂತ್ ಹಾಕ್ಬಿಡ್ತೀಯ’.

‘ಸುಮ್ಕೆ ವಿರೋಧ ಮಾಡ್ಬೇಕು ಅಂತ ಮಾತಾಡ್ಬಾರ್ದು ಕಣ್ಲಾ! ಸುರಂಗ ಮಾಡದ್ರಿಂದ ಮುಂದೆ ಕಮಲದೋರ್‍ಗೂ ಒಳ್ಳೇದೇ ಆಯ್ತದೆ’.

‘ಒಳ್ಳೇದು ಎಂಗ್ಲಾ ಆಯ್ತದೆ?’

‘ರಸ್ತೆ ಗುಂಡಿಯಂಗೆ ಸುರಂಗದಲ್ಲೂ ಗುಂಡಿ ಆಯ್ತದೆ. ಆ ಗುಂಡಿ ಉಪಗ್ರಹಕ್ಕೂ ಕಾಣಾಕಿಲ್ಲ ನೋಡು. ಆಮೇಲೆ, ಹಿಂದೆ ರಾಜ್ರು ಅಂತಃಪುರದಲ್ಲಿ ಇಂಗೇ ಸುರಂಗ ಇರ್ತಿದ್ವಂತೆ. ಶತ್ರುಗಳು ಹಠಾತ್ ಮುತ್ತಿಗೆ ಆಕ್ದಾಗ ರಾಜ್ರು ಸುರಂಗದಲ್ಲಿ ತಪ್ಪುಸ್ಕೊಂಡ್ ತಲೆ ಮರುಸ್ಕೊತಿದ್ರಂತೆ’.

‘ಈಗ ಅಂತದ್ದೇನ್ ಬಂದೈತೆ ಅಂತೀನಿ?’

‘ರಾಜಕೀಯದೋರ ಪಾಲಿಗೆ ಪೇಪರ್ನೋರೇ ದೊಡ್ಡ ವೈರಿಗಳು ಕಣ್ಲಾ! ಕಾರ್ ಹಿಂದೇ ಬಂದ್ ಬುಡ್ತಾರೆ. ಅದ್ಕೇ ವಿಧಾನಸೌಧದಿಂದಲೇ ಸುರಂಗ ಒಡುಸ್ಕೊಂಡ್ ಬುಟ್ರೆ ಸಲೀಸಾಗಿ ಪೇಪರ್ನೋರ್ ಕೈಗೆ ಸಿಗದಂಗೆ ವಂಟ್ ಓಯ್ತಿರ್ಬಹುದು’.

‘ಮತ್ತೆ ಅದು ವಿಐಪಿ ಕಾರಿಡಾರ್ ಆಯ್ತದೆ ಅಂತ ಆಶೋಕಣ್ಣ ಯೋಳ್ತಿಲ್ವಾ?’

‘ಅದೆಂಗ್ಲಾ ಆಯ್ತದೆ? ಮೇಲಿನ್ ಗುಂಡಿಗಳ ಕೆಸರು, ಒಳಚರಂಡಿ ಕೊಚ್ಚೆ ಎಲ್ಲಾ ಲೀಕಾಗಿ ಸುರಂಗದೊಳಗೆ ಸುರಿಯಾಕಿಲ್ವಾ?’

‘ಅಯ್ಯೊ ಅದು ವಾಕ್ ಥ್ರೂ ಆಗಲ್ಲ, ವ್ಯಾಕ್… ಥೂ…’ ಎಂದು ಎಲ್ಲರೂ ಮುಖ ಕಿವುಚಿ ನಕ್ಕರು!

ಸಂಗತ

ಲೋಕದ ಕವಿ–ದಾರ್ಶನಿಕ ಕನಕದಾಸರು

ಕನ್ನಡ ಸಾಂಸ್ಕೃತಿಕ ಲೋಕದ ಮಹೋನ್ನತ ವ್ಯಕ್ತಿತ್ವಗಳಲ್ಲಿ ಒಬ್ಬರಾದ ಕನಕದಾಸರು, ತಮ್ಮ ಕೃತಿಗಳ ಮೂಲಕ ಕಟ್ಟಿಕೊಟ್ಟ ‘ಬದುಕಿನ ವಿವೇಕ’ ಎಲ್ಲ ಕಾಲಕ್ಕೂ ಪ್ರಸ್ತುತ.

• ನಿಂಗಪ್ಪ ಮುದೇನೂರು

ಭಾರತದ ಭಕ್ತಿ ಸಾಹಿತ್ಯ ಪರಂಪರೆಯಲ್ಲಿ ಕನಕದಾಸರದು ಪ್ರಮುಖ ಸ್ಥಾನ. ಪುರಂದರ ದಾಸರಂತೆ ಕನಕದಾಸರೂ ಮಹಾಜ್ಞಾನಿಗಳು. ಅವರು ಬರೀ ಕವಿಯಷ್ಟೇ ಆಗಿರಲಿಲ್ಲ, ಸಮಾಜ ಸುಧಾರಕ, ದಾರ್ಶನಿಕ ಹಾಗೂ ಮಾನವತೆಯ ಸಾಕಾರವಾಗಿದ್ದರು. ಅವರ ಕೃತಿಗಳು ಭಕ್ತಿಯ ಪರಮೋನ್ನತ ಸ್ಥಿತಿಯನ್ನು ತೋರಿಸುವುದರ ಜೊತೆಗೆ, ಅದರ ಸಾಮಾಜಿಕ ಸಮಾನತೆ, ಮಾನವೀಯ ಮೌಲ್ಯಗಳು ಮತ್ತು ದೈವಭಕ್ತಿಯ ಸಾರ್ಥಕತೆಯ ಸಂದೇಶವನ್ನೂ ಸಾರಿನಿಂತಿವೆ.


ಕನಕದಾಸರ ಮೂಲ ಹೆಸರು ತಿಮ್ಮಪ್ಪ ನಾಯ್ಕ. ತಂದೆ ಬೀರಪ್ಪ; ತಾಯಿ ಬಚ್ಚಮ್ಮ. ಅವರ ಕಾಲದಲ್ಲಿ ಸಮಾಜ ವರ್ಣವ್ಯವಸ್ಥೆಯ ಕಟ್ಟಳೆಗಳಿಗೆ ಸಿಲುಕಿತ್ತು. ಆದರೆ, ಕನಕದಾಸರು ಆ ವ್ಯವಸ್ಥೆಯನ್ನು ತನ್ನ ಅಧ್ಯಾತ್ಮವಾದಿ ಬಂಡಾಯದಿಂದಲೇ ಎದುರಿಸಿದರು.

ಅವರ ಕೀರ್ತನೆಗಳಲ್ಲಿ ಸಾಮಾಜಿಕ ಮೇಲು-ಕೀಳು ಎಂಬ ತರತಮ ಭಾವನೆಗೆ ಸ್ಪಷ್ಟ ಉತ್ತರವಿದೆ. ಭಕ್ತಿಯ ಮೂಲಕವೇ ಸಮಾನತೆ, ಸಹೋದರತ್ವ, ದೈವಾನ್ವೇಷಣೆ ಮತ್ತು ದೈವದ ಜೊತೆ ಸಂವಾದದ ಮಾರ್ಗವನ್ನೂ ಅವರು ಬೋಧಿಸಿದರು.

ಕನಕದಾಸರ ಸಾಹಿತ್ಯದಲ್ಲಿ ದಾಸರ ಪದಗಳೆನ್ನುವ ಕೀರ್ತನೆಯ ರಚನೆಗಳು ಪ್ರಮುಖವಾಗಿವೆ. ಹಾಗೇ ಅವರ ಪ್ರಸಿದ್ಧ ಕೃತಿಗಳೆನಿಸಿದ ‘ರಾಮಧಾನ್ಯ ಚರಿತೆ’, ‘ಮೋಹನ ತರಂಗಿಣಿ’, ‘ಹರಿಭಕ್ತಿಸಾರ’, ‘ನಳಚರಿತೆ’, ‘ನೃಪ ವಿಜಯ’ ಹಾಗೇ ಮುಂಡಿಗೆಗಳು ಮುಖ್ಯವಾದವು. ಈ ಕೃತಿಗಳು ಭಕ್ತಿಯ ತತ್ತ್ವ, ಧರ್ಮದ ಸಾರ, ಹಾಗೂ ಮನುಷ್ಯನ ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತಿವೆ.

ಕನಕ ನಿವೇದನೆಯ ತತ್ತ್ವದ ಮೂಲ ಹರಿಭಕ್ತಿಯಲ್ಲಿದೆ. ಆದರೆ, ಆ ಭಕ್ತಿ ಕೇವಲ ಆಚರಣೆಗಷ್ಟೇ ಸೀಮಿತವಾಗಿರದೇ ಸಾಮಾಜಿಕ ಕ್ರಾಂತಿಯ ರೂಪವನ್ನೂ ಪಡೆದಿದೆ. ‘ಆತ್ಮ ಯಾವ ಕುಲ ಜೀವ ಯಾವ ಕುಲ ಪಂಚೇಂದ್ರಿಯಗಳ ಕುಲವ ಪೇಳಿರಯ್ಯಾ?’ ಎಂಬ ಪ್ರಶ್ನೆಯಲ್ಲಿ ಅವರ ಆತ್ಮ ಸಾಕ್ಷಾತ್ಕಾರದ ಪ್ರಾಮಾಣಿಕ ಅಭಿವ್ಯಕ್ತಿ ವ್ಯಕ್ತವಾಗಿದೆ. ಕನಕದಾಸರು ದೈವ ಸಾಧನೆಗೆ ಯಾವುದೇ ವರ್ಣ, ಕುಲ ಭೇದಗಳು ಅಡ್ಡಿಯಾಗಬಾರದೆಂದು ಸಾರಿದರು. ಹಾಗೆಯೇ ಹರಿಯನ್ನೂ ದಾಸತ್ವದ ಮೂಲಕವೇ ಪ್ರಶ್ನಿಸಿದರು. ಈ ಸಂಗತಿಯೇ ಅವರ ‘ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ?’ ಎಂಬ ಪ್ರಸಿದ್ಧ ಕೀರ್ತನೆಯಲ್ಲಿ ಅಂತರ್ಗತವಾಗಿದೆ. ಉಡುಪಿ ಶ್ರೀಕೃಷ್ಣ ದೇಗುಲದ ‘ಕನಕನ ಕಿಂಡಿ’ಯ ಕಥೆಯೇ ಇದಕ್ಕೆ ಸಾಕ್ಷಿ.

ಕನಕದಾಸರ ಕಾವ್ಯದ ದಾರ್ಶನಿಕತೆಯು ಭಕ್ತಿಯ ಬಾಹ್ಯಾಚರಣೆಗಿಂತ ಒಳಗಿನ ಶುದ್ಧತೆಯ ವಿಷಯದ ಮೇಲೆ ತನ್ನ ನಂಬಿಕೆಯನ್ನು ಕೇಂದ್ರೀಕರಿಸಿದೆ. ಅವರ ಕೃತಿಗಳಲ್ಲಿ ಅಜ್ಞಾನ, ಅಹಂಕಾರ, ಸ್ವಾರ್ಥ, ಅನ್ಯಾಯದ ವಿರುದ್ಧದ ಧ್ವನಿ ಹಾಗೂ ಸತ್ಯದ ಪರ ಇರುವ ವಿವೇಕದ ಬದ್ಧತೆ ಸ್ಪಷ್ಟವಾಗಿ ಕಾಣಿಸಿಕೊಂಡಿದೆ.



‘ಕಣ್ಣು ಕೆಟ್ಟ ಮೇಲೆ ಕಡುರೂಪ
ಚೆಲ್ವಿಕೆಯೆ
ಬಣ್ಣಗುಂದಿದ ಮೇಲೆ ಬಹುಮಾನವೆ
ಪುಣ್ಯತೀರದ ಮೇಲೆ ಪರಲೋಕ
ಸಾಧನವೆ
ಸುಣ್ಣವಿಲ್ಲದ ವೀಳ್ಯವದು
ಸ್ವಾದುಮಯವೆ
ಕಿಲುಬಿನಾ ಬಟ್ಟಲೊಳು ಹುಳಿ ಕಲಿಸಿ
ಉಣಬಹುದೆ
ಚಳಿಯುರಿಗೆ ಚಂದನದ ಲೇಪ ಹಿತವೆ
ಮೊಲೆ ಬಿದ್ದ ಹೆಣ್ಣಿನೊಳು ಮೋಹಕ್ಕೆ ಸೊಗಸಹುದೆ
ಬೆಲೆಬಿದ್ದ ಸರಕಿನೊಳಗೆ ಲಾಭವುಂಟೇ
ಪಥ್ಯ ಸೇರದ ಮೇಲೆ ನಿತ್ಯ ಸುಖವೆನಬಹುದೆ
ಸತ್ವ ತಗ್ಗಿದ ಮೇಲೆ ಸಾಮರ್ಥ್ಯವೆ
ಪೃಥ್ವಿಯೊಳು ಕಾಗಿನೆಲೆಯಾದಿಕೇಶವ
ಭಕ್ತಿಯಿಲ್ಲದ ನರಗೆ ಮುಕ್ತಿಯಹುದೆ’

ಭಕ್ತಿಯಿಲ್ಲದ ಮುಕ್ತಿಯೊಳಗೆ ಇಂಥ ವರ್ತಮಾನವನ್ನಿರಿಸಿ ಮಾನವನನ್ನು ತಾತ್ವಿಕವಾಗಿ ಪ್ರಶ್ನಿಸುತ್ತಾರೆ ಕನಕದಾಸರು.

ಇನ್ನು ಕನಕದಾಸರ ಕಾವ್ಯಭಾಷೆ ಸರಳವಾಗಿದ್ದು, ಜಾನಪದೀಯವಾಗಿದೆ. ಅದು ನೇರವಾಗಿ ಜನಮನವನ್ನು ತಲುಪುತ್ತದೆ. ಅವರ ಪದ್ಯಗಳಲ್ಲಿರುವ ಸಂಗೀತಮಯತೆ, ನಾದಮಾಧುರ್ಯ ಮತ್ತು ದಾರ್ಶನಿಕ ಸಮನ್ವಯತೆಯ ಗುಣ ಈ ಲೋಕವೇ ಮೆಚ್ಚುವಂತಹದ್ದು. ಈ ಶೈಲಿಯು ಅವರನ್ನು ನಿತ್ಯಕಾಲೀನ ಸಂತ ಕವಿಯಾಗಿ ಮನಕ್ಕೆ ಕಾಣಿಸಿದೆ.

ಅವರ ಚಿಂತನೆಗಳು ಇಂದಿಗೂ ಪ್ರಸ್ತುತ. ಸಾಮಾಜಿಕ ಸಮಾನತೆ, ಮಾನವ ಧರ್ಮನಿಷ್ಠೆ, ಬಹುತ್ವದ ದೈವೋಪಾಸನೆ ಮತ್ತು ನೈತಿಕ ಬದುಕಿನ ಕುರಿತು ಅವರ ಸಂದೇಶವು ಇಂದಿನ ಸಮಾಜಕ್ಕೂ ದಾರಿದೀಪ. ಕನಕದಾಸರ ಕಾವ್ಯ ಕೇವಲ ಭಕ್ತಿಯ ನುಡಿಯ ಉಪಾಸನೆಯಲ್ಲ; ಅದು ದಾರ್ಶನಿಕತೆ, ಮಾನವತೆಯ ಶಕ್ತಿ ಮತ್ತು ಆತ್ಮಜ್ಞಾನಗಳ ಜೀವನ ಪಾಠವಾಗಿದೆ.

ಕನಕದಾಸರ ದಾರ್ಶನಿಕ ಕವಿತ್ವದ ಮಾರ್ಗದರ್ಶನ ಸಮ ಸಮಾಜದ ಜನಪದ ಕಟ್ಟಡಕ್ಕೆ ಭದ್ರಬುನಾದಿಯನ್ನು ಒದಗಿಸುತ್ತಿರಲಿ. ನಾಳಿನ ಯುವಪೀಳಿಗೆ ಹಿಂದಣ ಹೆಜ್ಜೆಯನರಿತು ಮುನ್ನಡೆಯಲಿ. ಹಾಗೇ ಮಾನವನನ್ನು ಉದ್ಧರಿಸುವ ಶಕ್ತಿಯಾಗಿ ಲೋಕದ ಎಲ್ಲ ದರ್ಶನಗಳ ವಿವೇಕವೂ ಸಮರಸವಾಗಿ ಒಗ್ಗೂಡಬೇಕು ಮತ್ತು ಇದೇ ಬಾಳಿನ ತತ್ತ್ವವೂ ಆಗಬೇಕು. ಇದಾದರೆ ಕನಕದಾಸರ ಆಚರಣೆ ಸಾರ್ಥಕ.

ಭಕ್ತಿ ಮತ್ತು ಬಂಡಾಯದ ಬಹು ವಿಶಿಷ್ಟ ಸಮನ್ವಯದಂತೆ ಕಾಣಿಸುವ ಕನಕದಾಸರೊಂದಿಗಿನ ಅನುಸಂಧಾನದಲ್ಲಿ ವರ್ತಮಾನದ ಅನೇಕ ತಲ್ಲಣಗಳಿಗೆ ಉತ್ತರವಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಣಕಾಸು, ಮೂಲಸೌಕರ್ಯ ಕೊರತೆ ಸೊರಗಿದ ವಿ.ವಿ.ಗಳು

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಅಬ್ಬರ ಹೆಚ್ಚಾದಂತೆ, ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾಲಯಗಳು ಕಳೆಗುಂದುತ್ತಿವೆ. ಸರ್ಕಾರವು ಜಿಲ್ಲೆಗೊಂದು, ವಿಷಯಕ್ಕೊಂದು ವಿ.ವಿ.ಯನ್ನು ಸ್ಥಾಪಿಸುತ್ತಿದೆ. ಆದರೆ, ಅವುಗಳ ಸಮರ್ಪಕ ಕಾರ್ಯನಿರ್ವಹಣೆಗೆ ಅಗತ್ಯವಾದ ಕನಿಷ್ಠ ಮೂಲಸೌಕರ್ಯ, ಅನುದಾನ ಒದಗಿಸುತ್ತಿಲ್ಲ, ಬೋಧಕರ ನೇಮಕಾತಿ ಮಾಡುತ್ತಿಲ್ಲ ಎನ್ನುವ ಅಸಮಾಧಾನ ವ್ಯಾಪಕವಾಗಿದೆ. ಇದು ಕೋಟ್ಯಂತರ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ರಾಜ್ಯದಲ್ಲಿರುವ ಸರ್ಕಾರಿ ವಿ.ವಿ.ಗಳ ಸ್ಥಿತಿಗತಿಯ ವರದಿ ಇಲ್ಲಿದೆ

ಮೈಸೂರು ವಿ.ವಿ

ಬೆಂಗಳೂರು, ಶಿವಮೊಗ್ಗ, ಮಂಗಳೂರಿನವರೆಗೂ ಕಾರ್ಯವ್ಯಾಪ್ತಿ ಇದ್ದ, ಶತಮಾನ ದಾಟಿರುವ ಮೈಸೂರು ವಿಶ್ವವಿದ್ಯಾಲಯವೀಗ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಹಾಸನ, ಮಂಡ್ಯ, ಚಾಮರಾಜನಗರ ಜಿಲ್ಲೆಗಳು ಮೈಸೂರು ವಿಶ್ವವಿದ್ಯಾಲಯದಿಂದ ಬೇರ್ಪಟ್ಟಿವೆ.

ಸರ್ಕಾರದಿಂದ ಬರುತ್ತಿರುವ ಹಣ ಪಿಂಚಣಿಗೆ ಸಾಕಾಗುತ್ತಿಲ್ಲ. ಜಿಲ್ಲೆಗೊಂದು ವಿಶ್ವವಿದ್ಯಾಲಯವಾದ್ದರಿಂದ ಸಂಪನ್ಮೂಲದ ಹರಿವೂ ಕಡಿಮೆಯಾಗಿದೆ. ಖಾಲಿ ಇರುವ ಹುದ್ದೆಗಳ ನೇಮಕಾತಿಯು ದಶಕದಿಂದಲೂ ನನೆಗುದಿಗೆ ಬಿದ್ದಿದೆ. ವಿವಿಯಲ್ಲಿ 494 ಅತಿಥಿ ಸಹಾಯಕ ಪ್ರಾಧ್ಯಾಪಕರಿದ್ದಾರೆ.

ವಿಶ್ವವಿದ್ಯಾಲಯದ ಆಂತರಿಕ ಆದಾಯವು ₹295.59 ಕೋಟಿ ಆಗಿದ್ದರೆ, ವೆಚ್ಚ ₹403.31 ಕೋಟಿ ಆಗಿದೆ. 2025–26ನೇ ಸಾಲಿನ ಅಂದಾಜು ₹107.72 ಕೋಟಿ ಕೊರತೆ ಬಜೆಟ್ ಅನ್ನು ವಿಶ್ವವಿದ್ಯಾಲಯ ಅನುಮೋದಿಸಿದೆ. ತಿಂಗಳಿಗೆ ₹ 9 ಕೋಟಿ ಅನುದಾನ ಪಿಂಚಣಿಗೆ ಬೇಕಾಗುತ್ತಿದ್ದು, ₹ 4.5 ಕೋಟಿ ಕೊರತೆ ಆಗುತ್ತಿದೆ.

ಹುದ್ದೆ	ಮಂಜೂರು	ಭರ್ತಿ	ಖಾಲಿ
ಪ್ರಾಧ್ಯಾಪಕ	68	2	66
ಸಹಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ	503	169	334

ಕರ್ನಾಟಕ ರಾಜ್ಯ ಮುಕ್ತ ವಿ.ವಿ

- ಕೆಎಸ್‌ಒಯು ಕೋರ್ಸ್‌ಗಳಿಗೆ ನೀಡಲಾಗಿದ್ದ ಮಾನ್ಯತೆಯನ್ನು ಯುಜಿಸಿ 2013ನೇ ಸಾಲಿನಿಂದ ರದ್ದುಪಡಿಸಿತ್ತು. 2017ರ ಡಿಸೆಂಬರ್‌ನಲ್ಲಿ ತಾಂತ್ರಿಕೇತರ ಕೋರ್ಸ್‌ಗಳಿಗೆ ಮಾನ್ಯತೆ ನೀಡುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯುಜಿಸಿ) ಹೈಕೋರ್ಟ್ ನಿರ್ದೇಶಿಸಿತ್ತು.
- ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ 64 ಕೋರ್ಸ್‌ಗಳಿಗೆ ಪ್ರವೇಶಾತಿ ಆಗಿದೆ
- ರಾಜ್ಯದ ವಿವಿಧ ಭಾಗದಲ್ಲಿ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದೆ
- ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಅನುದಾನ ದೊರೆಯುತ್ತಿಲ್ಲ
- 50 ಪೂರ್ಣಾವಧಿ ಅಧ್ಯಾಪಕರು, 22 ಅತಿಥಿ ಉಪನ್ಯಾಸಕರಿದ್ದಾರೆ. ಬೋಧಕೇತರ ಸಿಬ್ಬಂದಿ 109
- ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ ಅಧ್ಯಯನ ಕೇಂದ್ರಗಳಲ್ಲಿ 700 ಶೈಕ್ಷಣಿಕ ಸಮಾಲೋಚಕರಿದ್ದಾರೆ

'ಇಲ್ಲ'ಗಳ ಕನ್ನಡ ವಿ.ವಿ

ವಿಜಯನಗರ ಜಿಲ್ಲೆಯ ಕಮಲಾಪುರ ಬಳಿ ಇರುವ ಹಂಪಿ ಕನ್ನಡ ವಿ.ವಿಯಲ್ಲಿ 700 ಮಂದಿ ವಿದ್ಯಾರ್ಥಿಗಳು ವಿವಿಧ ಸಂಶೋಧನೆ, ಪಿಎಚ್‌.ಡಿ, ಯುಜಿ, ಪಿಜಿ ಅಧ್ಯಯನಗಳಲ್ಲಿ ತೊಡಗಿದ್ದಾರೆ. 23 ಅತಿಥಿ ಉಪನ್ಯಾಸಕರಿದ್ದಾರೆ. ಕನ್ನಡ ವಿಷಯಕ್ಕೆ ಬೇಡಿಕೆ ಇದೆ. ಎಂಎ ಪಿಎಚ್‌.ಡಿಯಲ್ಲಿ ಇದ್ದ ಐದೂ ವಿಷಯಗಳಿಗೆ (ಕನ್ನಡ, ಸಮಾಜ ವಿಜ್ಞಾನ, ಮಹಿಳಾ ಅಧ್ಯಯನ, ಜಾನಪದ, ಇತಿಹಾಸ ಪುರಾತತ್ವ) ಬಹಳ ಬೇಡಿಕೆ ಇತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದಾಗಿ ನಾಲ್ಕು ವರ್ಷಗಳಿಂದ ರದ್ದುಗೊಂಡಿವೆ. ಎಂ.ಎ ಪಿಎಚ್‌.ಡಿ ಇಂಟಗ್ರೇಟೆಡ್ ಕೋರ್ಸ್‌ಗೂ ಬೇಡಿಕೆ ಇತ್ತು. ಅದನ್ನೂ ಸಕಾರಣ ಇಲ್ಲದೆ ರದ್ದುಪಡಿಸಲಾಗಿದೆ.

ಹುದ್ದೆ	ಅನುಮೋದಿತ	ಹಾಲಿ	ಖಾಲಿ
ಪ್ರಾಧ್ಯಾಪಕ	1	-	1
ಸಹ ಪ್ರಾಧ್ಯಾಪಕ	21	5	16
ಸಹಾಯಕ ಪ್ರಾಧ್ಯಾಪಕ	51	33	18

ವಿವಿಯಲ್ಲಿ ಬೋಧನೆ ಶೇ 30ರಷ್ಟು ಇದ್ದರೆ, ಸಂಶೋಧನೆ ಶೇ 70ರಷ್ಟು ಇರುತ್ತದೆ. ವಿ.ವಿಯಲ್ಲಿ ಹಿಂದಿನಂತೆ ಗುಣಮಟ್ಟದ ಸಂಶೋಧನೆ ಈಗ ನಡೆಯುತ್ತಿಲ್ಲ ಎಂಬುದು ವಿವಿ ಕುರಿತ ಬಹುದೊಡ್ಡ ದೂರು.

ಇಲ್ಲಿನ ಪ್ರಾಧ್ಯಾಪಕರೂ ವರ್ಷವಿಡೀ ಸಂಶೋಧನೆಗಳಲ್ಲಿ ತೊಡಗಿರಬೇಕು ಎಂಬ ನಿಯಮ ಇದೆ. ಆದರೆ ಹಾಲಿ ಇರುವ 38 ಪ್ರಾಧ್ಯಾಪಕರ ಪೈಕಿ ಅರ್ಧದಷ್ಟು ಮಂದಿ ವೈಯಕ್ತಿಕ ಮತ್ತು ಸಾಂಸ್ಕೃತಿಕ ಸಂಶೋಧನಾ ಯೋಜನೆಗಳನ್ನೇ ಮಾಡಿಲ್ಲ.

ವಿಶ್ವವಿದ್ಯಾಲಯಕ್ಕೆ ಕುಪ್ಪಳ್ಳಿ, ಕೂಡಲಸಂಗಮ, ದೇವದುರ್ಗ ಮತ್ತು ಚಾಮರಾಜನಗರಗಳಲ್ಲಿ ವಿಸ್ತರಣಾ ಕೇಂದ್ರಗಳಿವೆ. ಚಾಮರಾಜನಗರದ ಕೇಂದ್ರವನ್ನು ಮುಚ್ಚಲಾಗಿದೆ. ಇಲ್ಲಿ 12 ಅಧ್ಯಯನ ಪೀಠಗಳು, 13 ದತ್ತಿನಿಧಿಗಳು ಇವೆ. 4 ಸಂಶೋಧನಾ ಅಧ್ಯಯನ ಕೇಂದ್ರಗಳಿದ್ದು, ಬಹುತೇಕವು ನಿಷ್ಕ್ರಿಯವಾಗಿವೆ. ದೂರಶಿಕ್ಷಣ ಕೇಂದ್ರ ಮುಚ್ಚಿಹೋಗಿದೆ. ಪ್ರಾಧ್ಯಾಪಕರ ಕೊರತೆ ಕಾರಣಕ್ಕೆ ಭಾಷಾಂತರ, ನಾಟಕ, ಜನಪದ ವಿಭಾಗಗಳು ಬಹುತೇಕ ನಿಷ್ಕ್ರಿಯವಾಗಿವೆ. ಸಂಶೋಧನಾ ಸಹಾಯಕರ ಹುದ್ದೆಗೆ ನೇಮಕಾತಿಯೇ ಆಗುತ್ತಿಲ್ಲ.

ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ಸುಮಾರು 48 ಮಂದಿ ಹೊರಗುತ್ತಿಗೆ ನೌಕರರಿಗೆ ಒಂದು ವರ್ಷದ ವೇತನ ಬಾಕಿ ಇದೆ. ತಾತ್ಕಾಲಿಕ ಸಿಬ್ಬಂದಿಯ ಈ ಹಿಂದಿನ ಒಂದು ವರ್ಷದ ವೇತನ ಬಾಕಿ ಪಾವತಿಯಾಗಿಲ್ಲ.


ಹಂಪಿ ಕನ್ನಡ ವಿಶ್ವವಿದ್ಯಾಲಯ

ಬೆಂಗಳೂರು: ದೀಪದ ಕೆಳಗೇ ಕತ್ತಲು

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಮೂಲಸೌಕರ್ಯಗಳ ಕೊರತೆ ಇಲ್ಲ. ವಿದ್ಯಾರ್ಥಿಗಳ ಸಂಖ್ಯೆಯೂ ಅಧಿಕವಾಗಿದ್ದು, ಯಾವುದೇ ವಿಭಾಗವನ್ನು ಮುಚ್ಚಿಲ್ಲ. ಆದರೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆ ಇದೆ. ಬೆಂಗಳೂರು ವಿವಿಯಲ್ಲಿ 250 ಅತಿಥಿ ಉಪನ್ಯಾಸಕರಿದ್ದಾರೆ. ಬೆಂಗಳೂರು ನಗರ ವಿವಿಯಲ್ಲಿ 217 ಅತಿಥಿ ಉಪನ್ಯಾಸಕರಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ

ಹುದ್ದೆ	ಮಂಜೂರು	ಭರ್ತಿ	ಖಾಲಿ
ಪ್ರಾಧ್ಯಾಪಕ	51	06	45
ಸಹ ಪ್ರಾಧ್ಯಾಪಕ	102	18	84
ಸಹಾಯಕ ಪ್ರಾಧ್ಯಾಪಕ	212	96	116

ಬೆಂಗಳೂರು ನಗರ ವಿಶ್ವವಿದ್ಯಾಲಯ

ಹುದ್ದೆ	ಮಂಜೂರು	ಭರ್ತಿ	ಖಾಲಿ
ಪ್ರಾಧ್ಯಾಪಕ	23	0	23
ಸಹ ಪ್ರಾಧ್ಯಾಪಕ	46	1	45
ಸಹಾಯಕ ಪ್ರಾಧ್ಯಾಪಕ	92	9	83

ಬೆಂಗಳೂರು ಉತ್ತರ ವಿ.ವಿ

ಬೆಂಗಳೂರು ಉತ್ತರ ವಿ.ವಿಯಲ್ಲಿ ಕಾಯಂ ಬೋಧಕರ ಕೊರತೆ ಕಾಡುತ್ತಿದೆ. ಐದು ವರ್ಷಗಳ ಹಿಂದೆಯಷ್ಟೆ ಕೋಲಾರದಲ್ಲಿ ಆರಂಭವಾದ ವಿ.ವಿಯು, ಕೋಲಾರ, ಚಿಕ್ಕಬಳ್ಳಾಪುರ, ಹೊಸಕೋಟೆ, ಕೆ.ಆರ್.ಪುರಂ ವ್ಯಾಪ್ತಿ ಒಳಗೊಂಡಿದೆ. ಚಿಕ್ಕಬಳ್ಳಾಪುರದ ಅಮರಾವತಿಯಲ್ಲಿ ನೂತನ ಕ್ಯಾಂಪಸ್ ನಿರ್ಮಿಸಲಾಗುತ್ತಿದೆ.

ವಿ.ವಿ.ಯಲ್ಲಿ 66 ಅನುಮೋದಿತ ಹುದ್ದೆಗಳಿವೆ. ಇಬ್ಬರು ಕಾಯಂ ಸಹ ಪ್ರಾಧ್ಯಾಪಕರು, ಇಬ್ಬರು ಕಾಯಂ ಪ್ರಾಧ್ಯಾಪಕರು ಇದ್ದಾರೆ. ಸಹಾಯಕ ಪ್ರಾಧ್ಯಾಪಕರು ಇಲ್ಲ. 62 ಹುದ್ದೆಗಳು ಖಾಲಿ ಇವೆ. 41 ಅತಿಥಿ ಉಪನ್ಯಾಸಕರಿದ್ದಾರೆ.

ಪತ್ರಿಕೋದ್ಯಮ, ಇಂಗ್ಲಿಷ್ ವಿಷಯ ಹೊರತುಪಡಿಸಿ ಉಳಿದ ವಿಭಾಗಗಳಿಗೆ ಉತ್ತಮ ಬೇಡಿಕೆ ಇದೆ. ವಿದ್ಯಾರ್ಥಿಗಳ ಕೊರತೆಯ ಕಾರಣಕ್ಕೆ ಪತ್ರಿಕೋದ್ಯಮ ವಿಭಾಗ ಮುಚ್ಚಿದ್ದಾರೆ. 89 ಮಂದಿ ಪಿಎಚ್‌ಡಿ ಮಾಡುತ್ತಿದ್ದಾರೆ. ಸರ್ಕಾರದಿಂದ ವಿ.ವಿಗೆ ಕಾಯಂ ಬೋಧಕರ ವೇತನಕ್ಕೆ ಮಾತ್ರ ವಾರ್ಷಿಕ ಧನಸಹಾಯ ಸಿಗುತ್ತಿದೆ.

ಮಹಾರಾಣಿ ಕ್ಲಸ್ಟರ್ ವಿ.ವಿ

ಐದು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಮಹಾರಾಣಿ ಕ್ಲಸ್ಟರ್ ವಿ.ವಿಯಲ್ಲಿ 272 ಬೋಧಕ ಹುದ್ದೆಗಳಿದ್ದು 142 ಮಂದಿ ಕಾಯಂ ಬೋಧಕರಿದ್ದಾರೆ. 130 ಹುದ್ದೆಗಳು ಖಾಲಿ ಇದ್ದು, ಆ ಸ್ಥಾನಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ವರ್ಷದಿಂದ ಕಾಯಂ ಕುಲಪತಿ ಕೂಡ ಇಲ್ಲ.

ಮಹಾರಾಣಿ ಕಾಲೇಜು ಕ್ಲಸ್ಟರ್ ವಿಶ್ವವಿದ್ಯಾಲಯವಾಗಿದ್ದರೂ, ಇಲ್ಲಿರುವ ಸಿಬ್ಬಂದಿ ಈಗಲೂ ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲೇ ಇದ್ದಾರೆ. ವಿವಿ ಸಿಬ್ಬಂದಿಯಾಗಿ ಇಲ್ಲಿಯೇ ಉಳಿಯುವ ಅಥವಾ ಹೊರಗೆ ಹೋಗುವ ಬಗ್ಗೆ ತಮ್ಮ ನಿಲುವು ತಿಳಿಸುವಂತೆ ಸಿಬ್ಬಂದಿಗೆ ಸೂಚಿಸಲಾಗಿತ್ತು. 142 ಮಂದಿ ಪೈಕಿ 94 ಮಂದಿ ವಿಶ್ವವಿದ್ಯಾಲಯದಲ್ಲೇ ಉಳಿಯುವುದಾಗಿ ಲಿಖಿತವಾಗಿ ತಿಳಿಸಿದ್ದಾರೆ. ಹೊರಗೆ ಹೋಗುವ, ಇಲ್ಲೇ ಉಳಿಯುವ ಪ್ರಕ್ರಿಯೆ ಪೂರ್ಣಗೊಂಡ ನಂತರ ಎಷ್ಟು ಮಂದಿ ಇರಲಿದ್ದಾರೆ ಎಂಬ ಸ್ಪಷ್ಟ ಚಿತ್ರಣ ಸಿಗಲಿದೆ. ಇಲ್ಲಿ 23 ವಿಭಾಗಗಳಲ್ಲಿ 900ಕ್ಕೂ ಅಧಿಕ ವಿದ್ಯಾರ್ಥಿನಿಯರಿದ್ದು, ಮೆಗಾ ಹಾಸ್ಟೆಲ್ ಸೌಲಭ್ಯ ಇದೆ.

ನೃಪತುಂಗ ವಿ.ವಿ

ಸರ್ಕಾರಿ ವಿಜ್ಞಾನ ಕಾಲೇಜನ್ನು 2021ರಲ್ಲಿ ನೃಪತುಂಗ ವಿ.ವಿಯಾಗಿ ಪರಿವರ್ತಿಸಲಾಗಿದೆ. ಇಲ್ಲಿ ಒಟ್ಟು 100 ಬೋಧಕ ಹುದ್ದೆಗಳಿದ್ದು, ಪ್ರಸ್ತುತ 58 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 48 ಹುದ್ದೆಗಳು ಖಾಲಿ ಇವೆ. ಒಟ್ಟು 70 ಮಂದಿ ಅತಿಥಿ ಉಪನ್ಯಾಸಕರಿದ್ದಾರೆ. ರೂಸಾದಡಿ ವಿಶ್ವವಿದ್ಯಾಲಯಕ್ಕೆ ₹55 ಕೋಟಿ ಅನುದಾನ ದೊರೆತಿದ್ದು, ಇದರಲ್ಲಿ ₹52.08 ಕೋಟಿ ಖರ್ಚು ಮಾಡಿ ಹೊಸ ಕಟ್ಟಡ ಕಟ್ಟಲಾಗಿದೆ. ಆದರೆ, ಇದುವರೆಗೂ ವಿಶ್ವವಿದ್ಯಾಲಯಕ್ಕೆ ಕಾಯಂ ಆಗಿ ಹುದ್ದೆಗಳು ಮಂಜೂರಾಗಿಲ್ಲ. ಹಿಂದೆ ಕಾಲೇಜಿನಲ್ಲಿ ಇದ್ದ ಸಿಬ್ಬಂದಿಯೇ ಇದ್ದಾರೆ. ಅವರಲ್ಲಿ ಇಲ್ಲೇ ಉಳಿಯುವವರು ಎಷ್ಟು, ಹೊರಗೆ ಹೋಗುವವರು ಎಷ್ಟು ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ಮಂಗಳೂರು ವಿ.ವಿ

ಹುದ್ದೆ	ಮಂಜೂರು	ಭರ್ತಿ	ಖಾಲಿ
ಪ್ರಾಧ್ಯಾಪಕ	25	06	19
ಸಹ ಪ್ರಾಧ್ಯಾಪಕ	33	11	22
ಸಹಾಯಕ ಪ್ರಾಧ್ಯಾಪಕ	86	43	43

ಕಾಯಂ ಸಿಬ್ಬಂದಿ ಕೊರತೆ, ಸರ್ಕಾರದಿಂದ ಬರುವ ಅನುದಾನದಲ್ಲಿ ಕಡಿತ, ವಿ.ವಿ ಅಡಿಯಲ್ಲಿರುವ ಕಾಲೇಜುಗಳ ಸಂಖ್ಯೆ ಇಳಿಕೆ ಇನ್ನಿತರ ಕಾರಣಗಳಿಂದಾಗಿ ಮಂಗಳೂರು ವಿಶ್ವವಿದ್ಯಾಲಯವು ಹಣಕಾಸು ಹೊಂದಾಣಿಕೆಗೆ ಹೆಣಗಾಡುತ್ತಿದೆ. 2023–24ನೇ ಸಾಲಿನಲ್ಲಿ ಅಭಿವೃದ್ಧಿ ಅನುದಾನ ದೊರೆತಿಲ್ಲ, 2024–25ನೇ ಸಾಲಿನಲ್ಲಿ ₹1 ಕೋಟಿ ಬಂದಿದೆ. ವಿ.ವಿಯ ಆರ್ಥಿಕ ಸಂಪನ್ಮೂಲ ಕ್ರೋಡೀಕರಣದ ಶಕ್ತಿ ಕುಂಠಿತವಾಗಿದೆ. ಹಲವಾರು ಕಾಲೇಜುಗಳು ಸ್ವಾಯತ್ತಗೊಂಡರೆ, ಕೆಲವು ಡೀಮ್ಡ್ ವಿವಿಗಳಾಗಿ ರೂಪುಗೊಂಡಿವೆ. ಕಾಲೇಜು ಸಂಯೋಜನೆ ಶುಲ್ಕ, ವಿದ್ಯಾರ್ಥಿಗಳ ತರಗತಿ ಶುಲ್ಕದಿಂದ ಸಂಗ್ರಹವಾಗುವ ಮೊತ್ತದಿಂದ ವಿ.ವಿಯ ಎಲ್ಲ ಆರ್ಥಿಕ ವೆಚ್ಚ ಭರಿಸಬೇಕಾಗಿದೆ.

ವಿವಿಯಲ್ಲಿ 28 ವಿಭಾಗಗಳು ಇದ್ದು, 42 ವಿವಿಧ ಕೋರ್ಸ್‌ಗಳು, ಎರಡು ಡಿಪ್ಲೊಮಾ ಕೋರ್ಸ್‌ಗಳು ಇವೆ. ಇಂಗ್ಲಿಷ್, ಭೌತ ವಿಜ್ಞಾನ, ಎಂಎಸ್‌ಡಬ್ಲ್ಯು, ಇಂಡಸ್ಟ್ರಿಯಲ್ ಕೆಮಿಸ್ಟ್ರಿ, ಅರ್ಥಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಜೀವ ವಿಜ್ಞಾನ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ ಇದೆ. ಬಯೊಕೆಮೆಸ್ಟ್ರಿ, ಎಲೆಕ್ಟ್ರಾನಿಕ್ಸ್, ಪರಿಸರ ವಿಜ್ಞಾನ, ಕಡಲ ವಿಜ್ಞಾನ, ಮಟೀರಿಯಲ್ ಸೈನ್ಸ್, ಸಂಖ್ಯಾಶಾಸ್ತ್ರ, ಜಿಯೊ ಇನ್ಫೊಮೆಟಿಕ್ಸ್, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಕೋರ್ಸ್‌ಗಳು ವಿದ್ಯಾರ್ಥಿಗಳ ಕೊರತೆಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ.

ಸಚಿವರ ಅಸಹಾಯಕತೆ



ವಿಶ್ವವಿದ್ಯಾಲಯಗಳು ಹಣಕಾಸು ಕೊರತೆಯ ಬಗ್ಗೆ ಸ್ವತಃ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ತುಮಕೂರು ತಾಲ್ಲೂಕಿನ ಬಿದರೆಕಟ್ಟೆ ಬಳಿ ಶುಕ್ರವಾರ ತುಮಕೂರು ವಿ.ವಿಯ ನೂತನ ಕ್ಯಾಂಪಸ್, ವಿವಿಧ ಕಟ್ಟಡಗಳ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಹಲವು ವಿ.ವಿಗಳಲ್ಲಿ ಪಿಂಚಣಿಗೂ ಹಣ ಇಲ್ಲವಾಗಿದ್ದು, ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿವೆ. ಹಳೆಯ ವಿ.ವಿಗಳ ಪರಿಸ್ಥಿತಿ ನೋಡಿದರೆ ದುಃಖವಾಗುತ್ತದೆ' ಎಂದರು.

'ಪ್ರತಿ ಜಿಲ್ಲೆಗೊಂದು ವಿ.ವಿ ಆರಂಭಿಸಬೇಕು ಎಂಬ ಆಸೆ ಎಲ್ಲರಿಗೂ ಇದೆ. ಸ್ಥಾಪನೆ ಮಾಡಿದಷ್ಟು ಸುಲಭವಾಗಿ ವಿ.ವಿಯನ್ನು ಉನ್ನತ ಶಿಕ್ಷಣ ಕೇಂದ್ರವಾಗಿ, ಜ್ಞಾನದ ಸಂಸ್ಥೆಯಾಗಿ ಬೆಳೆಸಲು ಸಾಧ್ಯವಾಗುತ್ತಿಲ್ಲ ಎಲ್ಲವನ್ನು ಸಮರ್ಥವಾಗಿ ಎದುರಿಸುವ ಪ್ರಯತ್ನ ಸರ್ಕಾರದಿಂದ ಆಗುತ್ತಿದೆ' ಎಂದು ತಿಳಿಸಿದರು.

ಮಹಿಳಾ ವಿ.ವಿ

'ರಾಜ್ಯದ ಏಕೈಕ ಮಹಿಳಾ ವಿಶ್ವವಿದ್ಯಾಲಯ' ಆಗಿರುವ ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಬೋಧಕ, ಬೋಧಕೇತರ ಸಿಬ್ಬಂದಿ ಕೊರತೆ, ಹಣಕಾಸು ಕೊರತೆ ಎದುರಿಸುತ್ತಿದೆ. 32 ವಿಭಾಗಗಳಿಗೆ ಸಂಬಂಧಿಸಿದಂತೆ 103 ಬೋಧಕ ಸಿಬ್ಬಂದಿಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ 57 ಹುದ್ದೆಗಳು ಮಾತ್ರ ಭರ್ತಿ ಇದ್ದು, 46 ಹುದ್ದೆಗಳು ಖಾಲಿ ಇವೆ. 83 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಕೊರತೆ ಇದ್ದರೂ ಯಾವುದೇ ವಿಭಾಗವನ್ನು ಮುಚ್ಚಿಲ್ಲ. ಆದರೆ, ಬಹಳಷ್ಟು ವಿಭಾಗಗಳಲ್ಲಿ ಅರ್ಧದಷ್ಟು ಸೀಟುಗಳೂ ಭರ್ತಿಯಾಗುತ್ತಿಲ್ಲ. ವಿಶ್ವವಿದ್ಯಾಲಯದ ಆವರಣದಲ್ಲಿ ಸೌಕರ್ಯಗಳ ಕೊರತೆ ಇದೆ. ಹಣಕಾಸಿನ ಕೊರತೆ ಅನುಭವಿಸುತ್ತಿದೆ.

ಗುಲಬರ್ಗಾ ವಿ.ವಿ

ನಾಲ್ಕು ದಶಕಗಳ ಹಿಂದೆ ಸ್ಥಾಪನೆಯಾಗಿರುವ ಗುಲಬರ್ಗಾ ವಿ.ವಿ.ಯಲ್ಲಿ ಬೋಧಕ ಸಿಬ್ಬಂದಿಯ ನೇಮಕ ಎರಡು ದಶಕಗಳಿಂದ ಆಗದೇ ಇರುವುದರಿಂದ ಶೈಕ್ಷಣಿಕ ಪ್ರಗತಿಗೆ ಭಾರಿ ಹಿನ್ನಡೆಯಾಗಿದೆ. ವಿ.ವಿ.ಯಲ್ಲಿ ಸದ್ಯಕ್ಕೆ 26 ಮಂಜೂರಾದ ಪ್ರಾಧ್ಯಾಪಕ ಹುದ್ದೆಗಳ ಪೈಕಿ ಇಬ್ಬರು ಮಾತ್ರ ಇದ್ದಾರೆ. 56 ಸಹ ಪ್ರಾಧ್ಯಾಪಕರ ಬದಲು ಐವರು ಮಾತ್ರ ಇದ್ದಾರೆ. 124 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ಪೈಕಿ 99 ಖಾಲಿ ಉಳಿದಿವೆ. ಹೀಗಾಗಿ, ನಾಲ್ಕೈದು ವಿಭಾಗಗಳಿಗೆ ಇರುವ ಪ್ರಾಧ್ಯಾಪಕರನ್ನೇ ವಿಭಾಗ ಮುಖ್ಯಸ್ಥರನ್ನಾಗಿ ಮಾಡುವ ಅನಿವಾರ್ಯತೆ ಎದುರಾಗಿದೆ.

ರಾಣಿ ಚನ್ನಮ್ಮ ವಿ.ವಿ

ಬೆಳಗಾವಿ ಸಮೀಪದ ಭೂತರಾಮನಹಟ್ಟಿಯಲ್ಲಿ ಹಳೆ ಕಟ್ಟಡದಲ್ಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮುಂದುವರಿದಿದೆ. ಹಿರೇಬಾಗೇವಾಡಿ ಬಳಿ ಹೊಸ ಕಟ್ಟಡ ನಿರ್ಮಾಣವಾಗಿದ್ದು, ಕೆಲವೇ ದಿನಗಳಲ್ಲಿ ಸ್ಥಳಾಂತರವಾಗಲಿದೆ. ಬೇಸಿಗೆ ಹಾಗೂ ಬರಗಾಲದ ಸಂದರ್ಭದಲ್ಲಿ ನೀರಿನ ಅಭಾವ ತಲೆದೋರುತ್ತಿದೆ. ವಿ.ವಿ ಮುಖ್ಯ ಕ್ಯಾಂಪಸ್‌ನಲ್ಲಿ 70 ಬೋಧಕ ಹಾಗೂ 120 ಬೋಧಕೇತರ ಸಿಬ್ಬಂದಿ ನೇಮಕವಾಗಿದೆ. 30 ಅತಿಥಿ ಬೋಧಕರು ಹಾಗೂ 100 ಅತಿಥಿ ಬೋಧಕೇತರ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ. ವಿ.ವಿ ಸಂಯೋಜಿತ ಸಂಗೊಳ್ಳಿ ರಾಯಣ್ಣ ಕಾಲೇಜಿನಲ್ಲಿ ಕೂಡ 2,600 ವಿದ್ಯಾರ್ಥಿಗಳು ಇದ್ದಾರೆ. ಐವರು ಮಾತ್ರ ಕಾಯಂ ಬೋಧಕರಿದ್ದು, 65 ಅತಿಥಿ ಉಪನ್ಯಾಸಕರ ಮೇಲೆ ನಡೆಸಲಾಗುತ್ತಿದೆ.

ಕಾನೂನು ವಿ.ವಿ

ಹುಬ್ಬಳ್ಳಿಯ ನವನಗರದಲ್ಲಿ 2009ರಲ್ಲಿ ಆರಂಭಗೊಂಡಿರುವ ಕರ್ನಾಟಕ ಕಾನೂನು ವಿವಿಯು 53 ಎಕರೆ ಪ್ರದೇಶದಲ್ಲಿ ಹರಡಿದೆ. ಇಲ್ಲಿನ ಕಾನೂನು ಶಾಲೆ ಒಟ್ಟು 52 ಅಧ್ಯಾಪಕರನ್ನು ಒಳಗೊಂಡಿದ್ದು, ಇದರಲ್ಲಿ 11 ಮಂದಿ ಕಾಯಂ ಇದ್ದಾರೆ. ಉಳಿದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ವಿವಿ ವ್ಯಾಪ್ತಿಯಲ್ಲಿ 167 ಕಾನೂನು ಕಾಲೇಜುಗಳಿವೆ.

ಕರ್ನಾಟಕ ವಿ.ವಿ

75 ವರ್ಷಗಳ ಇತಿಹಾಸವಿರುವ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಹಣಕಾಸಿನ ಕೊರತೆಯಿಂದ ಸೊರಗಿದೆ. ಒಟ್ಟು ಮಂಜೂರು ಬೋಧಕ ಹುದ್ದೆಗಳು 554. ಪ್ರಸ್ತುತ ಕಾಯಂ ಬೋಧಕರು 196 ಮಂದಿ ಇದ್ದಾರೆ. 358 ಹುದ್ದೆಗಳು ಖಾಲಿ ಇವೆ. ಹಿಂದಿ, ಸಂಸ್ಕೃತ ಮೊದಲಾದ ವಿಭಾಗಗಳು ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿವೆ. ಎಂಬಿಎ, ವಾಣಿಜ್ಯ, ಗಣಿತ, ರಸಾಯನವಿಜ್ಞಾನ, ಅರ್ಥಶಾಸ್ತ್ರ ಮುಂತಾದ ವಿಷಯಗಳಿಗೆ ಬೇಡಿಕೆ ಇದೆ. ದಾಖಲಾತಿ ಕಳೆದ ವರ್ಷಕ್ಕಿಂತ ಕಡಿಮೆಯಾಗಿದೆ. ಹಣಕಾಸಿನ ಕೊರತೆ ವಿವಿಯನ್ನು ತೀವ್ರವಾಗಿ ಬಾಧಿಸುತ್ತಿದೆ. ಪಿಂಚಣಿ ನೀಡಲೂ ವಿವಿ ಆಡಳಿತಕ್ಕೆ ಕಷ್ಟವಾಗುತ್ತಿದೆ.

ಹೊಸ ವಿ.ವಿ: ಶೋಚನೀಯ ಸ್ಥಿತಿ

ವಿವಿಧ ಜಿಲ್ಲೆಗಳಲ್ಲಿ ಸ್ಥಾಪನೆಯಾದ ಹೊಸ ವಿ.ವಿಗಳ ಪರಿಸ್ಥಿತಿ ಶೋಚನೀಯವಾಗಿದೆ. ಕೊಪ್ಪಳ ವಿಶ್ವವಿದ್ಯಾಲಯ, ರಾಯಚೂರಿನ ಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿ , ಬೀದರ್, ಬಾಗಲಕೋಟೆ, ಹಾವೇರಿ, ಚಾಮರಾಜನಗರ, ಹಾಸನ, ಕೊಡಗು, ಮಂಡ್ಯ ವಿಶ್ವವಿದ್ಯಾಲಯಗಳದ್ದು ಬಹುತೇಕ ಒಂದೇ ರೀತಿಯ ಸಮಸ್ಯೆ.

ಕುಲಪತಿ, ರಿಜಿಸ್ಟ್ರಾರ್ ಮುಂತಾದ ಉನ್ನತ ಹುದ್ದೆಗಳಿಗೆ ಕಾಯಂ ನೇಮಕಾತಿಯಾಗಿದ್ದು ಬಿಟ್ಟರೆ, ಬೋಧಕ ಹುದ್ದೆಗಳೆನ್ನೆಲ್ಲ ಅತಿಥಿ ಉಪನ್ಯಾಸಕರೇ ನಿರ್ವಹಿಸುತ್ತಿದ್ದಾರೆ. ಮೂಲಸೌಕರ್ಯ ಅನುದಾನ ಕೊರತೆಯು ಇವುಗಳನ್ನು ತೀವ್ರವಾಗಿ ಬಾಧಿಸುತ್ತಿದ್ದು, ವಿವಿಗಳ ಸಮಸ್ಯೆಗಳು ವಿದ್ಯಾರ್ಥಿಗಳನ್ನು ಮೇಲೆ ಪ್ರಭಾವ ಬೀರುತ್ತಿವೆ.

ಕೃಷಿ ವಿ.ವಿ

ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಬೋಧಕರ ಕೊರತೆ ಇದೆ. ಶೇ 60ರಷ್ಟು ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳಿಗೆ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳಲಾಗಿದೆ. ವಿಶ್ವವಿದ್ಯಾಲಯಕ್ಕೆ ವಾರ್ಷಿಕ ₹ 300 ಕೋಟಿ ಅನುದಾನ ಅಗತ್ಯ ಇದೆ. ಸರ್ಕಾರ ₹ 250 ಕೋಟಿ ನೀಡಿದೆ.

ಗ್ರಾಮೀಣಾಭಿವೃದ್ಧಿ ವಿ.ವಿ

ಗದಗದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಯಲ್ಲಿ ಕಾಯಂ ಪ್ರಾಧ್ಯಾಪಕರು ಇಲ್ಲದ ಕಾರಣ ಪಿಎಚ್‌ಡಿ ಸೇರಿದಂತೆ ಸಂಶೋಧನಾ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. 2017-18ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯ ತನ್ನ ಶೈಕ್ಷಣಿಕ ಕಾರ್ಯಗಳನ್ನು ಪ್ರಾರಂಭಿಸಿದೆ. ಪ್ರತಿವರ್ಷ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಹೆಚ್ಚಿಸಿಕೊಳ್ಳುತ್ತಿದೆ. ಪ್ರಾರಂಭದಿಂದಲೂ ಎಲ್ಲ ಸರ್ಕಾರಗಳು ವಿಶ್ವವಿದ್ಯಾಲಯದ ಭೌತಿಕ ಅಭಿವೃದ್ಧಿಗೆ ಬೇಕಿರುವ ಅನುದಾನವನ್ನು ನೀಡುತ್ತಲೇ ಬಂದಿವೆ. ಆದರೆ, ಈವರೆಗೆ ಕಾಯಂ ಸಿಬ್ಬಂದಿ ನೇಮಕಾತಿಗೆ ಕ್ರಮವಹಿಸಿಲ್ಲ. ಇದರಿಂದಾಗಿ ಇಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಪಿಎಚ್‌ಡಿ ಮಾಡಲು ರಾಜ್ಯದ ಇತರೆ ವಿಶ್ವವಿದ್ಯಾಲಯಗಳನ್ನು ಅವಲಂಬಿಸುವಂತಾಗಿದೆ.

ಶ್ರೀಕೃಷ್ಣದೇವರಾಯ ವಿ.ವಿ

ಕರ್ನಾಟಕ ಗಣಿಗಾರಿಕೆ ಪರಿಸರ ಪುನಶ್ಚೇತನ ನಿಗಮ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಲವು ಯೋಜನೆಗಳಿಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗುತ್ತಿರುವ ಕಾರಣ ವಿವಿ ಆರ್ಥಿಕ ಪರಿಸ್ಥಿತಿ ಬೇರೆಲ್ಲ ವಿವಿಗಳಿಗಿಂತ ಉತ್ತಮವಾಗಿದೆ. ಪತ್ರಿಕೋದ್ಯಮ ಮತ್ತು ಕೆಲ ವಿಭಾಗಗಳಿಗೆ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಕೊರತೆ ಇದೆ. ಮಂಜೂರಾದ 151 ಬೋಧಕ ಹುದ್ದೆಗಳಲ್ಲಿ, 55 ಹುದ್ದೆಗಳು ಖಾಲಿ ಇವೆ.

ಜಾನಪದ ವಿ.ವಿ

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೋಟಗೋಡಿಯಲ್ಲಿರುವ ಜಾನಪದ ವಿಶ್ವವಿದ್ಯಾಲಯದಲ್ಲಿ ಸದ್ಯ 8 ಮಂದಿ ಕಾಯಂ ಪ್ರಾಧ್ಯಾಪಕರಿದ್ದಾರೆ. 14 ಅತಿಥಿ ಪ್ರಾಧ್ಯಾಪಕರಿದ್ದಾರೆ. ಬೋಧನಾ ಸಾಮಗ್ರಿಗಳ ಕೊರತೆ, ಅನುದಾನ ಕೊರತೆ ಇದೆ. ಅತಿಥಿ ಉಪನ್ಯಾಸಕರಿಗೆ ವೇತನ ನೀಡಲು ತಡವಾಗುತ್ತಿದೆ. ಬೋಧನಾ ತರಗತಿಗಳ ಕೊಠಡಿಗಳ ಕೊರತೆಯಿದೆ. ಹಿಂದುಳಿದ ವರ್ಗಗಳ ಹಾಸ್ಟೆಲ್ ಮಂಜೂರಾದರೂ ಆರಂಭವಾಗಿಲ್ಲ.


ಸಂಗೀತ ವಿ.ವಿ

2008ರಲ್ಲಿ ಮೈಸೂರಿನಲ್ಲಿ ಸ್ಥಾಪನೆಗೊಂಡ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ 15 ಹುದ್ದೆಗಳು ಮಂಜೂರಾಗಿದ್ದು, ಎಲ್ಲವೂ ಖಾಲಿ ಇವೆ. ಕುಲಪತಿ, ಕುಲಸಚಿವ, ಪರೀಕ್ಷಾಂಗ ಕುಲಸಚಿವರನ್ನು ಹೊರತುಪಡಿಸಿ ಉಳಿದೆಲ್ಲ ಬೋಧಕ ಹುದ್ದೆಗಳಲ್ಲಿ ಅತಿಥಿ ಪ್ರಾಧ್ಯಾಪಕರೇ ಇದ್ದಾರೆ. 16 ವರ್ಷಗಳ ನಂತರ ಸ್ವಂತ ಕಟ್ಟಡವನ್ನು ಹೊಂದುತ್ತಿದೆ. ಮೈಸೂರು ತಾಲ್ಲೂಕಿನ ನಾಡನಹಳ್ಳಿಯಲ್ಲಿ 5.5 ಎಕರೆ ನಿವೇಶನದಲ್ಲಿ 'ಕುಟೀರ'ಗಳನ್ನು ನಿರ್ಮಿಸಲಾಗಿದ್ದು, ಅಲ್ಲಿಯೇ ತರಗತಿಗಳು ನಡೆಯುತ್ತಿವೆ.

ಕುವೆಂಪು ವಿ.ವಿ

ಕುವೆಂಪು ವಿಶ್ವವಿದ್ಯಾಲಯದಲ್ಲಿ ನಿವೃತ್ತಿ ಆಗಿರುವ 40 ಮಂದಿಗೆ ಪಿಂಚಣಿ ಸವಲತ್ತು ಕೊಡಲೂ ಹಣವಿಲ್ಲ. ಆದರೂ ಮೈಸೂರು, ಮಂಗಳೂರು, ಧಾರವಾಡ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಕುವೆಂಪು ವಿಶ್ವವಿದ್ಯಾಲಯದ ಸ್ಥಿತಿ ಚೆನ್ನಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

08 ನವೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣತೃತೀಯ ಗಂ. 7-33 ನಂತರ ಚತುರ್ಥಿ ಗಂ 28-26 ನಕ್ಷತ್ರ: ಮೃಗಶಿರ ಗಂ 22-03 ಯೋಗ: ಶಿವ ಗಂ. 18-32 ಕರಣ: ವಿಷ್ಟಿ ಗಂ. 7-33 ತುಲಾ ಮಾಸದ 22 ನೇ ದಿನ. ಮಳೆ ನಕ್ಷತ್ರ : ವಿಶಾಖ 1 ನೇ ಪಾದ. ರಾಹುಕಾಲ : ಬೆಳ್ಳಿಗ್ಗೆ 09-00 - 10-30 ಸೂರ್ಯೋದಯ : 06-30 ಸೂರ್ಯಾಸ್ತ : 05-58, ಮುಸ್ಲಿಂ ದಿನಾಂಕ : 16 ಜುಮಾದುಲ್ಲಾವಲ್ , ದಿನ ವಿಶೇಷ : ಸಂಕಷ್ಟಹರ ಚತುರ್ಥಿ,ಅದೃಷ್ಟ ಸಂಖ್ಯೆ : 2, 10

ಮೇಷ: ಕುಟುಂಬ ನಿರ್ವಹಣೆಗಾಗಿ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಇರುವುದಿಲ್ಲ. ಸಂತಸದ ವಿಚಾರವನ್ನು ಸ್ವೀಕರಿಸಲು ಕಷ್ಟವಾಗುವುದು.

ವೃಷಭ: ಸ್ವಲ್ಪ ದಿನದ ಹಿಂದೆ ಪರಿಹಾರ ಕಾಣದೆ ಕಾಡುತ್ತಿದ್ದ ಒಂದು ಸಮಸ್ಯೆ ಹಿಮದಂತೆ ಕರಗಿಹೋಗುತ್ತದೆ. ಸಹಾಯಕ ವರ್ಗದವರ ಕಷ್ಟಗಳಿಗೆ ನೆರವಾಗುವ ಗುಣಗಳನ್ನು ರೂಢಿಸಿಕೊಳ್ಳಿ.

ಮಿಥುನ: ಸ್ವಂತ ಉದ್ಯೋಗ ನಡೆಸುವವರು ಒಳ್ಳೆಯ ಅಭಿವೃದ್ಧಿ ಎದುರು ನೋಡಬಹುದು. ರಾಜಕೀಯ ವಲಯದ ಕಾರ್ಯಕರ್ತರಿಗೆ ಅರಿವಿಗೆ ಬರದಂತೆ ಮುನ್ನಡೆಯುವ ಅವಕಾಶಗಳು ಕೈ ತಪ್ಪಲಿವೆ.

ಕರ್ಕಾಟಕ: ಮಕ್ಕಳ ವಿಚಾರದಲ್ಲಿ ಭವಿಷ್ಯದ ದೃಷ್ಟಿಯಿಂದ ದೊಡ್ಡದು ಸಣ್ಣದು ಎಂಬ ಬೇಧ ಮಾಡದೇ ತಕ್ಷಣ ಕಾರ್ಯೋನ್ಮುಖರಾಗಿ. ಆಶ್ವಾಸನೀಯ ವರ್ತನೆಯಿಂದ ಸಂತಸ ಉಂಟಾಗುವುದು.

ಸಿಂಹ: ರಾಜಕೀಯ ವರ್ಗದವರು ರಾಜಕಾರಣದ ತಂತ್ರಗಾರಿಕೆ ನಡೆಸುವುದು ಅಗತ್ಯ. ಹಣಕಾಸಿನ ವ್ಯಾಮೋಹ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ. ಮಧ್ಯಸ್ಥಿಕೆಯಿಂದ ಸಮಸ್ಯೆಗೆ ಪರಿಹಾರ.

ಕನ್ಯಾ: ತಿಂಗಳ ಕೊನೆಯಲ್ಲಿ ಅನುಭವಿಸಿದ ಹಣದ ಕಷ್ಟವನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳುವಿರಿ. ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ಅಧಿಕಾರ, ಅನುಭವದಿಂದ ಆತ್ಮಾಭಿಮಾನ ವೃದ್ಧಿ.

ತುಲಾ: ಎದ್ದ ಸಮಯದಲ್ಲಿ ಅಶುಭದ ಸಂಕೇತವೆಂದು ಕಂಡ ವಿಷಯಗಳ ಬಗ್ಗೆ ಚಿಂತಿಸದಿರಿ. ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳ-ಲ್ಲಿ ಭಾಗಿಯಾಗುವ ಸಂದರ್ಭ ಬರಲಿದೆ.

ವೃಶ್ಚಿಕ: ಹೊಸ ಒಪ್ಪಂದವೊಂದನ್ನು ಒಪ್ಪಿಕೊಳ್ಳುವ ಮುನ್ನ ತುಸು ಯೋಚಿಸುವುದು ಉತ್ತಮ ಎಂಬ ಭಾವನೆ ಮನಸ್ಸಿಗೆ ಬರಲಿದೆ. ಅದು ಸರಿಯಾದದ್ದು. ಅವಿವಾಹಿತರಿಗೆ ಕಂಕಣ ಭಾಗ್ಯವಿದೆ.

ಧನು: ಸಾಕುಪ್ರಾಣಿಯ ತೀವ್ರ ಅನಾರೋಗ್ಯವು ದುಃಖಕರವನ್ನಾಗಿ ಮಾಡಬಹುದು. ಸ್ನೇಹಿತರೊಡನೆ ಸುಂದರ ಸಂಜೆಯನ್ನು ಕಳೆಯುವ ಅವಕಾಶ-ಗಳನ್ನು ತಪ್ಪಿಸಿಕೊಳ್ಳುವ ಯೋಚನೆಯನ್ನು ಮಾಡದಿರಿ.

ಮಕರ: ವಿದ್ಯಾಭ್ಯಾಸ, ವೃತ್ತಿಯ ಬಗ್ಗೆ ಆತುರ ನಿರ್ಧಾರ ತೆಗೆದುಕೊಳ್ಳಬೇಡಿ. ಕಾಲು ನೋವು ಅಥವಾ ಬೆನ್ನು ನೋವು ಕಾಣಿಸಿದವರಿಗೆ ವೈದ್ಯರ ದರ್ಶನ ಅಗತ್ಯವೆನಿಸಲಿದೆ.

ಕುಂಭ: ಆಹಾರದ ವ್ಯತ್ಯಾಸದಿಂದಾಗಿ ಚರ್ಮದಲ್ಲಿ ದಡಾರಗಳು ಅಥವಾ ತುರಿಕೆ ಕಾಣಿಸಿಕೊಳ್ಳಬಹುದು. ಅನಿರೀಕ್ಷಿತವಾದರೂ ಬದುಕಿನಲ್ಲಿ ಒಳ್ಳೆಯ ಬೆಳವಣಿಗೆಗಳಾಗುವ ಲಕ್ಷಣಗಳು ಕಾಣುತ್ತಿವೆ.

ಮೀನ: ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು. ನೂತನ ದಂಪತಿ ಸಂತಾನದ ಶುಭ ಸುದ್ದಿಯನ್ನು ಕೇಳುವಿರಿ. ಪಾಲುದಾರರು ಒಪ್ಪಿಗೆ ನೀಡುತ್ತಾರೆ.

ಪದಬಂಧ 6217

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಹೋಲಿಕೆಗೆ ಮೀರಿದುದು (4)
5.ನರನಿರುವ ಪಟ್ಟಣ (3)
6.ದೊಡ್ಡ ನಗಾರಿ ಇಲ್ಲಿದೆ (4)
7.ಒನಪು ತೋರಿದಾಗ ಬಂದಿರುವ ಸ್ಮರಣೆ (3)
9.ಅರ್ಧ ಚಂದ್ರಾಕೃತಿ ರಚನೆ (3)
10. ಧೀರನ ಜೊತೆ ಇದ್ದರೂ ಈತ ಧೈರ್ಯವಿಲ್ಲದವನು! (3)
11.ಬಿರುಸಾದುದನ್ನು ಹೀಗೆನ್ನಿ (3)
14.ವನದಲ್ಲಿ ದೊರೆತ ಆದಾಯ (4)
16.ಕನ್ನಡಿಗ ಹಿಡಿದಿರುವ ದರ್ಪಣ (3)
17.ಒಂದು ಸಂಖ್ಯೆಯನ್ನು ಮತ್ತೊಂದರಿಂದ ಗುಣಿಸುವುದು (4)

ಮೇಲಿಂದ ಕೆಳಕ್ಕೆ

1.ಈತ ದನಗಳನ್ನು ಕಾಯುವವನು (4)
2.ರಾಜನಿರುವ ಮನೆ (4)
3.ಮಧುರ ಫಲ ನೀಡುವ ವೃಕ್ಷ (2)
4.ಕ್ಷೀರದೊಡನಿರಿಸಿದ ಮಧು (4)
8.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
10.ಅಣಿಯಾಗಿ ಶೇಖರಿಸಿದ ಪೂಜೆಯ ನೀರು (4)
12.ಸುರದೊಳಗಿನ ಚಂದ್ರ ಕಾಣುತ್ತಿದ್ದಾನೆಯೇ? (4)
13.ಮಂಪರು ಈ ರೀತಿ ಬಂದಿದೆ (4)
15.ನಡುಗುವವನ ನೋಡಿಯೇ ಈ ಮಂದಹಾಸ! (2)



6216ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತದಾನ 4.ಶಿಲುಬೆ
6.ಭವಿಷ್ಯ 8.ಅಭಿರುಚಿ
11.ಬಾಕು 12.ಲೋಭಿ
13.ಮಧ್ಯಮ 14.ಗೆಜ್ಜೆ
15.ಜಯ 16.ಟದಾರಪ
18.ಕರುಣೆ 20.ಕರ್ತಾರ21.ಮನೋರಥ

ಮೇಲಿಂದ ಕೆಳಕ್ಕೆ:
2.ತವರು 3.ನಭ 4.ಶಿಷ್ಯ5.ಬೆಳಕು
7.ವಿಹಂಗಮನೋಟ
9.ಭಿನ್ನಾಭಿಪ್ರಾಯ
10.ಚಿಕ್ಕಮಗಳೂರು 11.ಬಾಡಿಗೆದಾರ
15.ಜಟಕ17.ದಾತಾರ18.ಕರ19.ಣೆಮ

ಸುಡೊಕು 6601

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6	3			9		1		8
	1			3			6	
		7	4			3		9
2	9				4	6		
1	4			5				2
			1				9	4
3		9			5		7	
	8			1		9		3
4		1	3		9		8	

6600 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commerical

Anjanapura

COMMERCIAL SITE FOR SALE Site no. 685 Anjanapura 8th block, North facing 50*80. Call: 6362874644.

Jayanagar

JAYANAGAR 4TH T Block, Commercial Site 45x90, East, 80ft. Road, 48,000/- Sft. Suraj Realtors- 9845232711

J P Nagar

COMMERCIAL BDA-SITE-SALE JPNagar 8th Phase 2nd,Block, 40x60,North Facing,16500/- Anjanapura 8th,Block 50x80,North Facing 16000/- 9845600007

Sites

Anjanapura

ANJANAPURA 10TH Block BDA Property 40x60, Prime Location, West Facing Site 11,500/- Contact- 9845000299/ 9980808155

ANJANAPURA COMMERCIAL Flat for Sale 50x80 North Facing, Genuine Buyers Call: 9880448478/ 9972338060.

BDA RESIDENTIAL and Commercial Anjanapura BDA, Narayananagara, BCMC, Judicial, Vakil Garden, Kanakapura Road 30x40, 40x60, 50x80. 9916592400

ANJANAPURA BDA Site For Sale, 1ST Block 20x30, W/F Price 65 Lakhs Negotioble 9740150364/8884707773

Banashankari



BSK 6th Stage 4th 'T' Block, opp Park 40 feet Road, East Facing 5 min. walk from Silk Institute Metro Station 12500/- sft. slightly negotiable. **M : 9845286583**

BANASHANKARI 6TH Stage 10th Block 40x60 West Facing. And 30x40 West Facing. More Details Call: 9148914809, 9993959099.

BDA RESIDENTIAL and Prime Commercial Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80. 9916592400

BDA SITE for Sale at Banashankari 6th Stage 2nd Block 30x40 West Facing Near 80 Feet Road Contact: 8123715607

BANASHANKARI 6TH Stage BDA Site for Sale 30x40, 40x60 4th & 11th Block. 6364643930/ 9972720488.

Basaweshwaranagar

40×60 SOUTH Basveshwarnagar SMV Layout East Rajajinagar with Building Commercial/ Residential Site Immediate Sale: 8660075308.

Chandapura

KHB SITE SALE at Surya Nagar 2nd Phase 30x40, 20x30, Near Anekal Road, Chandrapura 9066865343

Gnanabharathi

"30X40 BDA East Face`Site for sale`at Gnanabharathi Layout 3rd-Block just`10`minutes drive`to R.V.COLLEGE METRO and Mysore Road. 9880031654"

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jigani

KHB Sites Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Jayanagar

PRIME COMMERCIAL Buildings & Sites- High Rental Returns Jayanagar, JP Nagar, HSR, Koramangala, Yelahanka, RMV, Banashankari, RR Nagar, Kanakapura Road & Central Bangalore. 9916592400

Outer Ring Road

ORR(SUMANAHALLI-LAGGERE BRIDGE) direct facing Corner Commercial Site 2,800 Sft. in Chowdeshwarinagar "A" Khata Call: 9980555558

Kempegowda Layout

SITE FOR SALE 40x60 East Facing BDA 40 Feet Road
Very Good Location Rs 9250/- Negotiable Nada Prabhu Kempe Gowda Layout K Sector 1st Block **Contact: 9916826976**

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

Multiple Locations

SELLING/ BUYING HOUSES, SITES:30x40 40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM HSR. CALL 7760019494

Rajajinagar

SITE FOR Sale Commercial Property Rajajinagar 2nd block 25x45, North Broker Excuse Contact: 7899570235/ 8197768459

R T Nagar

RT.NAGAR MAIN Road 5400 sft. Commercial Property for Sale. East Face, Brokers Excuse. Call: 9845345964.

Vishweshwariah Layout

BDA SITE SALE VISHWESHWARAIAH LAYOUT 1ST BLOCK 30X40 WEST 12500 NEGOTIABLE, 40X60 WEST 11500 NEGOTIABLE. CONTACT: 8892901567

30X40 VISHVESHWARAIAH Layout BDA Near Bus Stand Rs. 8750 & 60X35 Site Sale North West Corner 80Ft Road 6th Block Commercial Opposite BDA Complex: 8310003509

"40X60 WEST FACING BDA site for sale`at Vishveshwaraiah 1st Block just 10 minutes drive to METRO. 9880031654"

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

AVAILABLE BDA Site Vishweshwaraih Layout 6th Block 20×30 SF Near Oxford College Good Location: 9743381719

***BUYING/SELLING* 20X30** 30x40,40x60,50X80 BDA SITES VISHWESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

30X40 VISHVESHWARAIAH Layout 5th Block & 30x40 Site Sale 1st Block Allotted Site 12500SQFT: 8310003509

40X60 6TH Block Vishweshwaraiah Layout North Facing Price 13500/- Good Location Geniune Buyer's Call: 9980409820

Yelahanka

2400 SQFT 50ft Road Width Semi Commercial Corner Site For Sale Yelahanka 11000/- Psqft: 7996166636

Mysore

KIADB AUCTION SITE FOR SALE, 17539 SQFT E/Face RING ROAD, OPPOSITE SHESHADRIPURAM COLLEGE, HEBBAL, MYSORE. CALL: 9845981490

Tumkur

TUDA 70X103 WF SITE FOR SALE Rs.4600 SQFT. NEAR SAPTHAGIRI CIRCLE, TUMAKURU. CALL: 9845193978/ 9964598774.

House

Mallathalli

***28X40 N/W** Corner*40 feet-road Rental Income 2years old BUILDING 2.95cr final. Mallathahalli ITI LAYOUT. 9353199141

Begur

5-BHK HOUSE, 40x60 Noble Residency, Near Nandi Woods Apartment, Yelanahalli, Begur Hobli, 3.5 Cr, 9845206422

Tumkur

30X40 NEW Building TUDA Near Sheshadripuram College, 2 BHK, 1 BHK 1st Floor, and 2 Shops for SALE, 1.30 Cr. 9448367859

Mysore

LAND OWNER wants to build Highend Luxury SENIOR LIVING HOMES on 2 Acres of converted land on Bangalore- Mysore Expressway near Mysore. Contact for J V owner 9741019028

Industrial & Factory

Multiple Locations

WANT TO purchase running and sick Industry properties from 10000sft to 2 acres in Bangalore city limits/ Bangalore Rural, KIADB Industrial areas. Contact Verna Developers, Barton Centre, MG Road. 9916310226.

Farm House/ Land/ Resorts

Chitradurga

AGRICULTURAL LAND: 10 Acres of Sapota Garden Land, before HIRIYUR Near NH with old Farm House 3 Borewells with Drip connection Fenced Farmland: 9845094316

General

YELLOW ZONE PROPERTY FOR SALE IN HAROHALLI TOWN, 30 GUNTAS, 32000 SQ FT, 150 MTRS FROM HAROHALLI- KANAKPUR BYPASS, WITH BOREWELL AND COCONUT TREES: CONTACT VICTORY PROPERTIES. 7411692219/ 8618576685/ 9482303339, www.victoryproperties.in, info@victoryproperties.in

BUNGALOW FOR SALE
6000 Sq ft, Furnished
4 BHK Bungalow for sale in Baglur. It's 20 minutes drive to Airport. Price 5cr.
Call owner :
9113209192

Jigani

FOR SALE JIGANI/ ANEKAL-HAROHALLI MAIN 80 FEET ROAD, 195 FEET ROAD FRONTAGE, 2 ACRES, 15 KMS FROM JIGANI/ ANEKAL & 15 KMS FROM HAROHALLI, EXCELLENT FOR INVESTMENT : CONTACT VICTORY PROPERTIES.7411692219/ 8618576685/ 9482303339. www.victoryproperties.in, info@victoryproperties.in

Flat

Chandra Layout

PENTHOUSE FLAT for Sale. 3 Bedroom.1600sft Super Built-up. 50Mtr from Attiguppe MetroStation, Chandra layout, Vijaynagar. 1.7Cr Negotiable. 9844060483

Devanahalli

2 BHK FOR SALE 999 Sq.ft. 14th floor PRESTIGE apartment Location: Bangaluru Ph- 9591330517 7899401401

Kanakapura Road

3BHK APARTMENT for`Sale 40x60, 2400.Sqft. Individual Floor near Vajarahalli and Raghuvanahalli Metro Station 1`KM. Call 9740148870 9341050991.

Rajarajeshwari Nagar

3BHK FLAT NE Corner, East Furnished, 2 Carpark, 2nd Floor, Behind Nimishamba, Ideal Homes. 9902288900.

Sites

Anjanapura

BDA-SITES WANTED @ Banashankari 6th Stage, Visveshwaraiah Layout, Anjanapura, Kempegowda Layout 30x40,40x60, 50x80 Rajesh: 9945610779

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

REAL ESTATE BUYING

House

Basavanagudi

WANTED IN BANGALORE South OLD 3/4 BHK 2000Sqft Apartment or HOUSE Near METRO Maximum 3 Crores: 9942081702

WANTED COMMERCIAL BUILDING FOR RENT
1. MINIMUM BUA 15,000 SQFT AND ABOVE
2. NO PART RENTAL & BESCOM, BWSSB IS MUST
3. ONLY UNDER BBMP LIMITS ON MAIN ROADS
4. LONG TERM AGREEMENT
5. LIFT IS MUST

CONTACT: +91 8762493355

WANTED COMMERCIAL BUILDING FOR PURCHASE
WE ARE LOOKING TO PURCHASE COMMERCIAL BUILDING
BUYER : COMPANY
TIME PERIOD : 1 MONTH ,
ONLY HIGH RENTAL YIELD
CONTACT: +91 8050064066

RENTAL PROPERTIES

Accommodation Available

Commercial

COMMERCIAL OFFICE Space 4000 sqft. for Rent available 600 yards from Taj Residency opposite Raddison Hotel, Kensington Road suitable for Advertising Office/ Courier/ Finance Companies etc. with Lift and Parking space. Contact Mob: 9845564500, 9880543500.

House

1 RK RENT 400 sqft. plus Terrace, suitable OFFICE/RESIDENCE near Smart Bazaar, MALLESHWARAM. 7892081511

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Teachers/ Professors

TEACHER FOR Science Required For Class 6 to 10 SSLC State Board Contact 9901501185.

BUSINESS

Business to Business

Business

FOR BRANDING, DIGITAL, SOCIAL MEDIA MARKETING, BUS BACK, AUTO BACK, HOARDINGS, NO PARKING BOARDS, FLIERS, FOUR, THREE WHEELER BRANDING FOR CORPORATES, GOVERNMENT DEPARTMENTS, EDUCATIONAL INSTITUTIONS, BOUTIQUES, JEWELLERY AND ALL BUSINESS NEEDS. CONTACT VENUSCAST TECHNOLOGIES PVT LTD. UAE & INDIA. www.Venuscast.com. Call : 9482303339/ 8722123445/ 9538123445.

PERSONAL

Change of Name

CHANGE OF NAME
I, **Rosamma Varghese** W/o Chandrasekharan Nair,, residing at # 704, 6th Main, 12th Cross, Muthyalanagar, Bengaluru - 560054, have changed my name from **Rosamma Chandrashekaran Nair Varghese** to **ROSAMMA VARGHESE** vide affidavit dated 04.11.2025 before notary L.B. Anasuyamma, Bengaluru.


I, SRITESHRAJ Kolar Sreenath, aged about 25 Years, S/o A R Sreenath and Roopa Sreenath, residing at Gayatri Nilaya, Big Bazar, Kolar Town and District 563101 Have changed my name to Sritesh Raj A S and father's name A R Srinath & Mother's name as A S Roopa vide affidavit dated 05.11.2025 Before Notary Venkataswamy Kolar

CHANGE OF NAME
We **Sabzar Ahmad Rangraze** and **Sumira Sabzar**, parents of **Hibah Rangraze** (OLD NAME), Residing at Rangraze Residency 2nd G Cross, 22nd Main, J.P Nagar 5th Phase, Bengaluru-78 Karnataka, have changed our minor daughter's Name to **AAIRA FATIMA (NEW NAME)** Vide Affidavit dated 31.10.2025, Sworn Before Notary K.V. MANI, Bengaluru.

I, GOUTHAMIBYRAIAH residing at No. 249/S, (3671) 2nd cross, Girinagar BSK 3rd stage Bangalore-85 have changed my name from GOUTHAMIBYRAIAH to GOUTHAMIBYRAIAH SANUSVANTH vide affidavit dated 07/11/25 before notary T. Venkate Gowda Bangalore.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ
ಹಿಂದಿನ ಅಂತ್ಯ: 25,509
ಇಂದಿನ ಅಂತ್ಯ: 25,492
ದಿನದ ಕನಿಷ್ಠ: 25,318
17

ಮೊಟ್ಟೆ ಧಾರಣೆ (ಎನ್ಇಸಿಸಿ)
ಬೆಂಗಳೂರು
100 ಕ್ಕೆ ₹615
12 ಕ್ಕೆ ₹80
ಮೈಸೂರು: 100 ಕ್ಕೆ ₹617

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್ಎಸ್ಎಸ್-4 ₹181
ಆರ್ಎಸ್ಎಸ್-5 ₹176
ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1410 (1410)
ಸೋಯಾ (ರಿಫೈನ್ಡ್) ₹1255 (1255)
ಸೂರ್ಯಕಾಂತಿ (ರಿಫೈನ್ಡ್) ₹1460 (1465)
ಪಾಮೋಲಿನ್ ₹1250 (1250)

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹28250
ಎಸಿ ₹15540
ಆರ್ಪಿ ₹18900
ಆರ್ಸಿ ₹10950

ಅಡಿಕೆ ಧಾರಣೆ

ಕುಮಟಾ	
ಚಾಲಿ	42569-48099
ಚಿಪ್ಪು	28269-34199
ಕೋಕ	10169-33099
ಫ್ಯಾಕ್ಟರಿ	7089-23629
ಹಳೆಚಾಲಿ	45089-46598
ಪುತ್ತೂರು	
ಕೋಕ	20000-31500
ಹೊಸತು	26000-37000
ಶಿವಮೊಗ್ಗ	
ಬೆಟ್ಟೆ	59710-61599
ಗೊರಬಲು	22900-37099
ಹೊಸತು	45599-58099
ರಾಶಿ	40280-58601
ಸರಕು	64660-91696
ಸಿದ್ದಾಪುರ	
ಬಿಳಿಗೋಟು	25199-36809
ಚಾಲಿ	41009-48109
ಕೋಕ	22619-32189
ಕೆಂಪುಗೋಟು	27089-36199
ರಾಶಿ	50099-56999
ತಟ್ಟಿಬೆಟ್ಟೆ	34089-52699
ಶಿರಸಿ	
ಬೆಟ್ಟೆ	37499-53899
ಬಿಳಿಗೋಟು	27899-38899
ಚಾಲಿ	44299-49901
ಕೆಂಪುಗೋಟು	24011-34623
ರಾಶಿ	53529-58298
ಯಲ್ಲಾಪುರ	
ಆಪಿ	66000-66000
ಬಿಳಿಗೋಟು	16000-40699
ಚಾಲಿ	41009-49829
ಕೋಕ	12000-30969
ಕೆಂಪುಗೋಟು	16012-37699
ರಾಶಿ	50189-64350
ತಟ್ಟಿಬೆಟ್ಟೆ	38899-50118

52 ಲಕ್ಷ ವಾಹನ ಮಾರಾಟ

ಜಿಎಸ್‌ಟಿ ಇಳಿಕೆಯಿಂದ 42 ದಿನದಲ್ಲಿ ದಾಖಲೆಯ ಮಾರಾಟ: ಎಫ್‌ಎಡಿಎ

ನವದೆಹಲಿ (ಪಿಟಿಐ): ಸೆಪ್ಟೆಂಬರ್ 22ರಿಂದ ನವೆಂಬರ್ 2ರವರೆಗಿನ ಹಬ್ಬದ ಋತುವಿನಲ್ಲಿ ದೇಶದ ರಿಟೇಲ್ ಮಾರುಕಟ್ಟೆಯಲ್ಲಿ 52 ಲಕ್ಷ ವಾಹನಗಳು ಮಾರಾಟವಾಗಿವೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಶುಕ್ರವಾರ ತಿಳಿಸಿದೆ.

ಕಳೆದ ವರ್ಷದ ಇದೇ ಋತುವಿನಲ್ಲಿ 43,25,632 ವಾಹನಗಳು ಮಾರಾಟವಾಗಿದ್ದವು. ಈ ಬಾರಿ 52,38,401 ವಾಹನಗಳು ಮಾರಾಟವಾಗಿದ್ದು, ಶೇ 21ರಷ್ಟು ಹೆಚ್ಚಳ ದಾಖಲಿಸಿದೆ ಎಂದು ತಿಳಿಸಿದೆ. ಜಿಎಸ್‌ಟಿ ಇಳಿಕೆಯಿಂದ ವಾಹನಗಳ ಬೆಲೆ ಇಳಿಕೆ ಆಯಿತು. ಇದು ವಾಹನಗಳ ಮಾರಾಟದ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ನವರಾತ್ರಿ ಆರಂಭದ ದಿನದಿಂದ ಧನತ್ರಯೋದಶಿ ನಂತರದ 15 ದಿನದ



ಅವಧಿಯನ್ನು (ಒಟ್ಟು 42 ದಿನ) ಹಬ್ಬದ ಋತು ಎಂದು ಹೇಳಿದೆ.

'42 ದಿನದ ಹಬ್ಬದ ಋತುವಿನಲ್ಲಿ ದೇಶದ ಮಾರುಕಟ್ಟೆಯಲ್ಲಿ ವಾಹನಗಳ ರಿಟೇಲ್ ಮಾರಾಟವು ಮಹತ್ವದ ಮೈಲಿಗಲ್ಲು ದಾಖಲಿಸಿದೆ. ಎಲ್ಲಾ ವಿಭಾಗಗಳಲ್ಲಿ ಅತಿ ಹೆಚ್ಚು ವಾಹನಗಳು ಮಾರಾಟ ಆಗಿವೆ' ಎಂದು ಒಕ್ಕೂಟದ ಅಧ್ಯಕ್ಷ ಸಿ.ಎಸ್.ವಿಘ್ನೇಶ್ವರ್ ಹೇಳಿದ್ದಾರೆ.

ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಶೇ 23ರಷ್ಟು ಹೆಚ್ಚಳವಾಗಿದ್ದು, 7,66,918 ವಾಹನಗಳು ಮಾರಾಟವಾಗಿವೆ. ಕಳೆದ ಬಾರಿ 6,21,539 ವಾಹನಗಳು ಮಾರಾಟವಾಗಿವೆ. ದ್ವಿಚಕ್ರ ವಾಹನಗಳ ರಿಟೇಲ್ ಮಾರಾಟದಲ್ಲಿ ಶೇ 22ರಷ್ಟು ಏರಿಕೆಯಾಗಿದ್ದು, 40,52,503 ವಾಹನಗಳು ಮಾರಾಟವಾಗಿವೆ. ತ್ರಿಚಕ್ರ ವಾಹನಗಳು ಶೇ 9 ಮತ್ತು ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 15ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಹಬ್ಬದ ಋತುವಿನಲ್ಲಿ ವಾಹನಗಳಿಗೆ ಬುಕಿಂಗ್ ಹೆಚ್ಚಳವಾಯಿತು. ಹೊಸ ಮಾದರಿ ವಾಹನಗಳು ಬಿಡುಗಡೆಗೊಂಡಿವೆ. ಹೊಸ ವರ್ಷ ಆರಂಭವಾಗುತ್ತಿದ್ದು, ಮಾರಾಟದಲ್ಲಿ ಹೆಚ್ಚಳವು ಮುಂದುವರಿಯುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಅಕ್ಟೋಬರ್‌ನಲ್ಲಿ ಶೇ 41ರಷ್ಟು ಏರಿಕೆ

ಅಕ್ಟೋಬರ್ ತಿಂಗಳಿನಲ್ಲಿ ವಾಹನಗಳ ರಿಟೇಲ್ ಮಾರಾಟದಲ್ಲಿ ಶೇ 41ರಷ್ಟು ಏರಿಕೆಯಾಗಿದ್ದು, 40,23,923 ವಾಹನಗಳು ಮಾರಾಟವಾಗಿವೆ. ಇದು ಅತಿ ಹೆಚ್ಚು ಪ್ರಯಾಣಿಕ ಮತ್ತು ದ್ವಿಚಕ್ರ ವಾಹನಗಳು ಮಾರಾಟವಾದ ತಿಂಗಳಾಗಿದೆ.

ಈ ಒಟ್ಟು ವಾಹನಗಳ ಮಾರಾಟದಲ್ಲಿ 5,57,373 ಪ್ರಯಾಣಿಕ ವಾಹನಗಳು ಮಾರಾಟವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮಾರಾಟದಲ್ಲಿ ಶೇ 11ರಷ್ಟು ಹೆಚ್ಚಳವಾಗಿದೆ. 31,49,846 ದ್ವಿಚಕ್ರ ವಾಹನಗಳು ಮಾರಾಟವಾಗಿದ್ದು, ಶೇ 52ರಷ್ಟು ಹೆಚ್ಚಳವಾಗಿದೆ. 1,29,517 ತ್ರಿಚಕ್ರ ವಾಹನಗಳ ಮಾರಾಟವಾಗಿದ್ದು, ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 18ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಮುಂದಿನ ಮೂರು ತಿಂಗಳು ದೇಶದಲ್ಲಿ ವಾಹನಗಳ ರಿಟೇಲ್ ಮಾರಾಟದ ಮುನ್ನೋಟವು ಸಕಾರಾತ್ಮಕವಾಗಿಯೇ ಉಳಿದಿದೆ ಎಂದು ತಿಳಿಸಿದೆ.



ವಿಮಾನ ಹಾರಾಟದಲ್ಲಿ ವ್ಯತ್ಯಯ ಉಂಟಾದ್ದರಿಂದ ದೆಹಲಿಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಕಂಡುಬಂತು – ಪಿಟಿಐ ಚಿತ್ರ

ತಾಂತ್ರಿಕ ಲೋಪ: 800ಕ್ಕೂ ಹೆಚ್ಚು ವಿಮಾನಗಳು ವಿಳಂಬ

ನವದೆಹಲಿ (ಪಿಟಿಐ): ವಾಯು ಸಂಚಾರ ನಿಯಂತ್ರಣ ವ್ಯವಸ್ಥೆಯಲ್ಲಿ ತಾಂತ್ರಿಕ ಲೋಪ ಕಂಡುಬಂದಿದ್ದರಿಂದ ಶುಕ್ರವಾರ ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕಾರ್ಯಾಚರಣೆ ನಡೆಸುವ 800ಕ್ಕೂ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಯಿತು.

ಇಂಡಿಗೊ, ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಸ್ಪೈಸ್‌ಜೆಟ್, ಆಕಾಶ್ ಏರ್ ಸೇರಿದಂತೆ ಬಹುತೇಕ ದೇಶೀಯ, ಅಂತರರಾಷ್ಟ್ರೀಯ ವಿಮಾನಗಳ ಹಾರಾಟವು ವಿಳಂಬವಾದ್ದರಿಂದ ಪ್ರಯಾಣಿಕರು ಪರದಾಡಿದರು.

ವಾಯು ಸಂಚಾರ ನಿಯಂತ್ರಣ ದತ್ತಾಂಶವನ್ನು ಬೆಂಬಲಿಸುವ, ಸ್ವಯಂ ಚಾಲಿತ ಸಂದೇಶ ಬದಲಾವಣೆ ವ್ಯವಸ್ಥೆಯಲ್ಲಿ (ಎಎಂಎಸ್‌ಎಸ್) ತಾಂತ್ರಿಕ ಸಮಸ್ಯೆ ಕಂಡುಬಂದಿದ್ದರಿಂದ ವಿಮಾನ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಪ್ರಕಟಣೆಯಲ್ಲಿ ತಿಳಿಸಿದೆ.

ದೆಹಲಿಯ ಇಂದಿರಾ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು ದೇಶದ ಅತಿ ದೊಡ್ಡ ವಿಮಾನ ನಿಲ್ದಾಣವಾಗಿದ್ದು, ಇಲ್ಲಿಂದ ಪ್ರತಿನಿತ್ಯ 1,500ಕ್ಕೂ ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ.

ಚೀನಾ: ಫುಜಿಯಾನ್' ಸೇನೆಗೆ ನಿಯೋಜನೆ

ಬೀಜಿಂಗ್ (ಪಿಟಿಐ): ಚೀನಾವು ಅತ್ಯಾಧುನಿಕ ಯುದ್ಧ ವಿಮಾನ ವಾಹಕ ನೌಕೆ 'ಫುಜಿಯಾನ್' ಅನ್ನು ಸೇನೆಗೆ ನಿಯೋಜಿಸಿದೆ. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಭಾಗಿಯಾಗಿದ್ದರು.

ದಕ್ಷಿಣ ಚೀನಾದ ಹೈನಾನ್ ಪ್ರಾಂತ್ಯದ ಸಾನ್ಯಾ ಬಂದರಿನಲ್ಲಿ ಗೋಪ್ಯವಾಗಿ ಬುಧವಾರ ಕಾರ್ಯಕ್ರಮ ನಡೆಯಿತು ಎಂದು ಸರ್ಕಾರಿ ಸ್ವಾಮ್ಯದ ಷಿನ್‌ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ. 'ಫುಜಿಯಾನ್' ನೌಕೆಯು 'ಎಲೆಕ್ಟ್ರೋಮ್ಯಾಗ್ನೆಟಿಕ್ ಏರ್‌ಕ್ರಾಫ್ಟ್ ಲಾಂಚ್ ಸಿಸ್ಟಮ್' ಅನ್ನು ಹೊಂದಿದೆ. ಅಮೆರಿಕದ ಬಳಿಕ ಇಂಥ ಅತ್ಯಾಧುನಿಕ ನೌಕೆಯನ್ನು ಹೊಂದಿರುವ ಎರಡನೇ ದೇಶ ಚೀನಾ ಆಗಿದೆ. ಅಮೆರಿಕದ 'ಯುಎಸ್‌ಎಸ್ ಜೆರಾಲ್ಡ್ ಆರ್. ಫೋರ್ಡ್' ಯುದ್ಧ ವಿಮಾನ ವಾಹಕ ನೌಕೆಯು ಈ ಅತ್ಯಾಧುನಿಕ ವ್ಯವಸ್ಥೆಯನ್ನು ಹೊಂದಿದೆ.

ಮುಂಬೈ ಧಾರಣೆ (ಶೇಂಗಾ)

07-11-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1400)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,19,600 (1,20,100)
ಬೆಳ್ಳಿ ಕೆ.ಜಿಗೆ	1,48,200 (1,48,100)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹495-686
ದ್ವಿತಳಿ (ಬಿ.ವಿ) ₹491-823

14ರಿಂದ 16ರವರೆಗೆ ಗೋಡಂಬಿ ಶತಮಾನೋತ್ಸವ ಶೃಂಗ

ರಾಜ್ಯದ ಕಚ್ಚಾ ಗೇರು ಆಮದು ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಜಗತ್ತಿನ ಒಟ್ಟು ಗೋಡಂಬಿ ಬಳಕೆಯಲ್ಲಿ ಭಾರತದ ಪ್ರಮಾಣ ಮೂರನೇ ಒಂದರಷ್ಟಿದೆ. ದೇಶದ ಗೋಡಂಬಿ ಸಂಸ್ಕರಣೆಯಲ್ಲಿ ಕರ್ನಾಟಕದ ಪಾಲು ಶೇ 25ರಷ್ಟಿದೆ. ರಾಜ್ಯದ ಕಚ್ಚಾಗೇರು ಆಮದು ಪ್ರಮಾಣ 5 ಲಕ್ಷ ಟನ್‌ಗೆ ತಲುಪಿದೆ' ಎಂದು ಕರ್ನಾಟಕ ಗೇರು ಉತ್ಪಾದಕರ ಸಂಘ ಹೇಳಿದೆ.

'ಮಂಗಳೂರಿನ ಗೇರು ಸಂಸ್ಕರಣಾ ಉದ್ಯಮಕ್ಕೆ (1925ರಲ್ಲಿ ಆರಂಭ) ನೂರು ವರ್ಷ ತುಂಬಿರುವ ಹಿನ್ನೆಲೆಯಲ್ಲಿ 'ಗೋಡಂಬಿ ಶತಮಾನೋತ್ಸವ ಶೃಂಗ'ವನ್ನು ಇದೇ 14ರಿಂದ 16ರವರೆಗೆ ಇಲ್ಲಿ ಆಯೋಜಿಸಲಾಗಿದೆ' ಎಂದು ಸಂಘದ ಅಧ್ಯಕ್ಷ ಎಸ್. ಅನಂತ ಕೃಷ್ಣ ರಾವ್ ಹಾಗೂ ಶೃಂಗದ ಸಂಚಾಲಕ ಕೆ. ಪ್ರಕಾಶ್ ಕಲ್ಬಾವಿ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಗೇರು ಸಂಸ್ಕರಣೆಯಲ್ಲಿ ಹೊಸ ಆವಿಷ್ಕಾರಗಳ ಪರಿಚಯ, ಸಮಸ್ಯೆಗಳ ಬಗ್ಗೆ ಚರ್ಚೆ ಇರಲಿದೆ. ದೇಶದಲ್ಲಿ ಗೋಡಂಬಿ ಸಂಸ್ಕರಣೆಯಲ್ಲಿ ತೊಡಗಿರುವ ಸಾವಿರಕ್ಕೂ ಹೆಚ್ಚು ಉದ್ಯಮಿಗಳು ಪಾಲ್ಗೊಳ್ಳಲಿದ್ದಾರೆ' ಎಂದರು.

'ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ಅದರಲ್ಲೂ ಮಂಗಳೂರು ಗೋಡಂಬಿಗೆ ಬೇಡಿಕೆ ಹೆಚ್ಚಿದೆ. ಆರಂಭದಲ್ಲಿ ವರ್ಷಕ್ಕೆ 50 ಸಾವಿರ ಟನ್ ಇದ್ದ ಕಚ್ಚಾ ಗೇರು ಬೀಜ ಸಂಸ್ಕರಣೆಯ ಪ್ರಮಾಣ ಈಗ ವರ್ಷಕ್ಕೆ 5 ಲಕ್ಷ ಟನ್‌ಗೆ ತಲುಪಿದೆ. ನವಮಂಗಳೂರು ಬಂದರಿಗೆ ಏಳು ತಿಂಗಳಲ್ಲಿ 3.45 ಲಕ್ಷ ಟನ್ ಕಚ್ಚಾಗೇರು ಆಮದಾಗಿದ್ದು, ಒಂದು ವರ್ಷದಲ್ಲಿ ಇದರ ಪ್ರಮಾಣ 5 ಲಕ್ಷ ಟನ್ ಆಗಲಿದೆ' ಎಂದರು.



ಭಾರತದ ಸಂಸ್ಕರಣಾ ಉದ್ಯಮಕ್ಕೆ 20 ಲಕ್ಷ ಟನ್ ಕಚ್ಚಾ ಗೇರು ಬೀಜ ಬೇಕು. ಆದರೆ, ನಮ್ಮ ದೇಶದಲ್ಲಿ ಬೆಳೆಯುವುದು ಸರಾಸರಿ 5 ಲಕ್ಷ ಟನ್ ಮಾತ್ರ. ನಮಗೆ ಬೇಕಿರುವ ಕಚ್ಚಾ ಗೇರು ಬೀಜಗಳ ಪೈಕಿ ಶೇ 25ರಷ್ಟು ಮಾತ್ರ ದೇಶೀಯವಾಗಿ ಬೆಳೆಯಲಾಗುತ್ತಿದೆ. ಶೇ 75ರಷ್ಟು ಹೊರದೇಶಗಳನ್ನೇ ಅವಲಂಬಿಸಿದ್ದೇವೆ. ಕರ್ನಾಟಕದಲ್ಲಿ ಕಚ್ಚಾ ಗೇರು ಬೆಳೆಯುವ ಪ್ರಮಾಣ 50 ಸಾವಿರ ಟನ್‌ನಷ್ಟು ಮಾತ್ರ. ರಾಜ್ಯದ 26 ಜಿಲ್ಲೆಗಳಲ್ಲಿ ಗೇರು ಕೃಷಿ ಇದ್ದು, ಇದಕ್ಕೆ ಇನ್ನಷ್ಟು ಉತ್ತೇಜನ ನೀಡಬೇಕು. ಗೇರು ಹಣ್ಣಿನಿಂದ ಕಚ್ಚಾ ಗೇರು ಬೀಜ ಹೊರ ತೆಗೆದ ನಂತರ, ಆ ಹಣ್ಣು (ಹಣ್ಣಿನ ಶೇ 80ರಷ್ಟು ಭಾಗ) ಈಗ ವ್ಯರ್ಥವಾಗುತ್ತಿದೆ. ಅದರಿಂದ ಉಪ ಉತ್ಪನ್ನ ತಯಾರಿಸಿ ಈ ಬೆಳೆಯನ್ನು ಲಾಭದಾಯಕವಾಗಿಸಬೇಕಿದೆ ಎಂದರು.

ದೇಶೀಯ ಮಾರುಕಟ್ಟೆಯಲ್ಲಿ ಬೇಡಿಕೆ ಮತ್ತು ದರ ಹೆಚ್ಚಾಗಿದೆ. ಹೀಗಾಗಿ ನಮ್ಮ ದೇಶದ ಗೋಡಂಬಿ ರಫ್ತು ಪ್ರಮಾಣ ಕೇವಲ 50 ಸಾವಿರ ಟನ್‌ನಷ್ಟು ಮಾತ್ರ ಇದೆ ಎಂದು ಹೇಳಿದರು.

ರಾಜ್ಯದ ಕರಾವಳಿಯಲ್ಲಿ ಅಂದಾಜು 400 ಗೋಡಂಬಿ ಸಂಸ್ಕರಣಾ ಘಟಕಗಳು ಇದ್ದವು. ಈಗ 250 ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಯಾಂತ್ರೀಕರಣಕ್ಕೆ ಒಗ್ಗಿಕೊಳ್ಳದಿರುವುದು ಮತ್ತಿತರ ಕಾರಣ ಕೆಲ ಘಟಕಗಳು ಮುಚ್ಚಿವೆ. ಘಟಕಗಳು ಕಡಿಮೆಯಾದರೂ, ಗೋಡಂಬಿ ಸಂಸ್ಕರಣೆಯ ಪ್ರಮಾಣ ಹೆಚ್ಚುತ್ತಲೇ ಇದೆ ಎಂದು ಅವರು ಹೇಳಿದರು.

ಸಂಘ ಉಪಾಧ್ಯಕ್ಷ ಎಂ. ತುಕಾರಾಮ ಪ್ರಭು, ಕೋಶಾಧಿಕಾರಿ ಗಣೇಶ ಕಾಮತ್, ಕಾರ್ಯದರ್ಶಿ ಅಮಿತ್ ಪೈ ಪತ್ರಿಕಾಗೋಷ್ಠಿಯಲ್ಲಿದ್ದರು.

ಮಸ್ಕ್‌ಗೆ ₹88 ಲಕ್ಷ ಕೋಟಿ ಪ್ಯಾಕೇಜ್

ನ್ಯೂಯಾರ್ಕ್ (ಎಎಫ್‌ಪಿ): ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್ ಅವರಿಗೆ 1 ಟ್ರಿಲಿಯನ್ ಡಾಲರ್ (₹88 ಲಕ್ಷ ಕೋಟಿ) ಸ್ಟಾಕ್ ಪರಿಹಾರ ಪ್ಯಾಕೇಜ್ ನೀಡುವ ಪ್ರಸ್ತಾವಕ್ಕೆ ಕಂಪನಿಯ ಷೇರುದಾರರು ಬಹುಮತದ ಮೂಲಕ ಒಪ್ಪಿಗೆ ನೀಡಿದ್ದಾರೆ.

ಈ ಪ್ಯಾಕೇಜ್ ಕಾರ್ಪೊರೇಟ್ ಇತಿಹಾಸದಲ್ಲಿಯೇ ದೊಡ್ಡದು ಎನ್ನಲಾಗಿದೆ. ಈ ಪ್ರಸ್ತಾವಕ್ಕೆ ಶೇ 75ರಷ್ಟು ಷೇರುದಾರರು ಅನುಮೋದನೆ ನೀಡಿದ್ದಾರೆ ಎಂದು ಕಂಪನಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ರೊಬೊಟಿಕ್ಸ್‌ನಂತಹ ತಂತ್ರಜ್ಞಾನಗಳಲ್ಲಿ ಟೆಸ್ಲಾವನ್ನು ಮುನ್ನಡೆಸಲು ಮಸ್ಕ್ ಅವರ ಸೇವೆಯನ್ನು ಖಾತರಿಪಡಿಸಿಕೊಳ್ಳುವ ಉದ್ದೇಶದಿಂದ ಈ ಪ್ಯಾಕೇಜ್‌ಗೆ ಒಪ್ಪಿಗೆ ನೀಡಲಾಗಿದೆ.



ಇಲಾನ್ ಮಸ್ಕ್

ಕಂಪನಿಯಲ್ಲಿ ಮಸ್ಕ್ ಅವರನ್ನು ಕನಿಷ್ಠ ಏಳೂವರೆ ವರ್ಷ ಉಳಿಸಿಕೊಳ್ಳುವ ಉದ್ದೇಶವನ್ನು ಈ ಪ್ಯಾಕೇಜ್ ಹೊಂದಿದೆ. ಇದು ಜಾರಿಯಾದರೆ ಪ್ರಸ್ತುತ ಕಂಪನಿಯಲ್ಲಿ ಶೇ 12ರಷ್ಟಿರುವ ಮಸ್ಕ್ ಪಾಲು ಶೇ 25ಕ್ಕಿಂತ ಹೆಚ್ಚಾಗಲಿದೆ.

ಈ ಪ್ರಸ್ತಾವವನ್ನು ಬೆಂಬಲಿಸುವಂತೆ ಟೆಸ್ಲಾ ಅಧ್ಯಕ್ಷ ರಾಬಿನ್ ಡೆನ್ಹೋಮ್ ಅವರು ಷೇರುದಾರರನ್ನು ಒತ್ತಾಯಿಸಿದ್ದರು. ಮಸ್ಕ್ ಅವರನ್ನು ಉಳಿಸಿಕೊಳ್ಳುವುದು ಟೆಸ್ಲಾದ ಭವಿಷ್ಯಕ್ಕೆ ಅತ್ಯಗತ್ಯ ಎಂದು ವಾದಿಸಿದ್ದರು. ಅವರು ನಿರ್ಗಮಿಸಿದರೆ ಕಂಪನಿಯ ಷೇರುಗಳು ಕುಸಿಯಬಹುದು ಎಂದು ಎಚ್ಚರಿಸಿದ್ದರು.

ಈ ಪೂರ್ಣ ವೇತನ ಪ್ಯಾಕೇಜ್ ಪಡೆಯಲು ಮಸ್ಕ್, ಮಾರುಕಟ್ಟೆ ಬಂಡವಾಳೀಕರಣಕ್ಕೆ ಸಂಬಂಧಿಸಿದ 12 ಗುರಿಗಳನ್ನು ತಲುಪಬೇಕು. ಟೆಸ್ಲಾದ ಮಾರುಕಟ್ಟೆ ಮೌಲ್ಯ 2 ಟ್ರಿಲಿಯನ್ ಡಾಲರ್ (₹177 ಲಕ್ಷ ಕೋಟಿ) ತಲುಪಿದಾಗ ಮೊದಲ ಕಂತು ಲಭ್ಯವಾಗಲಿದೆ. ಪ್ರಸ್ತುತ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ 1.5 ಟ್ರಿಲಿಯನ್ ಡಾಲರ್ (₹133 ಲಕ್ಷ ಕೋಟಿ) ಇದೆ. ಇದು 8.5 ಟ್ರಿಲಿಯನ್ ಡಾಲರ್‌ಗೆ (₹753 ಲಕ್ಷ ಕೋಟಿ) ಹೆಚ್ಚಳವಾಗಬೇಕಿದೆ. 2 ಕೋಟಿ ಟೆಸ್ಲಾ ವಾಹನಗಳ ಮಾರಾಟ ಮಾಡುವುದು ಸಹ ಈ ಗುರಿಗಳಲ್ಲಿ ಒಂದಾಗಿದೆ. ಈ ಗುರಿಗಳನ್ನು ತಲುಪಿದರೆ ಒಂದು ಟ್ರಿಲಿಯನ್ ಡಾಲರ್ ಪಡೆಯಲು ಅರ್ಹರಾಗಿರುತ್ತಾರೆ. 'ನನ್ನನ್ನು ಬೆಂಬಲಿಸಿದ ಎಲ್ಲ ಷೇರುದಾರರಿಗೆ ಧನ್ಯವಾದ ಅರ್ಪಿಸಲು ಬಯಸುತ್ತೇನೆ' ಎಂದು ಮಸ್ಕ್ ಹೇಳಿದ್ದಾರೆ.

ಕಾರಿಗೆ ದಿಢೀರ್ ಬೆಂಕಿ: ಮಹಿಳೆ, ಮಗು ರಕ್ಷಣೆ

ನವದೆಹಲಿ (ಪಿಟಿಐ): ಆಗ್ನೇಯ ದೆಹಲಿಯ ಗೋವಿಂದಪುರಿ ಪ್ರದೇಶದಲ್ಲಿ ಹೊತ್ತಿ ಉರಿಯುತ್ತಿದ್ದ ಕಾರಿನಿಂದ ತಾಯಿ ಮತ್ತು ಮಗುವನ್ನು ರಕ್ಷಿಸಲಾಯಿತು ಎಂದು ಪೊಲೀಸರು ಶುಕ್ರವಾರ ಹೇಳಿದ್ದಾರೆ.

ಘಟನೆಯು ಗುರುವಾರ ಸಂಜೆ 5:30ರ ಸುಮಾರಿಗೆ ನಡೆದಿದೆ. ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿತು. ಕಾರಿನೊಳಗೆ 38 ವರ್ಷದ ಮಹಿಳೆ ಮತ್ತು ಅವರ ಐದು ವರ್ಷದ ಮಗು ಸಿಲುಕಿದ್ದರು.

ವಿಷಯ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಬಂದು, ಮಹಿಳೆ ಮತ್ತು ಮಗುವನ್ನು ರಕ್ಷಿಸಿದ್ದಾರೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಆಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

97 ಜೆಟ್ ಎಂಜಿನ್ ಖರೀದಿಗೆ ಒಪ್ಪಂದ

ನವದೆಹಲಿ (ಪಿಟಿಐ): ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ತನ್ನ ತೇಜಸ್ ಲಘು ಯುದ್ಧ ವಿಮಾನ ಕಾರ್ಯಕ್ರಮಕ್ಕಾಗಿ 97 ಜೆಟ್ ಎಂಜಿನ್‌ಗಳನ್ನು ಖರೀದಿಸಲು ಜಿಇ ಏರೋಸ್ಪೇಸ್ ಜತೆ ಒಪ್ಪಂದ ಮಾಡಿಕೊಂಡಿದೆ.

ಒಪ್ಪಂದದ ಪ್ರಕಾರ, ಎಫ್404–ಜಿಇ–ಐಎನ್20 ಎಂಜಿನ್‌ಗಳ ವಿತರಣೆಯು 2027ರಿಂದ ಪ್ರಾರಂಭವಾಗಲಿದ್ದು, 2032ರ ವೇಳೆಗೆ ಪೂರೈಕೆ ಪೂರ್ಣಗೊಳಿಸಬೇಕಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

97 ಲಘು ಯುದ್ಧ ವಿಮಾನ ಎಂಕೆ1ಎ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಎಂಜಿನ್‌ಗಳು ಹಾಗೂ 'ಪೂರಕ ಪ್ಯಾಕೇಜ್' ಖರೀದಿಗೆ ಜನರಲ್ ಎಲೆಕ್ಟ್ರಿಕ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಭಾರತೀಯ ವಾಯುಪಡೆಗೆ 97 ತೇಜಸ್ ಎಂಕೆ–1ಎ ಲಘು ಯುದ್ಧ ವಿಮಾನಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯವು ಎಚ್‌ಎಎಲ್‌ನೊಂದಿಗೆ ಸೆಪ್ಟೆಂಬರ್‌ನಲ್ಲಿ ₹62,370 ಕೋಟಿ ಮೊತ್ತದ ಒಪ್ಪಂದ ಮಾಡಿಕೊಂಡಿತ್ತು.

ಸುದ್ದಿ 2 ನಿಮಿಷ

ಹಣಕಾಸು ವಲಯದಲ್ಲಿ ಸುಧಾರಣೆ ಅಗತ್ಯ: ವಿಶ್ವಬ್ಯಾಂಕ್

ನವದೆಹಲಿ (ಪಿಟಿಐ): 2047ರ ವೇಳೆಗೆ ಭಾರತವು 30 ಟ್ರಿಲಿಯನ್ ಡಾಲರ್ (₹2,660 ಲಕ್ಷ ಕೋಟಿ) ಆರ್ಥಿಕತೆಯಾಗಲು ಹಣಕಾಸು ವಲಯದಲ್ಲಿ ಹೆಚ್ಚಿನ ಸುಧಾರಣೆಗಳು ಮತ್ತು ಖಾಸಗಿ ಬಂಡವಾಳಕ್ಕೆ ಉತ್ತೇಜನ ನೀಡುವ ಅಗತ್ಯವಿದೆ ಎಂದು ವಿಶ್ವಬ್ಯಾಂಕ್ ವರದಿ ತಿಳಿಸಿದೆ.

ಭಾರತದ 'ವಿಶ್ವ ದರ್ಜೆ'ಯ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಮತ್ತು ಸರ್ಕಾರದ ಕಾರ್ಯಕ್ರಮಗಳಿಂದ ಪುರುಷರು ಮತ್ತು ಮಹಿಳೆಯರಿಗೆ ಹಣಕಾಸು ಸೇವೆಗಳು ಸುಲಭವಾಗಿ ಲಭ್ಯವಾಗುವಂತಾಗಿವೆ ಎಂದು ವಿಶ್ವ ಬ್ಯಾಂಕ್‌ನ ಹಣಕಾಸು ವಲಯದ ಮೌಲ್ಯಮಾಪನ ವರದಿ ಶುಕ್ರವಾರ ತಿಳಿಸಿದೆ.

ವಿಶೇಷವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣ ಹೆಚ್ಚಳವಾಗಬೇಕು. ವ್ಯಕ್ತಿಗಳು ಮತ್ತು ಎಂಎಸ್‌ಎಂಇಗಳಿಗೆ ಹೆಚ್ಚಿನ ಹಣಕಾಸು ಸೌಲಭ್ಯ ಲಭ್ಯವಾಗುವಂತೆ ಮಾಡಬೇಕು. ಸಹಕಾರಿ ಬ್ಯಾಂಕ್‌ಗಳ ಮೇಲೆ ಪ್ರಾಧಿಕಾರದ ನಿಯಂತ್ರಣ ಅಗತ್ಯ ಎಂದು ಸಲಹೆ ನೀಡಿದೆ.

ಹಣಕಾಸು ವಲಯದ ಮೌಲ್ಯಮಾಪನ ಕಾರ್ಯಕ್ರಮವು (ಎಫ್‌ಎಸ್‌ಎಪಿ) ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕ್‌ನ ಜಂಟಿ ಕಾರ್ಯಕ್ರಮವಾಗಿದೆ. ಇದು ದೇಶದ ಹಣಕಾಸು ವಲಯದ ಸಮಗ್ರ ಮತ್ತು ಆಳವಾದ ವಿಶ್ಲೇಷಣೆಯನ್ನು ಮಾಡುತ್ತದೆ.

'ಜಿಡಿಪಿ: ಶೇ 6.8ರಷ್ಟು ನಿರೀಕ್ಷೆ'

ನವದೆಹಲಿ (ಪಿಟಿಐ): 'ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ಕ್ಕಿಂತಲೂ ಹೆಚ್ಚಾಗುವ ವಿಶ್ವಾಸವಿದೆ' ಎಂದು ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಜಿಎಸ್‌ಟಿ ಇಳಿಕೆ ಮತ್ತು ಆದಾಯ ತೆರಿಗೆ ವಿನಾಯಿತಿಯಿಂದ ಜನರು ಹೆಚ್ಚು ಹಣ ವ್ಯಯಿಸಲು ಉತ್ತೇಜನ ನೀಡಿದೆ ಎಂದು ಹೇಳಿದ್ದಾರೆ.

ಆರ್ಥಿಕ ಸಮೀಕ್ಷೆ ವರದಿ ಸಹ ಜಿಡಿಪಿ ಬೆಳವಣಿಗೆ ಶೇ 6.3ರಿಂದ ಶೇ 6.8ರಷ್ಟಾಗಲಿದೆ ಎಂದು ಅಂದಾಜಿಸಿದೆ. ಅಮೆರಿಕ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವು ಬೆಳವಣಿಗೆಗೆ ಉತ್ತೇಜನ ನೀಡಲಿದೆ. ಈ ಒಪ್ಪಂದ ಶೀಘ್ರ ಆಗಲಿದೆ ಎಂದು ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.8ರಷ್ಟಾಗಿತ್ತು. ಕೃಷಿ ವಲಯ ಮತ್ತು ಸೇವಾ ವಲಯದಿಂದ ಈ ಪ್ರಗತಿ ಸಾಧಿಸಿತ್ತು.



ಅಸ್ಸಾಂನ ಮೋರಿಗಾಂವ್ ಜಿಲ್ಲೆಯ ಜಾಗಿರೋಡ್‌ನಲ್ಲಿರುವ ಟಾಟಾ ಎಲೆಕ್ಟ್ರಾನಿಕ್ಸ್‌ನ ಸೆಮಿಕಂಡಕ್ಟರ್ ಜೋಡಣೆ–ಪರಿಶೀಲನಾ ಘಟಕಕ್ಕೆ (ಒಎಸ್‌ಎಟಿ) ಕೇಂದ್ರ ಹಣಕಾಸು ನಿರ್ಮಲಾ ಸೀತಾರಾಮನ್ ಶುಕ್ರವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಬೆಂಗಳೂರು– ಎರ್ನಾಕುಳಂ 'ವಂದೇ ಭಾರತ್‌ಗೆ' ಹಸಿರು ನಿಶಾನೆ ಇಂದು

ಕೊಚ್ಚಿ (ಪಿಟಿಐ): ಬೆಂಗಳೂರು– ಎರ್ನಾಕುಳಂ ನಡುವೆ ವಂದೇ ಭಾರತ್ ರೈಲು ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಬೆಳಿಗ್ಗೆ 7 ಗಂಟೆಗೆ ವರ್ಚುವಲ್ ಆಗಿ ಹಸಿರು ನಿಶಾನೆ ತೋರಲಿದ್ದಾರೆ.

ಎರ್ನಾಕುಲಂ ಜಂಕ್ಷನ್‌ನಿಂದ ಹೊರಡುವ ರೈಲು ತ್ರಿಶ್ಶೂರ್, ಪಾಲಕ್ಕಾಡ್, ಕೊಯಮತ್ತೂರು, ತಿರುಪ್ಪೂರು, ಈರೋಡ್, ಸೇಲಂ, ಕೃಷ್ಣರಾಜಪುರಂ ನಿಲ್ದಾಣಗಳ ಮೂಲಕ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ತಲುಪಲಿದೆ. ಕೇರಳ–ತಮಿಳುನಾಡು–ಕರ್ನಾಟಕದಲ್ಲಿ ಸಂಚರಿಸುವ ಈ ರೈಲು ಎಂಟು ಕೋಚ್‌ಗಳನ್ನು ಒಳಗೊಂಡಿರಲಿದೆ.

ಹುಲಿ ದಾಳಿ: 15 ದಿನದಲ್ಲಿ 3ನೇ ಬಲಿ

ಒಂದನೇ ಪುಟದಿಂದ...

'ಪದೇ ಪದೇ ಹುಲಿ ದಾಳಿ ನಡೆಸುತ್ತಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಗ್ರಾಮದಲ್ಲಿ ಹುಲಿ ಹೆಜ್ಜೆ ಇರುವ ಬಗ್ಗೆ ತಿಳಿಸಿದರೂ ಬೋನನ್ನೂ ಇಟ್ಟಿಲ್ಲ ಎಂದು ಆಕ್ರೋಶದಲ್ಲಿದ್ದರು. ಆ ವೇಳೆ ಬಂದ ಅಧಿಕಾರಿ ಮೇಲೆ ಹಲ್ಲೆ ನಡೆಸಿದ್ದಾರೆ. ಅವರನ್ನು ರಕ್ಷಿಸಿದ ಪೊಲೀಸರು, ಜೀಪ್‌ನಲ್ಲಿ ಕರೆದೊಯ್ದರು' ಎಂದು ಮೂಲಗಳು ತಿಳಿಸಿವೆ.

ಸ್ಥಳಕ್ಕೆ ಎಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಮೃತರ ಕುಟುಂಬದವರಿಗೆ ₹ 20 ಲಕ್ಷದ ನೆರವಿನ ಚೆಕ್ ವಿತರಿಸಿದರು.

ಹುಲಿ ದಾಳಿಯಿಂದ 3ನೇ ಸಾವು: ಸರಗೂರು ತಾಲ್ಲೂಕಿನಲ್ಲಿ ಹುಲಿ ದಾಳಿಯಿಂದ ಹಿಂದೆ ಬೆಣ್ಣೆಗೆರೆಯ ರಾಜಶೇಖರ್, ಕೂಡಗಿ ಗ್ರಾಮದ ರೈತ ದೊಡ್ಡನಿಂಗಯ್ಯ ಮೃತಪಟ್ಟಿದ್ದರು. ಬಡಗಲಪುರದ ಮಹದೇವ್ ಹುಲಿ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. 'ಹುಲಿ ದಾಳಿ ತಡೆಯಲು ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ರೈತರು ಪ್ರತಿಭಟನೆಯನ್ನೂ ನಡೆಸಿದ್ದರು.

ಸಫಾರಿ, ಚಾರಣ ಬಂದ್


ಒಂದನೇ ಪುಟದಿಂದ...

'ಈಚೆಗೆ ನಡೆಸಿದ ಸಭೆಯಲ್ಲಿ, ಹುಲಿ ಸೆರೆಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸುವ ಜೊತೆಗೆ ಸಫಾರಿ ಬಂದ್ ಮಾಡುವ ಎಚ್ಚರಿಕೆಯನ್ನೂ ನೀಡಿದ್ದೆ. ಆದರೂ ಮತ್ತೊಂದು ದಾರುಣ ಘಟನೆ ನಡೆದಿರುವುದು ಆಘಾತ ಮೂಡಿಸಿದೆ' ಎಂದು ಹೇಳಿದ್ದಾರೆ.

'ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಮತ್ತು ಹುಲಿ ಯೋಜನೆಯ ನಿರ್ದೇಶಕರು ಸ್ಥಳದಲ್ಲೇ ಮೊಕ್ಕಾಂ ಹೂಡಿ, ಪದೆ ಪದೇ ದಾಳಿ ಮಾಡುತ್ತಿರುವ ಹುಲಿ ಸೆರೆಗೆ ಕ್ರಮ ಕೈಗೊಳ್ಳಬೇಕು' ಎಂದು ಸಚಿವರು ತಾಕೀತು ಮಾಡಿದ್ದಾರೆ. ಅವರ ಸೂಚನೆ ಬೆನ್ನಲ್ಲೇ ಸಫಾರಿ ಕೇಂದ್ರವನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

ಯುವ ಉದ್ಯಮಿ ಅಭಿಷೇಕ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಅಭಿಷೇಕ್

ಮೂಲ್ಕಿ (ದಕ್ಷಿಣ ಕನ್ನಡ): ಮಂಗಳೂರು ವಾಮಂಜೂರಿನ ತಿರುವೈಲ್ ಗುತ್ತು ಕುಟುಂಬದ ನವೀನ್‌ಚಂದ್ರ ಆಳ್ವ ಅವರ ಪುತ್ರ, ಉದ್ಯಮಿ ಅಭಿಷೇಕ್ ಆಳ್ವ (25) ಶಾಂಭವಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗುರುವಾರ ರಾತ್ರಿಯಿಂದ ನಾಪತ್ತೆಯಾಗಿದ್ದರು. ಶುಕ್ರವಾರ ಶವ ಪತ್ತೆಯಾಗಿದೆ.

ತಂದೆಯ ಜೊತೆ ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ಅಭಿಷೇಕ್ ಗುರುವಾರ ಮುಂಜಾನೆ 3.30ರ ವೇಳೆ ಮಂಗಳೂರಿನಿಂದ ಕಾರಿನಲ್ಲಿ ಹೊರಟಿದ್ದರು. ದಕ್ಷಿಣ ಕನ್ನಡ–ಉಡುಪಿ ಜಿಲ್ಲೆಯ ಗಡಿಭಾಗದಲ್ಲಿರುವ ಬಪ್ಪನಾಡು ಸೇತುವೆ ಬಳಿ ಅವರ ಕಾರು ಪತ್ತೆಯಾಗಿದೆ. ಬಪ್ಪನಾಡು ಚೆಕ್ ಪೋಸ್ಟ್ ಮೂಲಕ ಅವರ ಕಾರು ಹಾದುಹೋದ ದೃಶ್ಯ ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ರಾತ್ರಿಯಾದರೂ ಮಗ ಮನೆಗೆ ಬಾರದಿದ್ದಾಗ ತಂದೆ ನವೀನ್ ಚಂದ್ರ ಆಳ್ವ ಪಡುಬಿದ್ರಿ ಠಾಣೆಗೆ ದೂರು ನೀಡಿದ್ದರು. ಗುರುವಾರ ಮಧ್ಯರಾತ್ರಿ ವರೆಗೂ ಶಾಂಭವಿ ನದಿಯಲ್ಲಿ ಶೋಧ ನಡೆಸಲಾಗಿತ್ತು.

ಶುಕ್ರವಾರ ಬೆಳಿಗ್ಗೆ ಹುಡುಕಿದಾಗ ಮೂಲ್ಕಿ ಠಾಣೆ ವ್ಯಾಪ್ತಿಯ ಚಂದ್ರ ಶಾನುಭಾಗರ ಕುದ್ರು ಬಳಿ ಅಭಿಷೇಕ್ ಮೃತದೇಹ ಪತ್ತೆಯಾಯಿತು. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಮೂಲ್ಕಿ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ನಾರಾಯಣ ಗುರು ಸ್ಮರಣೆ ಶ್ರೀಗುರು ಸಮಾವೇಶ ಫೆ.21ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬ್ರಹ್ಮಶ್ರೀ ನಾರಾಯಣಗುರುಗಳು ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ ದೇವರಮೂರ್ತಿ ಪ್ರತಿಷ್ಠಾಪಿಸಿದ ಸ್ಮರಣಾರ್ಥ 2026ರ ಫೆ.21ರಂದು ಮಂಗಳೂರಿನಲ್ಲಿ 'ಶ್ರೀಗುರು ಸಮಾವೇಶ' ಏರ್ಪಡಿಸಲಾಗುವುದು ಎಂದು ಕುದ್ರೋಳಿ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾರಾಯಣ ಗುರುಗಳು 1912ರ ಫೆಬ್ರುವರಿ 21ರಂದು ಮೂರ್ತಿ ಪ್ರತಿಷ್ಠಾಪಿಸಿ ಧಾರ್ಮಿಕ ಕ್ರಾಂತಿಗೆ ನಾಂದಿ ಹಾಡಿದ್ದರು. ಆ ಕ್ರಾಂತಿಕಾರಿ ನಿರ್ಧಾರದಿಂದ ಇಂದು ಹಿಂದುಳಿದ ವರ್ಗದ ಜನರು ಸಮಾಜದ ಮುಖ್ಯವಾಹಿನಿಗೆ ಬರುವಂತಾಗಿದೆ. ಇದನ್ನು ಸ್ಮರಿಸುವುದು ಸಮಾವೇಶದ ಉದ್ದೇಶ. ನಾರಾಯಣ ಗುರುಗಳ ಅನುಯಾಯಿಗಳು, ಹಿಂದುಳಿದ ವರ್ಗಗಳ ನಾಯಕರು ಸೇರಿದಂತೆ ಒಂದು ಲಕ್ಷಕ್ಕೂ ಅಧಿಕ ಜನರು ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ಕಂಕನಾಡಿ ಗರಡಿ ಕ್ಷೇತ್ರ, ಗೆಜ್ಜೆಗಿರಿ ಕ್ಷೇತ್ರ, ಕಟಪಾಡಿ ವಿಶ್ವನಾಥ ದೇವಸ್ಥಾನ, ರಾಷ್ಟ್ರೀಯ ಬಿಲ್ಲವರ ಮಹಾಮಂಡಲ, ಅಖಿಲ ಭಾರತ ಬಿಲ್ಲವರ ಯೂನಿಯನ್, ಗೋಕರ್ಣನಾಥ ಬ್ಯಾಂಕ್, ಭಾರತ್ ಬ್ಯಾಂಕ್, ಗುರುದೇವ ಬ್ಯಾಂಕ್, ಆತ್ಮಶಕ್ತಿ ಬ್ಯಾಂಕ್, ಮೂರ್ತೆದಾರರ ಸಹಕಾರಿ ಸಂಘ ಹಾಗೂ ವಿವಿಧ ರಾಜ್ಯ, ವಿದೇಶಗಳಲ್ಲಿರುವ ನಾರಾಯಣ ಗುರು ಸಂಘ– ಬಿಲ್ಲವ ಸಂಘಗಳು ಸೇರಿದಂತೆ ಸುಮಾರು 276 ಸಂಘ ಸಂಸ್ಥೆಗಳು ಸಮಾವೇಶದ ನೇತೃತ್ವ ವಹಿಸಲಿವೆ ಎಂದೂ ಅವರು ತಿಳಿಸಿದರು.

ಒಂದು ಜಾತಿಗೆ ಸೀಮಿತಗೊಳಿಸದೆ, ನಾರಾಯಣಗುರುಗಳ ಎಲ್ಲ ಅನುಯಾಯಿಗಳನ್ನು ಸೇರಿಸಿಕೊಂಡು ಈ ಸಮಾವೇಶವನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.

ಪಾಕ್ ರಹಸ್ಯ ಅಣ್ವಸ್ತ್ರ ಚಟುವಟಿಕೆ: ಭಾರತ ನಿಗಾ

ನವದೆಹಲಿ (ಪಿಟಿಐ): ಪಾಕಿಸ್ತಾನವು ಅಣ್ವಸ್ತ್ರಗಳ ಪರೀಕ್ಷೆ ನಡೆಸುತ್ತಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿರುವ ಭಾರತ, 'ಈ ಬಗ್ಗೆ ನಾವು ಗಮನಹರಿಸಿದ್ದೇವೆ' ಎಂದು ಹೇಳಿದೆ.



ರಣಧೀರ್ ಜೈಸ್ವಾಲ್

ಪಾಕಿಸ್ತಾನದ ರಹಸ್ಯ ಅಣ್ವಸ್ತ್ರ ಚಟುವಟಿಕೆಗಳು ದಶಕಗಳಿಂದಲೂ ಅದು ನಡೆಸುತ್ತಿರುವ ಕಳ್ಳಸಾಗಣೆ ಮತ್ತು ರಫ್ತು ನಿಯಂತ್ರಿತ ಉಲ್ಲಂಘನೆಯ ಕೇಂದ್ರಿತ ಚಟುವಟಿಕೆಗಳಾಗಿವೆ ಎಂದು ವಿದೇಶಾಂಗ ವ್ಯವಹಾರಗಳ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್ ಅವರು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಳೆದ ವಾರ ಅಣ್ವಸ್ತ್ರಗಳ ಪರೀಕ್ಷೆ ನಡೆಸುತ್ತಿರುವ ದೇಶಗಳನ್ನು ಉಲ್ಲೇಖಿಸಿದ್ದ ಟ್ರಂಪ್, ಪಾಕಿಸ್ತಾನದ ಹೆಸರನ್ನು ಪ್ರಸ್ತಾಪಿಸಿದ್ದರು. ಮೂರು ದಶಕಗಳ ನಂತರ ಅಮೆರಿಕ ಸರ್ಕಾರ ಅಣ್ವಸ್ತ್ರ ಪರೀಕ್ಷೆಯನ್ನು ಪುನರಾರಂಭಿಸುವ ಯೋಜನೆಯನ್ನು ಸಮರ್ಥಿಸಿಕೊಳ್ಳುವ ಭಾಗವಾಗಿ ಟ್ರಂಪ್ ಈ ಹೇಳಿಕೆ ನೀಡಿದ್ದರು.

ಮಾಧ್ಯಮ ಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಜೈಸ್ವಾಲ್ ಅವರು, 'ಗೋಪ್ಯ ಮತ್ತು ಅಕ್ರಮ ಅಣ್ವಸ್ತ್ರ ಚಟುವಟಿಕೆಗಳು ಪಾಕಿಸ್ತಾನದ ಇತಿಹಾಸದ ಭಾಗವಾಗಿವೆ. ಕಳ್ಳಸಾಗಣೆ, ರಫ್ತು ನಿಯಂತ್ರಿತ ಉಲ್ಲಂಘನೆ ಮತ್ತು ರಹಸ್ಯ ಪಾಲುದಾರಿಕೆಯ ಕೇಂದ್ರಿತವಾಗಿ ಅವು ನಡೆಯುತ್ತಿವೆ. ಪಾಕಿಸ್ತಾನದ ರಹಸ್ಯ ಚಟುವಟಿಕೆಗಳ ಬಗ್ಗೆ ಭಾರತ ನಿರಂತರವಾಗಿ ಅಂತರರಾಷ್ಟ್ರೀಯ ಸಮುದಾಯದ ಗಮನ ಸೆಳೆಯುತ್ತಲೇ ಬಂದಿದೆ. ಹೀಗಾಗಿ ಟ್ರಂಪ್ ಅವರ ಹೇಳಿಕೆ ಬಗ್ಗೆಯೂ ಗಮನ ಹರಿಸಿದ್ದೇವೆ' ಎಂದು ಹೇಳಿದರು.

ಕ್ವಾಡ್ ಶೃಂಗಸಭೆ: ಆಸ್ಟ್ರೇಲಿಯಾ, ಜಪಾನ್, ಅಮೆರಿಕವನ್ನು ಆಹ್ವಾನಿಸಲಿರುವ ಭಾರತ

ಮುಂದಿನ ವರ್ಷ ಭಾರತ ಭೇಟಿ: ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ 'ಮಹಾನ್ ವ್ಯಕ್ತಿ' ಹಾಗೂ 'ಸ್ನೇಹಿತ' ಎಂದು ಕರೆದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಮುಂದಿನ ವರ್ಷ ಭಾರತಕ್ಕೆ ಭೇಟಿ ನೀಡಲು ನಿರ್ಧರಿಸಿದ್ದೇನೆ' ಎಂದು ತಿಳಿಸಿದರು.



ಡೊನಾಲ್ಡ್ ಟ್ರಂಪ್

'ಅವರು (ಮೋದಿ) ನನ್ನ ಸ್ನೇಹಿತ. ನಾವಿಬ್ಬರೂ ಮಾತನಾಡುತ್ತಿರುತ್ತೇವೆ. ನಾನು ಭಾರತಕ್ಕೆ ಭೇಟಿ ನೀಡಬೇಕು ಎಂದು ಅವರು ಬಯಸುತ್ತಿದ್ದಾರೆ. ಪ್ರಧಾನಿ ಮೋದಿಯನ್ನು ಭೇಟಿಯಾಗಲು ಅಲ್ಲಿಗೆ ಹೋಗುತ್ತಿದ್ದೇನೆ' ಎಂದು ತಮ್ಮ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಮುಂದಿನ ವರ್ಷ ಭಾರತಕ್ಕೆ ಭೇಟಿ ನೀಡಲಿದ್ದೀರಾ' ಎಂಬ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದರು.

ಮುಂದಿನ ಕ್ವಾಡ್ ಶೃಂಗಸಭೆ ನವದೆಹಲಿಯಲ್ಲಿ ನಡೆಯಲಿದೆ. ಇದರಲ್ಲಿ ಆಸ್ಟ್ರೇಲಿಯಾ, ಜಪಾನ್, ಅಮೆರಿಕವನ್ನು ಭಾರತ ಆಹ್ವಾನಿಸಲಿದೆ. ಶೃಂಗಸಭೆಯ ದಿನಾಂಕ ಇನ್ನಷ್ಟೇ ನಿಗದಿಯಾಗಬೇಕಿದೆ.

ತೈಲ ಖರೀದಿ ಸ್ಥಗಿತ: 'ನಿಜಕ್ಕೂ ಗ್ರೇಟ್. ರಷ್ಯಾದಿಂದ ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಿದ್ದ ಕಚ್ಚಾತೈಲವನ್ನು ಮೋದಿ ಬಹುತೇಕ ನಿಲ್ಲಿಸಿದ್ದಾರೆ' ಎಂದು ಟ್ರಂಪ್ ಪುನರುಚ್ಚರಿಸಿದರು.

ವಾರ್ಷಿಕ ಸಭೆಯಲ್ಲಿ ಭಾಗವಹಿಸಲಿರುವ ಮಮ್ದಾನಿ

ಸ್ಯಾನ್ ಯುವಾನ್ (ಎಪಿ): ನ್ಯೂಯಾರ್ಕ್‌ನ ನೂತನ ಮೇಯರ್ ಜೊಹ್ರಾನ್ ಮಮ್ದಾನಿ ಅವರು ಪೋರ್ಟೊ ರಿಕೊದಲ್ಲಿ ನಡೆಯಲಿರುವ ಜನಪ್ರತಿನಿಧಿಗಳ ವಾರ್ಷಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ.



ಮಮ್ದಾನಿ

ಗುರುವಾರವೇ ಅವರ ವಿಜಯೋತ್ಸವ ಪ್ರವಾಸ ಆರಂಭಗೊಂಡಿದೆ. ಪೋರ್ಟೊ ರಿಕೊದ ಸ್ಯಾನ್ ಯುವಾನ್‌ನಲ್ಲಿ ನಡೆಯಲಿರುವ ಸಭೆಯು, ನ್ಯೂಯಾರ್ಕ್‌ನ ರಾಜಕಾರಣಿಗಳು ಮತ್ತು ರಾಜಕೀಯ ಪ್ರಭಾವಿಗಳನ್ನು ಒಂದೇ ವೇದಿಕೆಯಡಿ ತರಲಿದೆ. ರಾಜಕೀಯ ಕಾರ್ಯತಂತ್ರದ ದೃಷ್ಟಿಯಿಂದ ಈ ಸಭೆ ಮಹತ್ವ ಪಡೆದುಕೊಂಡಿದೆ. ಈ ಬಾರಿ ಮಮ್ದಾನಿ ಈ ಸಭೆಯ ಕೇಂದ್ರಬಿಂದು ಆಗಿದ್ದಾರೆ.

'ಸಭೆಯಲ್ಲಿ ಭಾಗವಹಿಸಲು ಸಂತೋಷವಾಗುತ್ತಿದೆ. ನೀವು ಪೋರ್ಟೊ ರಿಕೊವನ್ನು ಹೊರಗಿಟ್ಟು, ನ್ಯೂಯಾರ್ಕ್ ನಗರದ ಕಥೆ ಹೇಳಲು ಸಾಧ್ಯವಿಲ್ಲ' ಎಂದು ಮಮ್ದಾನಿ ಶುಕ್ರವಾರ ಇಲ್ಲಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪರಿವರ್ತನಾ ತಂಡ: ನ್ಯೂಯಾರ್ಕ್ ನಗರದ 'ಪರಿವರ್ತನಾ ತಂಡ'ವನ್ನು ಈ ವಾರ ಪ್ರಕಟಿಸುವುದಾಗಿ ಮಮ್ದಾನಿ ಹೇಳಿದ್ದಾರೆ. ಅನುಭವಿ ಅಧಿಕಾರಿಗಳು ಈ ತಂಡಕ್ಕೆ ಸೇರ್ಪಡೆಗೊಳ್ಳಲಿದ್ದು, ಈ ತಂಡವು, ನಗರ ನಿವಾಸಿಗಳ, ವಿಶೇಷವಾಗಿ ಕಾರ್ಮಿಕರ ಜೀವನ ನಿರ್ವಹಣೆ ವೆಚ್ಚ ಕಡಿತಗೊಳಿಸುವ ಮಮ್ದಾನಿ ಅವರ ಯೋಜನೆಗಳನ್ನು ಜಾರಿಗೆ ತರಲಿದೆ.

ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ತೆರಳುವ ಮುನ್ನ ಮಮ್ದಾನಿ ಅವರು ನ್ಯೂಯಾರ್ಕ್‌ನ ನಿರ್ಗಮಿತ ಮೇಯರ್ ಎರಿಕ್ ಆ್ಯಡಮ್ಸ್ ಅವರೊಂದಿಗೆ ದೂರವಾಣಿಯಲ್ಲಿ ಮಾತುಕತೆ ನಡೆಸಿದರು. ಮಮ್ದಾನಿ ತಂಡಕ್ಕೆ ಸಂಪೂರ್ಣ ಸಹಕಾರ ನೀಡುವ ಭರವಸೆಯನ್ನು ಎರಿಕ್ ನೀಡಿದರು. ನ್ಯೂಯಾರ್ಕ್ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮಮ್ದಾನಿ, ಆ್ಯಂಡ್ರ್ಯೂ ಕೌಮೊ ಮತ್ತು ರಿಪಬ್ಲಿಕನ್ ಅಭ್ಯರ್ಥಿ ಕರ್ಟಿಸ್ ಸ್ಲಿವಾ ಅವರನ್ನು ಸೋಲಿಸಿದ್ದರು.



ಐಶ್ವರ್ಯ ದಿನೇಶ್, ಗಾಂಧಿ.ಎ.ಬಿ, ಅನುಷಾ ಜೈನ್

ಪ್ರೇಮಂ ಮಧುರಂ ಎಂದ ಹೊಸಬರು

ಹೊಸಬರೇ ಸೇರಿಕೊಂಡು ಸಿದ್ಧಪಡಿಸಿರುವ 'ಪ್ರೇಮಂ ಮಧುರಂ' ಎಂಬ ಚಿತ್ರದ ಟ್ರೇಲರ್ ಮತ್ತು ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

ರೂಬಿ ಕ್ರಿಯೇಶನ್ಸ್ ಅಡಿಯಲ್ಲಿ ಅರಗೊಂಡ ಶೇಖರ್ ರೆಡ್ಡಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಗಾಂಧಿ ಎ.ಬಿ ಸಿನಿಮಾಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದು, ಜೊತೆಗೆ ನಾಯಕನಾಗಿಯೂ ಅಭಿನಯಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಗಾಂಧಿ, 'ಹಲವು ನಿರ್ದೇಶಕರ ಬಳಿ ಕೆಲಸ ಕಲಿತು, ಪೂನ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದಿದ್ದೇನೆ. ಸಿನಿಮಾದಲ್ಲಿ ಪ್ರಸಕ್ತ ಯುವಜನತೆಗೆ ಕನೆಕ್ಟ್ ಆಗುವಂತೆ ಸನ್ನಿವೇಶಗಳು ಇವೆ. ಪ್ರತಿಯೊಬ್ಬರ ಬದುಕಲ್ಲಿ ಪ್ರೀತಿ, ಯಶಸ್ಸು ಪಡೆದಿರುತ್ತದೆ ಇಲ್ಲವೇ ಸೋತಿರುತ್ತದೆ. ಅವರೆಲ್ಲರಿಗೂ ಈ ಕಥೆ ಅನ್ವಯವಾಗುತ್ತದೆ. ಹೊಸದಾಗಿ ಏನನ್ನೂ ಹೇಳಲಿಕ್ಕೆ ಹೋಗಿಲ್ಲ. ಸ್ಕೂಲ್, ಕಾಲೇಜ್‌ನಲ್ಲಿ ನಾನು ಅನುಭವಿಸಿದಂತಹ, ಕಂಡಂತಹ ಒಂದಷ್ಟು ಅಂಶಗಳನ್ನು ಚಿತ್ರರೂಪಕ್ಕೆ ತಂದಿದ್ದೇನೆ. ಬೆಂಗಳೂರು, ಮಂಗಳೂರು, ಬೈಂದೂರು, ಉಡುಪಿ, ಮಲ್ಪೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ' ಎಂದರು.

ನಾಯಕಿಯರಾಗಿ ಐಶ್ವರ್ಯ ದಿನೇಶ್, ಅನುಷಾ ಜೈನ್ ಬಣ್ಣಹಚ್ಚಿದ್ದಾರೆ. ಸಿಹಿಕಹಿ ಚಂದ್ರು, ರಾಜೇಶ್ವರಿ, ಲಪಂಗ್ ರಾಜ, ಅನೂಪ್ ಅಗಸ್ತ್ಯ ಮುಂತಾದವರು ತಾರಾಬಳಗದಲ್ಲಿದ್ದಾರೆ. ವಿಶಾಲ್ ಆಲಾಪ ಸಂಗೀತ ನಿರ್ದೇಶನ, ಮಂಜುನಾಥ ಹೆಗಡೆ ಛಾಯಾಚಿತ್ರಗ್ರಹಣ, ಸಂಜೀವ್ ಜಹಗೀದಾರ್ ಸಂಕಲನ, ಮನೀಷ್ ಕೇಶವ್ ನೃತ್ಯ ನಿರ್ದೇಶನ ಚಿತ್ರಕ್ಕಿದೆ. ಇದೇ ತಿಂಗಳಲ್ಲಿ ಸಿನಿಮಾವನ್ನು ತೆರೆಗೆ ತರಲು ಯೋಜನೆ ಹಾಕಿಕೊಂಡಿದೆ ಚಿತ್ರತಂಡ.

'ರುಕ್ಮಿಣಿ ರಾಧಾಕೃಷ್ಣ' ಚಿತ್ರಕ್ಕೆ ಚಾಲನೆ

ಚಿತ್ರರಂಗದಲ್ಲಿ ಕಳೆದ 14 ವರ್ಷಗಳಿಂದ ಸಹ ನಿರ್ದೇಶಕ ಹಾಗೂ ಬರಹಗಾರನಾಗಿ ಕೆಲಸ ಮಾಡಿದ ಅನುಭವ ಹೊಂದಿರುವ ಪ್ರಾಣ್ ಸುವರ್ಣ ನಿರ್ದೇಶನದ ಚೊಚ್ಚಲ ಸಿನಿಮಾ 'ರುಕ್ಮಿಣಿ ರಾಧಾಕೃಷ್ಣ' ಸೆಟ್ಟೇರಿದೆ.

ಬಿಡುಗಡೆಗೆ ಸಿದ್ಧವಾಗಿರುವ 'ಮೆಜೆಸ್ಟಿಕ್-2' ಚಿತ್ರದ ನಾಯಕ ಭರತ್ ಕುಮಾರ್ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿದ್ದು, ಮೋಕ್ಷಿತ ಪೈ ಹಾಗೂ ರಿಯಾ ಸಚ್‌ದೇವ್ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು. ಮೊದಲ ದೃಶ್ಯಕ್ಕೆ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಆರ್.ನರಸಿಂಹಲು ಕ್ಲ್ಯಾಪ್ ಮಾಡಿದರು.

'ರುಕ್ಮಿಣಿ ರಾಧಾಕೃಷ್ಣ' ಒಂದು ತ್ರಿಕೋನ ಪ್ರೇಮಕಥೆಯಾಗಿದ್ದು, ನಿರ್ದೇಶಕರು ಶ್ರೀಕೃಷ್ಣ, ರಾಧಾ, ರುಕ್ಮಿಣಿಯ ಪ್ರೇಮಕಥೆಯನ್ನಿಟ್ಟುಕೊಂಡು ಈಗಿನ ಯುವಜನತೆಯ ಪ್ರೇಮಕಥೆಯನ್ನು ಹೇಳಿದ್ದಾರೆ ಎಂದಿದೆ ಚಿತ್ರತಂಡ. 60 ದಿನ ಚಿತ್ರದ ಶೂಟಿಂಗ್ ನಡೆಯಲಿದ್ದು, ಮೊದಲ ಹಂತದಲ್ಲಿ ಬೆಂಗಳೂರು ಸುತ್ತಮುತ್ತ ಹಾಗೂ ಎರಡನೇ ಹಂತದಲ್ಲಿ ಕುಂಭಕೋಣಂನಲ್ಲಿ ಚಿತ್ರೀಕರಣ ನಡೆಸಲಾಗುವುದು ಎಂದಿದೆ ಚಿತ್ರತಂಡ.

ಶಿಲ್ಪಾ ಶ್ರೀನಿವಾಸ್ ಅರ್ಪಿಸುವ ಈ ಚಿತ್ರವನ್ನು



ರಿಯಾ ಸಚ್‌ದೇವ್, ಭರತ್ ಕುಮಾರ್, ಮೋಕ್ಷಿತ ಪೈ

'ಪೆನ್‌ಡ್ರೈವ್' ಚಿತ್ರದ ನಿರ್ಮಾಪಕ ಎನ್. ಹನುಮಂತರಾಜು ಹಾಗೂ ಎನ್.ಎಚ್. ಉಮೇಶ್ ಚಂದ್ ಸೇರಿ ನಿರ್ಮಿಸುತ್ತಿದ್ದಾರೆ. ಚಿತ್ರದಲ್ಲಿ 6 ಹಾಡುಗಳಿದ್ದು, ಸುನಾದ ಗೌತಮ್ ಸಂಗೀತ ನಿರ್ದೇಶನವಿದೆ. ಪ್ರಾಣ್ ಸುವರ್ಣ ಅವರೇ ಚಿತ್ರದ ಕಥೆ, ಚಿತ್ರಕಥೆ ಬರೆದಿದ್ದಾರೆ. ಸುನಿಲ್ ನರಸಿಂಹಮೂರ್ತಿ ಛಾಯಾಚಿತ್ರಗ್ರಹಣ, ಎಂ.ಲಕ್ಷ್ಮಣರಾವ್ ಸಂಕಲನ ಚಿತ್ರಕ್ಕಿದೆ.



ಯುವ, ಸಂಪದಾ

ಸನ್‌ನೆಕ್ಸ್ಟ್‌ನಲ್ಲಿ ನ.13ಕ್ಕೆ 'ಎಕ್ಕ'

ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾದ ಒಟಿಟಿ ಬಿಡುಗಡೆ ದಿನಾಂಕ ನಿಗದಿಯಾಗಿದೆ. ನ.13ರಿಂದ ಈ ಸಿನಿಮಾ ಸನ್‌ನೆಕ್ಸ್ಟ್ ಒಟಿಟಿ ವೇದಿಕೆಯಲ್ಲಿ ಸ್ಟ್ರೀಮ್ ಆಗಲಿದೆ.

ರೋಹಿತ್ ಪದಕಿ ಈ ಸಿನಿಮಾ ನಿರ್ದೇಶಿಸಿದ್ದಾರೆ. 'ಯುವ' ಸಿನಿಮಾ ಬಳಿಕ ಯುವ ರಾಜ್‌ಕುಮಾರ್ ನಟಿಸಿದ್ದ ಎರಡನೇ ಸಿನಿಮಾ ಇದಾಗಿದೆ. ಹಳ್ಳಿ ಬಿಟ್ಟು ನಗರಕ್ಕೆ ಬಂದ ಸಾಮಾನ್ಯ ಹುಡುಗನೊಬ್ಬ ಬೆಂಗಳೂರಿನಲ್ಲಿ ಟ್ಯಾಕ್ಸಿ ಡ್ರೈವರ್ ಆಗಿ ಭೂಗತಜಗತ್ತಿಗೆ ಹೆಜ್ಜೆ ಇಟ್ಟ ಕಥೆ ಸಿನಿಮಾದಲ್ಲಿದೆ. 'ಮುತ್ತು' ಎಂಬ ಪಾತ್ರದಲ್ಲಿ ಯುವ ನಟಿಸಿದ್ದಾರೆ. ಸಂಜನಾ ಆನಂದ್ ಹಾಗೂ ಸಂಪದಾ ನಾಯಕಿಯರಾಗಿ ಮಿಂಚಿದ್ದಾರೆ. ಚಿತ್ರದಲ್ಲಿ 'ಡೆಡ್ಲಿ ಸೋಮ' ಖ್ಯಾತಿಯ ನಟ ಆದಿತ್ಯ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಬಾಲಿವುಡ್ ನಟ ಅತುಲ್ ಕುಲಕರ್ಣಿ ತಾರಾಬಳಗದಲ್ಲಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ಸಿನಿಮಾ ನಿರ್ಮಾಣವಾಗಿತ್ತು.

ಗಣೇಶ್ ಸಿನಿಮಾಗೆ ಹರಿಕೃಷ್ಣ ಸಂಗೀತ

ಎಂ.ಮುನೇಗೌಡ ನಿರ್ಮಾಣದ, ಗೋಲ್ಡನ್ ಸ್ಟಾರ್ ಗಣೇಶ್ ಹಾಗೂ 'ಬಹದ್ದೂರ್' ಖ್ಯಾತಿಯ ಚೇತನ್ ಕುಮಾರ್ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಹೊಸ ಚಿತ್ರಕ್ಕೆ ವಿ.ಹರಿಕೃಷ್ಣ ಸಂಗೀತ ನೀಡಲಿದ್ದಾರೆ.



ಹರಿಕೃಷ್ಣ

ಎಸ್.ವಿ.ಸಿ ಫಿಲಂಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಸದ್ಯ 'ಪ್ರೊಡಕ್ಷನ್ ನಂ.3' ಎಂಬ ಶೀರ್ಷಿಕೆ ಇಡಲಾಗಿದೆ. 'ಬಹದ್ದೂರ್', 'ಭರ್ಜರಿ', 'ಭರಾಟೆ', 'ಜೇಮ್ಸ್'ನಂತಹ ಹಿಟ್ ಚಿತ್ರಗಳನ್ನು ನಿರ್ದೇಶಿಸಿರುವ ಚೇತನ್ ಕುಮಾರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಸದ್ಯದಲ್ಲೇ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಚಿತ್ರದಲ್ಲಿ ಸಾಕಷ್ಟು ಅನುಭವಿ ಕಲಾವಿದರು ಅಭಿನಯಿಸಲಿದ್ದಾರೆ. ಚಿತ್ರದ ಕುರಿತು ಹೆಚ್ಚಿನ ಮಾಹಿತಿಯನ್ನು ಸದ್ಯದಲ್ಲೇ ನೀಡಲಾಗುವುದು ಎಂದಿದೆ ಚಿತ್ರತಂಡ.

ಭಾರತ ಹಾಕಿಗೆ ಶತಮಾನ ಸಂಭ್ರಮ

ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾದ ದಿಗ್ಗಜರು
ಅಪರೂಪದ ಛಾಯಾಚಿತ್ರ, ಸ್ಮರಣಿಕೆಗಳ ಪ್ರದರ್ಶನ

ನವದೆಹಲಿ (ಪಿಟಿಐ): ಇಲ್ಲಿನ ಹೆಗ್ಗುರುತಾದ ಮೇಜರ್ ಧ್ಯಾನ್ ಚಂದ್ ಕ್ರೀಡಾಂಗಣ ಸಂಭ್ರಮದಿಂದ ಕಳೆಗಟ್ಟಿತ್ತು. ತಲೆಮಾರುಗಳನ್ನು ಪ್ರಭಾವಿಸಿದ ದಿಗ್ಗಜ ಆಟಗಾರರು, ಒಲಿಂಪಿಕ್ ಸ್ವರ್ಣ ವಿಜೇತ ಆಟಗಾರರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

ಭಾರತದ ಹಾಕಿ ಕಂಡ ಶ್ರೇಷ್ಠ ಆಟಗಾರರನ್ನು ಅವರ ಕೊಡುಗೆಗಾಗಿ ಈ ಸಂದರ್ಭದಲ್ಲಿ ಹಾಕಿ ಇಂಡಿಯಾ ಗೌರವಿಸಿತು.

ಭಾರತದ ಹಾಕಿ ಸುವರ್ಣಯುಗದಲ್ಲಿ ಆಡಿದ್ದ ಗುರುಬಕ್ಷ್ ಸಿಂಗ್, ಅಸ್ಲಂ ಶೇರ್ ಖಾನ್, ಹರ್ಬಿಂದರ್ ಸಿಂಗ್, ಅಜಿತ್ ಪಾಲ್ ಸಿಂಗ್, ಅಶೋಕ್ ಕುಮಾರ್, ಬಿ.ಪಿ.ಗೋವಿಂದ, ಜಾಫರ್ ಇಕ್ಬಾಲ್, ಬ್ರಿಗೇಡಿಯರ್ ಹರಚರಣ್ ಸಿಂಗ್, ವಿನೀತ್ ಕುಮಾರ್, ಮಿರ್ ರಂಜನ್ ನೇಗಿ, ರೋಮಿಯೊ ಜೇಮ್ಸ್, ಅಸುಂತ ಲಾಕ್ರಾ, ಸುಭದ್ರ ಪ್ರಧಾನ್ ಇವರಲ್ಲಿ ಒಳಗೊಂಡಿದ್ದರು.

ಈ ಸಂದರ್ಭದಲ್ಲಿ ಹಾಜರಿದ್ದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಭಾರತದ ರಾಷ್ಟ್ರೀಯ ಕ್ರೀಡೆಯ ವೈಭವಯುತ ಪಯಣವನ್ನು ಕೊಂಡಾಡಿದರು. ದೇಶದ ಕ್ರೀಡಾ ಪರಂಪರೆಯಲ್ಲಿ ಈ ಆಟದ ಗಟ್ಟಿ ಬೇರುಗಳನ್ನು ನೆನಪಿಸಿದರು.

ಮಾಂಡವೀಯ ಜೊತೆ, ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ತಮಿಳುನಾಡು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರೂ ಹಾಜರಿದ್ದರು.

'ಈ ಕ್ರೀಡೆಯು ದೇಶದಲ್ಲಿ ವಿವಿಧ ಹಂತಗಳನ್ನು ದಾಟಿದೆ. ಭಾರತ ಕ್ರೀಡಾ ಕ್ಷೇತ್ರದಲ್ಲಿ ಮೆರೆಯಬಹುದು ಎಂಬುದನ್ನು ಭಾರತ ಹಾಕಿ ತಂಡವು ಒಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನದ ಮೂಲಕ ಸಾಧಿಸಿ ತೋರಿಸಿತು' ಎಂದು ಮಾಂಡವೀಯ ಬಣ್ಣಿಸಿದರು.

ಪ್ರದರ್ಶನ ಪಂದ್ಯ: ಸಚಿವ ಮಾಂಡವೀಯ ನೇತೃತ್ವದ ಕ್ರೀಡಾ ಸಚಿವರ ಇಲೆವೆನ್ ಮತ್ತು ಹಾಕಿ ಇಂಡಿಯಾ ಇಲೆವೆನ್ ನಡುವಣ ಪ್ರದರ್ಶನ ಪಂದ್ಯದ ಮೂಲಕ ಶತಮಾನೋತ್ಸವ ಸಮಾರಂಭ ಆರಂಭವಾಯಿತು. ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕೆ ಹಾಕಿ ಇಂಡಿಯಾ ಇಲೆವೆನ್ ನೇತೃತ್ವ ವಹಿಸಿದ್ದರು. ಕ್ರೀಡಾ ಸಚಿವರ ಇಲೆವೆನ್ 3–1 ರಿಂದ ಈ ಪಂದ್ಯದಲ್ಲಿ ಜಯಗಳಿಸಿತು.



ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಹಾಕಿ ದಿಗ್ಗಜ ಗುರುಬಕ್ಷ್ ಸಿಂಗ್ ಅವರನ್ನು ಗೌರವಿಸಿದರು. ತಮಿಳುನಾಡು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಚಿತ್ರದಲ್ಲಿದ್ದಾರೆ ಪಿಟಿಐ ಚಿತ್ರ

ಶತಮಾನದ ಅವಧಿಯಲ್ಲಿ ಈ ಆಟ ಕಂಡು ಏಳುಬೀಳುಗಳನ್ನು ದಾಖಲಿಸಿರುವ 'ಭಾರತದ ಹಾಕಿಯ ನೂರು ವರ್ಷ' ಶೀರ್ಷಿಕೆಯ ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ಒಲಿಂಪಿಕ್ಸ್ ವೈಭವದ ನೆನಪುಗಳ ಸಾರುವ ಅಪರೂಪದ ಛಾಯಾಚಿತ್ರ, ಸ್ಮರಣಿಕೆಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ತಮ್ಮ ಹಾಕಿ ಪಯಣ ಆರಂಭವಾದ ಸ್ಥಳದಲ್ಲೇ ಈ ಸಮಾರಂಭ ನಡೆದಿರುವುದರಿಂದ ಭಾವುಕರಾಗಿರುವುದಾಗಿ ಟಿರ್ಕೆ ತಿಳಿಸಿದರು.

ಆರ್‌ಟಿಒ: ಹಲವು ಅಕ್ರಮಗಳ ಕೊಂಪೆ

ಒಂದನೇ ಪುಟದಿಂದ...

ಯಶವಂತಪುರ ಆರ್‌ಟಿಒ ಕಚೇರಿಯಲ್ಲಿ 789 ಡಿಎಲ್‌ಗಳನ್ನು ಸಂಬಂಧಿಸಿದವರಿಗೆ ವಿತರಣೆ ಮಾಡಿಲ್ಲ ಮತ್ತು 2,095 ಡಿಎಲ್‌ಗಳನ್ನು ಮುದ್ರಿಸಿಯೇ ಇಲ್ಲ. ವಿತರಣೆಯಾಗದ ಡಿಎಲ್‌ಗಳನ್ನು ವರ್ಗೀಕರಿಸಿ, ಬೇರೆ-ಬೇರೆ ಕವರ್‌ಗಳಲ್ಲಿ ಇರಿಸಲಾಗಿದೆ. ಯಾವ ಕಾರಣಕ್ಕಾಗಿ ಇವುಗಳನ್ನು ಹೀಗೆ ಇರಿಸಲಾಗಿದೆ ಎಂಬುದರ ಬಗ್ಗೆ ಅಧಿಕಾರಿಗಳು ವಿವರಣೆ ನೀಡಿರುವುದಿಲ್ಲ. ಎಲ್ಲ ಕಚೇರಿಗಳಲ್ಲೂ ಇದೇ ಸ್ಥಿತಿ ಇರುವುದು ದಾಳಿ ವೇಳೆ ಪತ್ತೆಯಾಗಿದೆ.

ಯುಪಿಐ ಆ್ಯಪ್ ಡಿಲೀಟ್: ಕೆ.ಆರ್.ಪುರದ ಕಚೇರಿ ಮೇಲೆ ದಾಳಿ ಆರಂಭವಾಗುತ್ತಿದ್ದಂತೆ ಅಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಯು ತಮ್ಮ ಮೊಬೈಲ್‌ನಲ್ಲಿದ್ದ ಗೂಗಲ್‌ಪೇ, ಫೋನ್‌ಪೇ, ಪೇಟಿಎಂ ಆ್ಯಪ್‌ಗಳನ್ನು ಡಿಲೀಟ್ ಮಾಡಿದ್ದಾರೆ. ಕೆಲವರ ಮೊಬೈಲ್ ಅನ್ನು ಪರಿಶೀಲಿಸಿದಾಗ, ಆ್ಯಪ್‌ಗಳು ಡಿಲೀಟ್ ಆಗುತ್ತಿದ್ದ ಸ್ಥಿತಿಯಲ್ಲಿದ್ದವು. ಆ ಎಲ್ಲ ಸಿಬ್ಬಂದಿಯ ಬ್ಯಾಂಕ್ ವಹಿವಾಟು, ಯುಪಿಐ ವಹಿವಾಟು, ಆಸ್ತಿ ವಿವರ, ಆಸ್ತಿ ಖರೀದಿ ವಿವರ, ವೇತನ ವಿವರಗಳನ್ನು ಒದಗಿಸುವಂತೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ, ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಸೂಚಿಸಿದ್ದಾರೆ.

ಕೆ.ಆರ್. ಪುರ ಕಚೇರಿ ವ್ಯಾಪ್ತಿಯಲ್ಲಿ ಒಟ್ಟು 1.52 ಲಕ್ಷಕ್ಕೂ ಹೆಚ್ಚು ವಾಹನಗಳ ಫಿಟ್‌ನೆಸ್ ಅವಧಿ ಮುಗಿದಿದೆ. ಅಂತಹ ವಾಹನಗಳ ಮಾಲೀಕರಿಗೆ ನೋಟಿಸ್ ನೀಡದೆ ಮತ್ತು ವಾಹನಗಳನ್ನು ವಶಕ್ಕೆ ಪಡೆಯದೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಫಿಟ್‌ನೆಸ್ ಅವಧಿ ಮುಗಿದ ವಾಹನಗಳಲ್ಲಿ ಶಾಲಾ ಬಸ್‌ಗಳೂ ಸೇರಿವೆ. ಈ ವಾಹನಗಳನ್ನು ಅಕ್ರಮವಾಗಿ ಸಂಚರಿಸಲು ಬಿಟ್ಟಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಉಪ ಲೋಕಾಯುಕ್ತರು ಸೂಚಿಸಿದ್ದಾರೆ.

ಅಕ್ರಮದ ನಾನಾರೂಪ

- ಆರೂ ಆರ್‌ಟಿಒ ಕಚೇರಿ ಸಿಬ್ಬಂದಿಯು ನಗದು ವಹಿಯನ್ನು ನಿರ್ವಹಣೆ ಮಾಡಿಲ್ಲ. ಬಹುತೇಕ ಸಿಬ್ಬಂದಿ ನಿಗದಿತ ಮಿತಿಗಿಂತ ಹೆಚ್ಚು ನಗದು ಹೊಂದಿದ್ದರು. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ
- ಕೆ.ಆರ್.ಪುರ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರ ಕಾರು ಚಾಲಕ ಮನು ದಾಳಿಗೆ ಮೊದಲೇ ಪರಾರಿಯಾಗಿದ್ದು, ತಲೆಮರೆಸಿಕೊಂಡಿದ್ದಾರೆ. ವಿಚಾರಣೆಗೆ ಹಾಜರಾಗುವಂತೆ ಅವರಿಗೆ ನೋಟಿಸ್ ನೀಡಲು ಸೂಚಿಸಲಾಗಿದೆ
- ಆರ್‌ಸಿ ಕಾರ್ಡ್, ಡಿಎಲ್ ಕಾರ್ಡ್‌ಗಳು ಮುದ್ರಣಕ್ಕೆ ಸಿದ್ಧವಿದ್ದರೂ ಮುದ್ರಿಸಿಲ್ಲ. ರಾಜಾಜಿನಗರ ಕಚೇರಿ ಒಂದರಲ್ಲೇ 3,800 ಡಿಎಲ್ ಮತ್ತು 6,300 ಆರ್‌ಸಿ ಕಾರ್ಡ್‌ಗಳು ಹೀಗೆ ಬಾಕಿ ಇವೆ. ಮುದ್ರಣವಾಗಿರುವ ಕಾರ್ಡ್‌ಗಳನ್ನು ಅನಗತ್ಯವಾಗಿ ಕಚೇರಿಯಲ್ಲೇ ಇರಿಸಿಕೊಳ್ಳಲಾಗಿದೆ

ದಾಳಿ ಮಾಹಿತಿ ಸೋರಿಕೆ ಶಂಕೆ?

ಆರೂ ಆರ್‌ಟಿಒ ಕಚೇರಿಗಳ ಆವರಣದಲ್ಲಿ 100ಕ್ಕೂ ಹೆಚ್ಚು ಸ್ಟೇಷನರಿ ಅಂಗಡಿಗಳಿದ್ದು, ದಾಳಿ ವೇಳೆ ಎಲ್ಲಕ್ಕೂ ಬೀಗ ಹಾಕಲಾಗಿತ್ತು. ಆರ್‌ಟಿಒ ಕಚೇರಿಗೆ ಸಲ್ಲಿಸಲು ಅಗತ್ಯವಿರುವ ವಿವಿಧ ಅರ್ಜಿಗಳು, ಝೆರಾಕ್ಸ್ ಈ ಅಂಗಡಿಗಳಲ್ಲಿ ಲಭ್ಯವಿದ್ದು, ದಾಳಿಯ ವೇಳೆ ಅವುಗಳಿಗೆ ಏಕೆ ಬೀಗ ಹಾಕಲಾಗಿತ್ತು ಎಂಬುದರ ಬಗ್ಗೆ ತನಿಖೆ ಆರಂಭಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಮೂಲಗಳು ತಿಳಿಸಿವೆ.

ಏಜೆಂಟ್ ಬಳಿ ಆರ್‌ಸಿ, ಡಿಎಲ್

ಕಸ್ತೂರಿನಗರ ಆರ್‌ಟಿಒ ಕಚೇರಿ ಮೇಲೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರ ನೇತೃತ್ವದಲ್ಲಿ ದಾಳಿ ನಡೆಸಿದ ವೇಳೆ, ಕಚೇರಿ ಆವರಣದಲ್ಲಿದ್ದ ಏಜೆಂಟರು ಪರಾರಿಯಾಗಿದ್ದಾರೆ. ಲೋಕಾಯುಕ್ತ ಅಧಿಕಾರಿಗಳಿಗೆ ಇಬ್ಬರು ಏಜೆಂಟರು ಸಿಕ್ಕಿಬಿದ್ದಿದ್ದು, ಒಬ್ಬರ ಬಳಿ 83 ಡಿಎಲ್ ಮತ್ತು 50 ಆರ್‌ಸಿ ಕಾರ್ಡ್ ಪತ್ತೆಯಾಗಿದೆ. ಏಜೆಂಟ್ ಬಳಿ ₹14,000 ನಗದು ಪತ್ತೆಯಾಗಿದ್ದು, ಅದನ್ನು ವಶಕ್ಕೆ ಪಡೆಯಲಾಗಿದೆ.

ಪ್ರತಿ ಆರ್‌ಸಿ ಕಾರ್ಡ್ ಮತ್ತು ಡಿಎಲ್ ಮೇಲೆ ಪ್ಲಾಸ್ಟಿಕ್ ಕವರ್‌ಗಳಿದ್ದು ₹1,500, ₹2,000, ₹2,500, ₹5,000 ಎಂದು ಬರೆಯಲಾಗಿದೆ. ಆ ಹಣವನ್ನು ಪಡೆದುಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ರೈಟ್ ಗುರುತು ಮಾಡಲಾಗಿದೆ. ಕಚೇರಿಯ ಸುಪರ್ದಿಯಲ್ಲಿ ಇರಬೇಕಿದ್ದ ಕಾರ್ಡ್‌ಗಳು ಖಾಸಗಿ ವ್ಯಕ್ತಿಯ ಬಳಿ ಹೇಗೆ ಇದ್ದವು ಎಂಬುದರ ಬಗ್ಗೆ ಆರ್‌ಟಿಒ ಅಧಿಕಾರಿ ವಿವರಣೆ ನೀಡಿಲ್ಲ. ಈ ಬಗ್ಗೆ ಅಪರಾಧ ಪ್ರಕರಣ ದಾಖಲಿಸುವಂತೆ ಸ್ಥಳೀಯ ಪೊಲೀಸರಿಗೆ ಉಪ ಲೋಕಾಯುಕ್ತರು ಸೂಚಿಸಿದ್ದಾರೆ

ಮಾರ್ಕೆಸ್ ಏಕರ್ಮನ್ ಶತಕ; ಸಿರಾಜ್‌ಗೆ 2 ವಿಕೆಟ್

ಪ್ರಸಿದ್ಧ, ಆಕಾಶ್ ವೇಗದ ಭರಾಟೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಮಾರ್ಕೆಸ್ ಏಕರ್ಮನ್ ಅವರು ಚೆಂದದ ಶತಕ ಗಳಿಸಿದರೂ ದಕ್ಷಿಣ ಆಫ್ರಿಕಾ ಎ ತಂಡಕ್ಕೆ ಇನಿಂಗ್ಸ್ ಮುನ್ನಡೆ ಸಾಧಿಸಲು ಸಾಧ್ಯವಾಗಲಿಲ್ಲ. ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ನಡೆಯುತ್ತಿರುವ 'ಟೆಸ್ಟ್' ಪಂದ್ಯದ ಎರಡನೇ ದಿನದಾಟದಲ್ಲಿ ಪ್ರಸಿದ್ಧ ಕೃಷ್ಣ ಮತ್ತು ಆಕಾಶ್ ದೀಪ್ ಅವರ ಅಮೋಘ ದಾಳಿಯ ಬಲದಿಂದ ಭಾರತ ಎ ತಂಡ 34 ರನ್‌ಗಳ ಮುನ್ನಡೆ ಸಾಧಿಸಿತು.

ಎರಡನೇ ಇನಿಂಗ್ಸ್ ಆರಂಭಿಸಿರುವ ರಿಷಭ್ ಪಂತ್ ಬಳಗವು ದಿನದಾಟದ ಮುಕ್ತಾಯಕ್ಕೆ 24 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 78 ರನ್ ಗಳಿಸಿತು. ಒಟ್ಟು 112 ರನ್‌ಗಳ ಮುನ್ನಡೆ ಸಾಧಿಸಿದೆ. ಕೆ.ಎಲ್. ರಾಹುಲ್ (ಬ್ಯಾಟಿಂಗ್ 26) ಮತ್ತು 'ರಾತ್ರಿ ಕಾವಲುಗಾರ' ಕುಲದೀಪ್ ಯಾದವ್ ಕ್ರೀಸ್‌ನಲ್ಲಿದ್ದಾರೆ.

ಪಂದ್ಯದ ಮೊದಲ ದಿನವಾದ ಗುರುವಾರ ಸಂಜೆಯ ವೇಳೆಗೆ 255 ರನ್ ಗಳಿಸಿದ್ದ ಭಾರತ ಎ ತಂಡದ ಇನಿಂಗ್ಸ್‌ಗೆ ತೆರೆ ಬಿದ್ದಿತ್ತು. ಧ್ರುವ ಜುರೇಲ್ ಅವರ ಶತಕದ ಬಲದಿಂದ ತಂಡವು ಈ ಮೊತ್ತ ಪೇರಿಸಿತು. ಎರಡನೇ ದಿನ ಬೆಳಿಗ್ಗೆ ಇನಿಂಗ್ಸ್ ಆರಂಭಿಸಿದ ಪ್ರವಾಸಿ ಬಳಗಕ್ಕೆ ಆಕಾಶ್ ದೀಪ್ (10ಕ್ಕೆ2) ಬಲವಾದ ಪೆಟ್ಟುಕೊಟ್ಟರು. ಗಾಯದಿಂದ ಚೇತರಿಸಿಕೊಂಡು ಮರಳಿರುವ ಆಕಾಶ್ ತಮ್ಮ ಮೊದಲ ಓವರ್‌ನಲ್ಲಿ ಲೆಸೆಗೊ ಸೆಂಕೊವಾನೆ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಇನ್ನೊಂದು ಬದಿಯಿಂದ ಮೊಹಮ್ಮದ್ ಸಿರಾಜ್ ಅವರು ಜುಬೇರ್ ಹಮ್ಜಾ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದರು.



ವಿಕೆಟ್ ಪಡೆದ ಭಾರತ ಎ ತಂಡದ ಆಕಾಶ್ ದೀಪ್ ಅವರನ್ನು ಕೆ.ಎಲ್. ರಾಹುಲ್, ಪ್ರಸಿದ್ಧಕೃಷ್ಣ, ರಿಷಭ್ ಪಂತ್ ಅಭಿನಂದಿಸಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ತೆಂಬಾ ಬವುಮಾ ಅವರಿಗೆ ಖಾತೆ ತೆರೆಯುವ ಅವಕಾಶವನ್ನು ಆಕಾಶ್ ನೀಡಲಿಲ್ಲ. ಎಲ್‌ಬಿ ಬಲೆಗೆ ಬೀಳಿಸಿದರು. ಆಗ ತಂಡದ ಸ್ಕೋರ್ ಕೇವಲ 12 ರನ್‌ಗಳಾಗಿತ್ತು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಮಾರ್ಕೆಸ್ (134; 118ಎ, 4X17, 6X5) ಮತ್ತು ಆರಂಭಿಕ ಬ್ಯಾಟರ್ ಜೋರ್ಡಾನ್ ಹರ್ಮನ್ (26; 73ಎ) ವಿಕೆಟ್ ಪತನ ತಡೆದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 64 (107ಎ) ಸೇರಿಸಿದರು.

ಆದರೆ ಊಟದ ವಿರಾಮದ ನಂತರ 'ಸ್ಥಳೀಯ ಹುಡುಗ' ಪ್ರಸಿದ್ಧ ಕೃಷ್ಣ ಹಾಕಿದ ಎಸೆತವನ್ನು ಕೆಣಕಿದ ಜೋರ್ಡಾನ್ ಅವರು ಕೆ.ಎಲ್. ರಾಹುಲ್‌ಗೆ ಕ್ಯಾಚ್ ಆದರು. ಅದೇ ಓವರ್‌ನಲ್ಲಿ ಕಾನರ್ ಇಸ್ತೇಹುಜೆನ್ ಅವರನ್ನೂ ಪ್ರಸಿದ್ಧ ಎಲ್‌ಬಿ ಬಲೆಗೆ ಕೆಡವಿದರು. ಇದರ ನಂತರ ಉಳಿದ ಬೌಲರ್‌ಗಳು ತಮ್ಮ ದಾಳಿಯನ್ನು ಮತ್ತಷ್ಟು ಮೊನಚುಗೊಳಿಸಿದರು. ವಿಕೆಟ್‌ಗಳು ಉರುಳಲಾರಂಭಿಸಿದವು.

ಆದರೆ ಮಾರ್ಕೆಸ್ ತಮ್ಮ ಬೀಸಾಟವನ್ನು ಮತ್ತಷ್ಟು ಹೆಚ್ಚಿಸಿದರು. ಸಿರಾಜ್ ಅವರ ಒಂದೇ ಓವರ್‌ನಲ್ಲಿ ಎರಡು ಬೌಂಡರಿ ಮತ್ತು ಎರಡು ಸಿಕ್ಸರ್ ಹೊಡೆದರು. 99 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಆದರೂ ತಂಡದ ಇನಿಂಗ್ಸ್ ಹಿನ್ನಡೆ ತಪ್ಪಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 77.1 ಓವರ್‌ಗಳಲ್ಲಿ 255. ದಕ್ಷಿಣ ಆಫ್ರಿಕಾ ಎ: 47.3 ಓವರ್‌ಗಳಲ್ಲಿ 221 (ಜೋರ್ಡಾನ್ ಹರ್ಮನ್ 26, ಮಾರ್ಕೆಸ್ ಏಕರ್ಮನ್ 134, ಪ್ರೆರಲನ್ ಸುಬ್ರಾಯನ್ 20, ಮೊಹಮ್ಮದ್ ಸಿರಾಜ್ 61ಕ್ಕೆ2, ಆಕಾಶ್ ದೀಪ್ 28ಕ್ಕೆ2, ಪ್ರಸಿದ್ಧಕೃಷ್ಣ 35ಕ್ಕೆ3) ಎರಡನೇ ಇನಿಂಗ್ಸ್: ಭಾರತ ಎ: 24 ಓವರ್‌ಗಳಲ್ಲಿ 3ಕ್ಕೆ78 (ಕೆ.ಎಲ್. ರಾಹುಲ್ ಬ್ಯಾಟಿಂಗ್ 26, ಸಾಯಿ ಸುದರ್ಶನ್ 23, ದೇವದತ್ತ ಪಡಿಕ್ಕಲ್ 24, ಒಕುಲೆ ಸಿಲೆ 28ಕ್ಕೆ2, ಟಿಯಾನ್ ವ್ಯಾನ್ ವುರೆನ್ 15ಕ್ಕೆ1)

ರಣಜಿ: ಮಯಂಕ್ ಪಡೆಗೆ ಮಹಾರಾಷ್ಟ್ರ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈಚೆಗೆ 'ಹಾಲಿ ರನ್ನರ್ಸ್ ಅಪ್' ಕೇರಳ ತಂಡವನ್ನು ಸುಲಭವಾಗಿ ಮಣಿಸಿ ಭರ್ತಿ ಆತ್ಮವಿಶ್ವಾಸದಲ್ಲಿದೆ. ಇದರೊಂದಿಗೆ ಪುಣೆಯ ಎಂಸಿಎ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾಗಲಿರುವ ರಣಜಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಮಹಾರಾಷ್ಟ್ರ ತಂಡದ ಎದುರೂ ಜಯಗಳಿಸುವ ಹುಮ್ಮಸ್ಸಿನಲ್ಲಿದೆ.

ಮಂಗಲಪುರದ ಕೆಸಿಎ ಕ್ರಿಕೆಟ್ ಮೈದಾನದಲ್ಲಿ ಈಚೆಗೆ ನಡೆದ ಮೂರನೇ ಪಂದ್ಯದಲ್ಲಿ ಮಯಂಕ್ ಪಡೆಯು ಆತಿಥೇಯ ಕೇರಳ ತಂಡವನ್ನು ಇನಿಂಗ್ಸ್ ಮತ್ತು 164 ರನ್‌ಗಳಿಂದ ಸೋಲಿಸಿತ್ತು. ಈ ಮೂಲಕ ಪ್ರಸಕ್ತ ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆದಿತ್ತು. ಎಲೀಟ್ ಬಿ ಗುಂಪಿನಲ್ಲಿರುವ ಕರ್ನಾಟಕ, ತನ್ನ ಮೊದಲೆರಡು (ಸೌರಾಷ್ಟ್ರ ಮತ್ತು ಗೋವಾ ವಿರುದ್ಧ) ಪಂದ್ಯಗಳನ್ನು ಡ್ರಾ ಮಾಡಿಕೊಂಡಿತ್ತು.

ಕೇರಳ ವಿರುದ್ಧದ ಪಂದ್ಯದಲ್ಲಿ ಕರುಣ್ ನಾಯರ್ ಮತ್ತು ಸ್ಮರಣ್ ಆರ್. ಅಮೋಘ ದ್ವಿಶತಕ ದಾಖಲಿಸಿದ್ದರು. ಉತ್ತಮ ಫಾರ್ಮ್‌ನಲ್ಲಿರುವ ವಿದ್ವತ್ ಕಾವೇರಪ್ಪ ಮೊದಲ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಕಬಳಿಸಿದ್ದರು. ಭರವಸೆಯ ಸ್ಪಿನ್ನರ್‌ಗಳಾದ ಶಿಖರ್ ಶೆಟ್ಟಿ ಮತ್ತು ಮೊಹ್ಸಿನ್ ಖಾನ್ ಕೂಡಾ ಪಂದ್ಯದಲ್ಲಿ ಕೈಚಳಕ ತೋರಿದ್ದರು. ಮೊಹ್ಸಿನ್ ಆರು ವಿಕೆಟ್ ಪಡೆಯುವ ಮೂಲಕ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಜೀವನಶ್ರೇಷ್ಠ ಪ್ರದರ್ಶನ ನೀಡಿದ್ದರು.

ಆತಿಥೇಯರ ವಿರುದ್ಧ ಕೊನೆಯ ಐದು ಪಂದ್ಯಗಳಲ್ಲಿ ನಾಲ್ಕನ್ನು ಗೆದ್ದಿರುವ ಕರ್ನಾಟಕ ತಂಡವು ಮತ್ತೆ ಪಾರಮ್ಯ ಸಾಧಿಸುವ ಛಲದಲ್ಲಿದೆ. ಪಂದ್ಯದ ಮುನ್ನದಿನವಾದ ಶುಕ್ರವಾರ ಕ್ರೀಡಾಂಗಣದ ಪಿಚ್ ಒಣಗಿದ ಸ್ಥಿತಿಯಲ್ಲಿದ್ದು, ಆಟ ಮುಂದುವರಿದಂತೆ ಸ್ಪಿನ್‌ಗೆ ಅನುಕೂಲವಾಗುವ ಸಾಧ್ಯತೆಯಿದೆ.



ಮಯಂಕ್ ಅಗರವಾಲ್

ಟೂರ್ನಿಯ ಪೂರ್ವನಿಗದಿತ ವೇಳಾಪಟ್ಟಿಯ ಪ್ರಕಾರ ಈ ಪಂದ್ಯವು ನಾಸಿಕ್‌ನಲ್ಲಿ ನಡೆಯಬೇಕಿತ್ತು. ಈಚೆಗಷ್ಟೇ ಪಂದ್ಯವನ್ನು ಪುಣೆಗೆ ಸ್ಥಳಾಂತರಿಸಲಾಗಿದೆ. ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದರೆ ವಿದ್ವತ್ ಕಾವೇರಪ್ಪ ಅವರೊಂದಿಗೆ ಅಭಿಲಾಶ್ ಶೆಟ್ಟಿ ಅಥವಾ ಎಂ ವೆಂಕಟೇಶ್ ಜೊತೆಯಾಗಬಹುದು. ವೈಶಾಖ ವಿಜಯಕುಮಾರ್ ಅವರು ಇದೇ 14ರಿಂದ ದೋಹಾದಲ್ಲಿ ಆರಂಭವಾಗಲಿರುವ ರೈಸಿಂಗ್ ಸ್ಟಾರ್ಸ್ ಏಷ್ಯಾ ಕಪ್‌ಗಾಗಿ ಭಾರತ ಎ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಆದ್ದರಿಂದ ಅವರು ಈ ಪಂದ್ಯಕ್ಕೆ ಲಭ್ಯರಿಲ್ಲ. ಅವರ ಬದಲಿಗೆ ತಂಡಕ್ಕೆ ವಿದ್ಯಾಧರ್ ಪಾಟೀಲ ಸೇರ್ಪಡೆಯಾಗಿದ್ದಾರೆ. ಎರಡು ಅರ್ಧಶತಕಗಳೊಂದಿಗೆ ಆಲ್‌ರೌಂಡ್ ಪ್ರದರ್ಶನ ನೀಡಿರುವ ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರೊಂದಿಗೆ ಮೊಹ್ಸಿನ್ ಮತ್ತು ಶಿಖರ್ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಿದೆ.

ಪಂದ್ಯ ಆರಂಭ: ಬೆಳಿಗ್ಗೆ 9



ಕರ್ನಾಟಕ ಮಿನಿ ಗೇಮ್ಸ್‌ನ ಬಾಲಕಿಯರ ಕಬಡ್ಡಿ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಚಿಕ್ಕಮಗಳೂರು ಜಿಲ್ಲಾ ತಂಡ

ಕಬಡ್ಡಿ: ಚಿಕ್ಕಮಗಳೂರು ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ತಂಡಗಳು ನಗರದಲ್ಲಿ ನಡೆಯುತ್ತಿರುವ ಕರ್ನಾಟಕ ಮಿನಿ ಗೇಮ್ಸ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಕಬಡ್ಡಿ ಸ್ಪರ್ಧೆಯ ಪ್ರಶಸ್ತಿಯನ್ನು ಗೆದ್ದುಕೊಂಡವು.

ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಸಹಭಾಗಿತ್ವದ ಕ್ರೀಡಾಕೂಟದ ಆರನೇ ದಿನವಾದ ಶುಕ್ರವಾರ ನಡೆದ ಫೈನಲ್‌ನಲ್ಲಿ ಉತ್ತರ ಕನ್ನಡದ ಬಾಲಕರು 55–26ರಿಂದ ಬೆಂಗಳೂರು ನಗರ ತಂಡವನ್ನು ಮಣಿಸಿದರು. ಚಿಕ್ಕಮಗಳೂರು ಬಾಲಕಿಯರು ಪ್ರಶಸ್ತಿ ಸುತ್ತಿನಲ್ಲಿ 33–25ರಿಂದ ದಕ್ಷಿಣ ಕನ್ನಡ ತಂಡವನ್ನು ಸೋಲಿಸಿದರು.

ದಕ್ಷಿಣ ಕನ್ನಡ ಮತ್ತು ಗದಗ ತಂಡಗಳು ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಾಲಿಬಾಲ್ ಪ್ರಶಸ್ತಿಯನ್ನು ಗೆದ್ದುಕೊಂಡವು. ದಕ್ಷಿಣ ಕನ್ನಡದ ಬಾಲಕರು ಫೈನಲ್‌ನಲ್ಲಿ 3–0 ಯಿಂದ ಬೆಂಗಳೂರು ತಂಡವನ್ನು ಮಣಿಸಿದರು. ಗದಗ ಬಾಲಕಿಯರು 3–0ಯಿಂದ ಬೆಂಗಳೂರು ತಂಡವನ್ನು ಪರಾಭವಗೊಳಿಸಿದರು.

ಬಾಲಕರ ಫುಟ್‌ಬಾಲ್‌ನಲ್ಲಿ ಬೆಳಗಾವಿ ತಂಡವು 3–2ರಿಂದ ಪೆನಾಲ್ಟಿ ಶೂಟೌಟ್‌ನಲ್ಲಿ ದಕ್ಷಿಣ ಕನ್ನಡ ತಂಡವನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡಿತು. ನಿಗದಿತ ಅವಧಿಯ ಪಂದ್ಯವು 1–1ಗೋಲುಗಳಿಂದ ಡ್ರಾಗೊಂಡಿತ್ತು.

ಉನ್ನತಿ, ತನಯ್‌ಗೆ ಪ್ರಶಸ್ತಿ: ಮಂಡ್ಯದ ಉನ್ನತಿ ವಿ. ಮುರಳೀಧರ್ ಮತ್ತು ಬೆಂಗಳೂರಿನ ತನಯ್ ಬಾಬು ಪೈ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ಟೆನಿಸ್ ಸಿಂಗಲ್ಸ್ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ ಉನ್ನತಿ 6-0, 6-1ರಿಂದ ಕಾಶ್ವಿ ವಿ. ಕೋಣಂಕಿ ವಿರುದ್ಧ; ತನಯ್ 6–2, 6–2ರಿಂದ ಮಾಧವ್ ದಾಧಿಚ್ ವಿರುದ್ಧ ಜಯ ಸಾಧಿಸಿದರು.

ಬ್ಯಾಟಿಂಗ್ ಸುಧಾರಿಸುವತ್ತ ಭಾರತ ಚಿತ್ತ

ಅಂತಿಮ ಟಿ20 ಪಂದ್ಯ ಇಂದು • ಆಸ್ಟ್ರೇಲಿಯಾ ತಂಡಕ್ಕೆ ಸ್ಪಿನ್ನರ್‌ಗಳನ್ನು ನಿಭಾಯಿಸುವ ಸವಾಲು

ಬ್ರಿಸ್ಬೇನ್ (ಪಿಟಿಐ): ಹೊರದೇಶದಲ್ಲಿ ಮತ್ತೊಂದು ಸರಣಿ ಗೆಲುವಿನ ಹೊಸ್ತಿಲಲ್ಲಿರುವ ಭಾರತ ತಂಡದ ಗಮನ ಈಗ ಬ್ಯಾಟಿಂಗ್‌ನಲ್ಲಿ ಸ್ಥಿರ ಪ್ರದರ್ಶನ ನೀಡುವುದಾಗಿದೆ. ಶನಿವಾರ ಇಲ್ಲಿ ಆಸ್ಟ್ರೇಲಿಯಾ ವಿರುದ್ಧ ನಡೆಯುವ ಐದನೇ ಹಾಗೂ ಅಂತಿಮ ಟಿ20 ಪಂದ್ಯ ಇದಕ್ಕೆ ಒಳ್ಳೆಯ ಅವಕಾಶ ಒದಗಿಸಿದೆ.

ಭಾರತ ಈಗಾಗಲೇ 2–1 ಅಂತರದಲ್ಲಿ ಸುರಕ್ಷಿತ ಮುನ್ನಡೆ ಸಾಧಿಸಿದೆ. ಆಸ್ಟ್ರೇಲಿಯಾ ವಿರುದ್ಧ ಭಾರತ 17 ವರ್ಷಗಳಿಂದ ಒಮ್ಮೆಯೂ ಸರಣಿ ಸೋಲದ ದಾಖಲೆ ಕಾಪಾಡಿಕೊಂಡು ಬಂದಿದೆ.

ಸೂರ್ಯಕುಮಾರ್ ಯಾದವ್ ಪಡೆ ಈಗ ಸರಣಿ ಗೆಲುವಿನ ಅವಕಾಶ ಹೊಂದಿದೆ.

ಸೂರ್ಯ ಮತ್ತು ಉಪನಾಯಕ ಶುಭಮನ್ ಗಿಲ್ ಅವರ ಬ್ಯಾಟಿಂಗ್ ನಿರ್ವಹಣೆ ಮೇಲೆ ಹೆಚ್ಚಿನ ಗಮನವಿಡಲಾಗಿದೆ. ಆಸ್ಟ್ರೇಲಿಯಾ ತಂಡವು ಭಾರತ ಸ್ಪಿನ್ ಸವಾಲಿಗೆ ಪರಿಹಾರ ಕಂಡುಕೊಳ್ಳುವ ವಿಶ್ವಾಸದಲ್ಲಿದೆ. ಮುಂದಿನ ವರ್ಷದ ಆರಂಭದಲ್ಲಿ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯುವ ಟಿ20 ವಿಶ್ವಕಪ್‌ಗೆ ಸಜ್ಜಾಗುವ ದೃಷ್ಟಿಯಿಂದಲೂ ಆಸ್ಟ್ರೇಲಿಯಾಕ್ಕೆ ಈ ಪಂದ್ಯ ಮಹತ್ವದ್ದು.

ಈ ಹಿಂದಿನ ಪಂದ್ಯದಲ್ಲಿ ಗಿಲ್ ಅವರ ಆಟದಿಂದ ಭಾರತ ಒಂದು ಹಂತದಲ್ಲಿ 2 ವಿಕೆಟ್‌ಗೆ 121 ರನ್‌ಗಳ ಉತ್ತಮ ಆರಂಭ ಪಡೆದಿತ್ತು. ಆದರೆ 15 ರನ್‌ಗಳ ಅಂತರದಲ್ಲಿ 4 ವಿಕೆಟ್‌ಗಳು ಪತನವಾದವು. ಗಿಲ್ ಈ ಹಿಂದಿನ ಏಳು ಇನಿಂಗ್ಸ್‌ಗಳಿಂದ ಅರ್ಧ ಶತಕ ಗಳಿಸಿಲ್ಲ. ಆದರೆ ಗುರುವಾರದ ಪಂದ್ಯದಲ್ಲಿ ಅವರು ಗಳಿಸಿದ 46 ರನ್‌ಗಳು ಲಯಕ್ಕೆ ಮರಳುವ ಸಂಕೇತಗಳನ್ನು ನೀಡಿದೆ.



ಸೂರ್ಯಕುಮಾರ್ ಮತ್ತು ಜಸ್‌ಪ್ರೀತ್ ಬೂಮ್ರಾ

ಸೂರ್ಯಕುಮಾರ್ ತಮ್ಮ ಉತ್ತಮ ಆಟದ ತುಣುಕನ್ನಷ್ಟೇ ಪ್ರದರ್ಶಿಸಿದ್ದಾರೆ. ಅವರೂ ಉತ್ತಮ ಆರಂಭದ ಲಾಭ ಪಡೆಯಲಾಗದೇ ಪರದಾಡಿದ್ದಾರೆ. ತಿಲಕ್ ವರ್ಮಾ ಸಹ ಎಂದಿನ ಲಯದಲ್ಲಿಲ್ಲ. ಕೊನೆಯ ಮೂರು ಇನಿಂಗ್ಸ್‌ಗಳಲ್ಲಿ ಅವರ ಗಳಿಕೆ 0, 29 ಮತ್ತು 5.

ಬೌಲಿಂಗ್ ವಿಭಾಗದಲ್ಲಿ ಅರ್ಷದೀಪ್ ಸಿಂಗ್ ನಿರಾಶೆಗೊಳಿಸಿಲ್ಲ. ವರುಣ್ ಚಕ್ರವರ್ತಿ, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರಿರುವ ಸ್ಪಿನ್ ವಿಭಾಗವೂ ತಮ್ಮ ಹೊಣೆಯನ್ನು ನಿಭಾಯಿಸಿದೆ. ಶಿವಂ ದುಬೆ ಮತ್ತು ವಾಷಿಂಗ್ಟನ್ ಸುಂದರ್ ಉಪಯುಕ್ತ ಆಲ್‌ರೌಂಡ್ ಆಟವಾಡಿದ್ದಾರೆ.

ಆತಿಥೇಯ ತಂಡದ ಬ್ಯಾಟಿಂಗ್, ನಾಯಕ ಮಿಚೆಲ್ ಮಾರ್ಷ್, ಸ್ಟೊಯಿನಿಸ್ ಮತ್ತು ಟಿಮ್ ಡೇವಿಡ್ ಅವರನ್ನೇ ಬಹಳವಾಗಿ ನೆಚ್ಚಿಕೊಂಡಿದೆ. ಭಾರತ ಎದುರು ಸ್ಮರಣೀಯ ಇನಿಂಗ್ಸ್‌ಗಳನ್ನು ಆಡಿರುವ ಟ್ರಾವಿಸ್ ಹೆಡ್ ಗೈರು ಕೂಡ ಕಾಂಗರೂ ಪಡೆಯನ್ನು ಕಾಡುತ್ತಿದೆ. ಎರಡು ದಿನಗಳ ಹಿಂದೆ ಗೋಲ್ಡ್‌ಕೋಸ್ಟ್‌ನಲ್ಲಿ ತಂಡ 168ರ ಸಾಧಾರಣ ಮೊತ್ತ ಕೂಡ ಬೆನ್ನಟ್ಟಲು ವಿಫಲವಾಗಿತ್ತು.



ಅಭಿಷೇಕ್ ಶರ್ಮಾ

ಜೋಶ್ ಹ್ಯಾಜಲ್‌ವುಡ್ ಅವರ ಅನುಪಸ್ಥಿತಿ ತಂಡದ ಬೌಲಿಂಗ್ ದಾಳಿಯನ್ನು ದುರ್ಬಲಗೊಳಿಸಿದೆ. ಹೀಗಾಗಿ ನಥಾನ್ ಎಲ್ಲಿಸ್ ಮತ್ತು ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ಅವರ ಮೇಲೆ ಹೊಣೆ ಹೆಚ್ಚಿದೆ. ತಂಡವು ಭರವಸೆಯ ವೇಗಿ ಮಹ್ಲಿ ಬಿಯರ್ಡ್‌ಮನ್ ಅವರಿಗೆ ಅಂತಿಮ ಪಂದ್ಯದಲ್ಲಿ ಪದಾರ್ಪಣೆಯ ಅವಕಾಶ ನೀಡಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.45

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಐಪಿಎಲ್: ಮುಂದಿನ ಆವೃತ್ತಿಯಲ್ಲೂ ಆಡಲಿರುವ ಧೋನಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು 2026ರ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಆಡಲಿದ್ದಾರೆ ಎಂದು ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ದೃಢಪಡಿಸಿದೆ.

44 ವರ್ಷದ ಧೋನಿ, ಮುಂದಿನ ಟೂರ್ನಿಯಲ್ಲಿಯೂ ತಮ್ಮ ತಂಡಕ್ಕೆ ಆಡಲಿದ್ದಾರೆಂದು ಸಿಎಸ್‌ಕೆ ಸಿಇಒ ಕಾಶಿ ವಿಶ್ವನಾಥನ್ ಅವರು 'ಕ್ರಿಕ್‌ಬಜ್'ಗೆ ಖಚಿತ ಪಡಿಸಿದ್ದಾರೆ. ಇದರೊಂದಿಗೆ ಹಿರಿಯ ಕ್ರಿಕೆಟಿಗ ಐಪಿಎಲ್‌ನಲ್ಲಿ ಆಡುವ ಕುರಿತ ಊಹಾಪೋಹಗಳಿಗೆ ತೆರೆಬಿದ್ದಿದೆ.

ಮುಂಬರುವ ಋತುವಿನ ಫ್ರಾಂಚೈಸಿಯ ಯೋಜನೆಗಳಲ್ಲಿ ಧೋನಿ ಅವರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಎಂದು ವಿಶ್ವನಾಥನ್ ಹೇಳಿದ್ದಾರೆ.

ಕಳೆದ ಆವೃತ್ತಿಯ ಹಲವು ಪಂದ್ಯಗಳಲ್ಲಿ ಋತುರಾಜ್ ಗಾಯಕವಾಡ್ ಅವರ ಅನುಪಸ್ಥಿತಿಯಲ್ಲಿ ಧೋನಿ, ಸಿಎಸ್‌ಕೆ ತಂಡವನ್ನು ಮುನ್ನಡೆಸಿದ್ದರು. ಆದರೆ, ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿತ್ತು.



ನೆಟ್ಟಕಲ್ಲಪ್ಪ ಈಜು ಸ್ಪರ್ಧೆ ಇಂದಿನಿಂದ • 300ಕ್ಕೂ ಹೆಚ್ಚು ಮಂದಿ ಕಣಕ್ಕೆ

ಖ್ಯಾತನಾಮರ ಜಿದ್ದಾಜಿದ್ದಿಗೆ ವೇದಿಕೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಕಡೆ ಒಲಿಂಪಿಕ್ ಕೂಟದಲ್ಲಿ ಈಜಿ ಬಂದ ಸಾಧಕರು. ಇನ್ನೊಂದೆಡೆ ತಾವೂ ಭವಿಷ್ಯದಲ್ಲಿ 'ತಾರೆ'ಗಳಾಗುವ ಹುಮ್ಮಸ್ಸಿನಲ್ಲಿರುವ ಉದಯೋನ್ಮುಖರು. ಇವರಿಬ್ಬರ ಪೈಪೋಟಿಗೆ ಸಿದ್ಧವಾದ 'ನೆಟ್ಟಕಲ್ಲಪ್ಪ ಈಜು ಕೇಂದ್ರ'ದಲ್ಲಿ ಉಲ್ಲಾಸಮಯ ವಾತಾವರಣ.

ಶನಿವಾರ ಹಾಗೂ ಭಾನುವಾರ ಇಲ್ಲಿ ನಡೆಯಲಿರುವ ನಾಲ್ಕನೇ ಆವೃತ್ತಿಯ 'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ'ಯಲ್ಲಿ 300ಕ್ಕೂ ಹೆಚ್ಚು ಸ್ಪರ್ಧಿಗಳು ಕಣಕ್ಕಿಳಿಯಲಿದ್ದಾರೆ. ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ ಕೂಟಗಳಲ್ಲಿ ಸ್ಪರ್ಧಿಸಿರುವ ಬೆಂಗಳೂರಿನ ಶ್ರೀಹರಿ ನಟರಾಜ್, ಒಲಿಂಪಿಕ್ ಕೂಟದಲ್ಲಿ ಭಾಗವಹಿಸಿದ ಕಿರಿಯ ವಯಸ್ಸಿನ ಈಜುಪಟು ದಿನಿಧಿ ದೇಸಿಂಗು ಅವರು ಈಜು ಕೂಟದ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಅವರೊಂದಿಗೆ ಅಂತರರಾಷ್ಟ್ರೀಯ ಕೂಟಗಳು ಮತ್ತು ರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಸಾಧನೆ ಮಾಡಿರುವ ಈಜುಪಟುಗಳು ಕೂಡ ಕಣಕ್ಕಿಳಿಯುತ್ತಿದ್ದಾರೆ. ಅವರಲ್ಲದೇ ಎಸ್. ದರ್ಶನ್, ಎಸ್. ದಕ್ಷಣ್, ರುಜುಲಾ, ಮಣಿಕಂಠ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಪ್ರಮುಖರು.

ಈ ಸಲವೂ ಸ್ಕಿನ್ಸ್ ವಿಭಾಗದ ಸ್ಪರ್ಧೆಗಳು ನಡೆಯಲಿವೆ. ರೋಚಕತೆಯ ರಸದೌತಣ ನೀಡುವ ಸ್ಕಿನ್ಸ್ ಸ್ಪರ್ಧೆಗಳು ಈಜುಪಟುಗಳ ಶಕ್ತಿ, ಸಾಮರ್ಥ್ಯಗಳನ್ನು ಕಠಿಣ ಪರೀಕ್ಷೆಗೊಡ್ಡುತ್ತವೆ. ಈ ಸಲ ಪ್ರಶಸ್ತಿ ಮೊತ್ತವೂ ಆಕರ್ಷಕವಾಗಿದೆ.



ದಿನಿಧಿ ದೇಸಿಂಗು



ಶ್ರೀಹರಿ ನಟರಾಜ್

'ಈ ಬಾರಿ ಒಟ್ಟು ಪ್ರಶಸ್ತಿ ಮೊತ್ತವನ್ನು ₹10.50 ಲಕ್ಷಕ್ಕೆ ಏರಿಸಲಾಗಿದೆ. ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಉತ್ತಮ ಸಾಧನೆ ಮಾಡುವವರಿಗೆ ಅತ್ಯಮೂಲ್ಯ ಈಜುಪಟು ಪ್ರಶಸ್ತಿ ನೀಡಲಾಗುತ್ತದೆ. ತಲಾ ₹25 ಸಾವಿರ ನಗದು ಬಹುಮಾನ ಹೊಂದಿದೆ' ಎಂದು ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ) ಮುಖ್ಯಸ್ಥ ವರುಣ್ ನಿಜಾವನ್ ತಿಳಿಸಿದ್ದಾರೆ.

'ಈ ಕೂಟದ ಪ್ರಮುಖ ಆಕರ್ಷಣೆಯೆಂದರೆ ಸ್ಕಿನ್ಸ್ ವಿಭಾಗದ ಸ್ಪರ್ಧೆಗಳು. ಅತ್ಯಂತ ರೋಚಕವಾದ ಸ್ಪರ್ಧೆ ಇದಾಗಿದೆ. ಯುರೋಪ್, ಅಮೆರಿಕದಲ್ಲಿ ಇದು ಬಹಳ ಪ್ರಚಲಿತದಲ್ಲಿದೆ. ಭಾರತದಲ್ಲಿ ಸತತ ನಾಲ್ಕನೇ ವರ್ಷ ಈ ವಿಭಾಗದ ಸ್ಪರ್ಧೆ ನಡೆಸುತ್ತಿರುವುದು ಹೆಮ್ಮೆಯ ಸಂಗತಿ. ಇದು ನಾಕೌಟ್ ಮಾದರಿಯ ಸ್ಪರ್ಧೆಯಾಗಿದ್ದು, ಈಜುಪಟುಗಳ ಸಂಪೂರ್ಣ ಸಾಮರ್ಥ್ಯವನ್ನು ಒರೆಗೆ ಹಚ್ಚಲಿದೆ' ಎಂದೂ ವರುಣ್ ವಿವರಿಸಿದರು.

ಪದ್ಮನಾಭ ನಗರದಲ್ಲಿರುವ ಕೆ.ಎ. ನೆಟ್ಟಕಲ್ಲಪ್ಪ ಈಜು ಕೇಂದ್ರ'ದಲ್ಲಿ ಸ್ಪರ್ಧೆಗಳು ನಡೆಯಲಿವೆ ಎರಡೂ ದಿನವೂ ಬೆಳಿಗ್ಗೆ 10 ರಿಂದ ರಾತ್ರಿ 7ರವರೆಗೆ ಸ್ಪರ್ಧೆಗಳು ನಡೆಯಲಿವೆ. ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಅಂತರರಾಷ್ಟ್ರೀಯ ಈಜು ಕೋಚ್ ಪ್ರದೀಪ್‌ಕುಮಾರ್ ಅವರು ಶನಿವಾರ ಸಂಜೆ 4.30ಕ್ಕೆ ಕೂಟಕ್ಕೆ ಚಾಲನೆ ನೀಡಲಿದ್ದಾರೆ.

ಮಹಿಳಾ ಏಕದಿನ ವಿಶ್ವಕಪ್: ತಂಡಗಳ ಸಂಖ್ಯೆ 10ಕ್ಕೆ ಏರಿಕೆ

ದುಬೈ (ಪಿಟಿಐ): ಮಹಿಳಾ ಏಕದಿನ ವಿಶ್ವಕಪ್‌ನ ಮುಂದಿನ ಆವೃತ್ತಿಯಲ್ಲಿ ಹತ್ತು ತಂಡಗಳು ಇರಲಿವೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ತಿಳಿಸಿದೆ.

ಇತ್ತೀಚೆಗೆ ಭಾರತ– ಶ್ರೀಲಂಕಾ ಆತಿಥ್ಯದಲ್ಲಿ ಮುಕ್ತಾಯಗೊಂಡ ವಿಶ್ವಕಪ್‌ನಲ್ಲಿ ಎಂಟು ತಂಡಗಳು ರೌಂಡ್‌ರಾಬಿನ್ ಮಾದರಿಯಲ್ಲಿ ಆಡಿದ್ದವು.

ಭಾರತ ನವೆಂಬರ್ 2ರಂದು ನಡೆದ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತ್ತು. ಈ ವಿಶ್ವಕಪ್‌ಗೆ ದೊರೆತ ಉತ್ತಮ ಸ್ಪಂದನೆ ಪರಿಗಣಿಸಿ ತಂಡಗಳ ಸಂಖ್ಯೆಯನ್ನು ಐಸಿಸಿ ಹೆಚ್ಚಿಸಿದೆ.

'ವಿವಿಧ ಕ್ರೀಡಾಂಗಣಗಳಲ್ಲಿ ಸುಮಾರು 3 ಲಕ್ಷ ಮಂದಿ ಪಂದ್ಯಗಳನ್ನು ವೀಕ್ಷಿಸಿದ್ದಾರೆ. ಇದು ಯಾವುದೇ ಮಹಿಳಾ ಕ್ರಿಕೆಟ್ ಟೂರ್ನಿಯ ದಾಖಲೆಯಾಗಿದೆ' ಎಂದು ಐಸಿಸಿಯ ಹೇಳಿಕೆ ತಿಳಿಸಿದೆ.

ಮಿಥಾಲಿಗೆ ಅವಕಾಶ: ಐಸಿಸಿ ಮಹಿಳಾ ಕ್ರಿಕೆಟ್ ಸಮಿತಿಯಲ್ಲಿ ಸದಸ್ಯರ ನೇಮಕವನ್ನು ಸ್ಥಿರೀಕರಿಸಿತು. ಆಶ್ಲೆ ಡಿಸಿಲ್ವ, ಮಿಥಾಲಿ ರಾಜ್, ಅಮೋಲ್ ಮಜುಂದಾರ್, ಬೆನ್ ಸಾಯರ್, ಚಾರ್ಲೊಟೆ ಎಡ್ವರ್ಡ್ಸ್ ಮತ್ತು ಸಲಾ ಸ್ಟೆಲ್ಲಾ ಅವರು ಸಮಿತಿ ಸದಸ್ಯರಾಗಿದ್ದಾರೆ.

ಚೆಸ್ ವಿಶ್ವಕಪ್: ಅರ್ಜುನ್, ಹರಿಕೃಷ್ಣ ಶುಭಾರಂಭ

ಪಣಜಿ (ಪಿಟಿಐ): ಉತ್ತಮ ಲಯದಲ್ಲಿರುವ ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಶುಕ್ರವಾರ ವಿಶ್ವಕಪ್ ಚೆಸ್ ಟೂರ್ನಿಯ ಮೂರನೇ ಸುತ್ತಿನ ಪಂದ್ಯದ ಮೊದಲ ಕ್ಲಾಸಿಕಲ್ ಆಟದಲ್ಲಿ ಉಜ್ಬೇಕಿಸ್ತಾನದ ಶಂಸಿದ್ದೀನ್ ವೊಖಿಡೋವ್ ಅವರನ್ನು ಸೋಲಿಸಿ ಉತ್ತಮ ಆರಂಭ ಪಡೆದರು.

ಶನಿವಾರ ಮರು ಕ್ಲಾಸಿಕಲ್ ಆಟ ನಡೆಯಲಿದೆ. ವಿಶ್ವ ಚಾಂಪಿಯನ್ ಹಾಗೂ ಅಗ್ರ ಶ್ರೇಯಾಂಕದ ಡಿ.ಗುಕೇಶ್ ಅವರು ಮೊದಲ ಕ್ಲಾಸಿಕಲ್ ಆಟವನ್ನು



ಅರ್ಜುನ್



ಹರಿಕೃಷ್ಣ

ಜರ್ಮನಿಯ ಫ್ರೆಡರಿಕ್ ಸ್ವೇನ್ ಜೊತೆ ಡ್ರಾ ಮಾಡಿಕೊಂಡರು. ಕಪ್ಪು ಕಾಯಿಗಳನ್ನು ನಡೆಸಿದ ಮೂರನೇ ಶ್ರೇಯಾಂಕದ ಪ್ರಜ್ಞಾನಂದ ಸಹ ಅರ್ಮೇನಿಯಾದ ರಾಬರ್ಟ್ ಹೊವನೀಸಿಯನ್ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಇರಿಗೇಶಿ ಅವರಂತೆ ಅನುಭವಿ ಆಟಗಾರ ಪೆಂಟಾಲ ಹರಿಕೃಷ್ಣ, ವಿಶ್ವ ಜೂನಿಯರ್ ಚಾಂಪಿಯನ್ ವಿ.ಪ್ರಣವ್ ಅವರೂ ಸಹ ಮುನ್ನಡೆ ಪಡೆದರು. ಹರಿಕೃಷ್ಣ ಅವರು ಬೆಲ್ಜಿಯಂನ ಡೇನಿಯಲ್ ದರ್ಧಾ ಅವರ ವಿರುದ್ಧ ಜಯಗಳಿಸಿ 1–0 ಮುನ್ನಡೆ ಪಡೆದರು. ಶನಿವಾರ ಎರಡನೇ ಆಟ ಡ್ರಾ ಮಾಡಿಕೊಂಡರೂ ಅವರು ನಾಲ್ಕನೇ ಸುತ್ತಿಗೆ ಮುನ್ನಡೆಯಬಹುದಾಗಿದೆ.

ಪ್ರಣವ್ ಮೊದಲ ಕ್ಲಾಸಿಕಲ್ ಆಟದಲ್ಲಿ ಲಿಥುನೇನಿಯಾದ ಸ್ಟ್ರೆಮವೀ-ಸಿಯಸ್ ತಿತಾಸ್ ಅವರನ್ನು ಸೋಲಿಸಿ ಗಮನಸೆಳೆದರು. ವಿದಿತ್ ಗುಜರಾತಿ ಅವರು ಅಮೆರಿಕದ ಸ್ಯಾಮ್ ಶಂಕ್ಲಾಂಡ್ ಜೊತೆ ಡ್ರಾ ಮಾಡಿಕೊಳ್ಳುವ ಮೂಲಕ ಮೂರನೇ ಸುತ್ತನ್ನು ಆರಂಭಿಸಿದರು.

ಮೆಕ್ಸಿಕೊದ ಮಾರ್ಟಿನೆಝ್ ಅಲ್ಕಂತರ ಜೋಸ್ ಎಡ್ವರ್ಡೊ ಅವರು ಇನ್ನೊಂದು ಪಂದ್ಯದಲ್ಲಿ ಅನುಭವಿ ಜಿಎಂ ನದಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ) ವಿರುದ್ಧ ಮೊದಲ ಆಟ ಗೆದ್ದು ಮುನ್ನಡೆ ಸಾಧಿಸಿದರು.

ಸ್ಮೃತಿ, ಜೆಮಿಮಾ, ರಾಧಾಗೆ ತಲಾ ₹2.25 ಕೋಟಿ ಬಹುಮಾನ

ಮುಂಬೈ/ಹೈದರಾಬಾದ್ (ಪಿಟಿಐ): ಐಸಿಸಿ ಏಕದಿನ ವಿಶ್ವಕಪ್ ಗೆದ್ದುಕೊಂಡ ಭಾರತ ತಂಡದಲ್ಲಿರುವ ಮಹಾರಾಷ್ಟ್ರದ ಆಟಗಾರ್ತಿಯರಾದ ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್ ಮತ್ತು ರಾಧಾ ಯಾದವ್ ಅವರನ್ನು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶುಕ್ರವಾರ ನಡೆದ ಸಮಾರಂಭದಲ್ಲಿ ಸನ್ಮಾನಿಸಿದರು. ಮೂವರಿಗೂ ತಲಾ ₹2.25 ಕೋಟಿ ನಗದು ಬಹುಮಾನ ನೀಡಲಾಯಿತು.

ಮುಖ್ಯಮಂತ್ರಿ ಅಧಿಕೃತ ನಿವಾಸ 'ವರ್ಷಾ'ದಲ್ಲಿ ಕಾರ್ಯಕ್ರಮ ನಡೆಯಿತು. ಈ ಮೂವರು ಆಟಗಾರ್ತಿಯರನ್ನು 'ಮಹಾರಾಷ್ಟ್ರದ ಹೆಮ್ಮೆ' ಎಂದು ಮುಖ್ಯಮಂತ್ರಿ ಬಣ್ಣಿಸಿದರು.

ತಂಡದ ಕೋಚ್ ಅಮೋಲ್ ಮಜುಂದಾರ್ ಅವರಿಗೆ ₹22.5 ಲಕ್ಷ ಮೊತ್ತದ ಚೆಕ್ ನೀಡಿ ಗೌರವಿಸಲಾಯಿತು.

ಶ್ರೀಚರಣಿಗೂ ಬಂಪರ್: ಮಹಿಳಾ ವಿಶ್ವಕಪ್ ತಂಡದಲ್ಲಿದ್ದ ಸ್ಪಿನ್ ಬೌಲರ್ ಶ್ರೀಚರಣಿ ಅವರಿಗೆ ಆಂಧ್ರ ಸರ್ಕಾರವು ಶುಕ್ರವಾರ ₹2.5 ಕೋಟಿ ನಗದು ಬಹುಮಾನ ಘೋಷಿಸಿದೆ. ವಸತಿ ನಿವೇಶನ ಮತ್ತು ಗ್ರೂಪ್ 1 ಸರ್ಕಾರಿ ಉದ್ಯೋಗ ನೀಡುವುದಾಗಿಯೂ ಪ್ರಕಟಿಸಿದೆ.

ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಅಮರಾವತಿಯಲ್ಲಿ ಶ್ರೀ ಚರಣಿ ಮತ್ತು ಭಾರತ ತಂಡದ ಮಾಜಿ ನಾಯಕಿ ಮಿತಾಲಿ ರಾಜ್ ಅವರನ್ನು ಭೇಟಿಯಾದ ವೇಳೆ ಈ ಕೊಡುಗೆ ಪ್ರಕಟಿಸಿದರು.

ಕಡಪ ಜಿಲ್ಲೆಯವರಾದ ಶ್ರೀಚರಣಿ ಅವರು ವಿಜಯವಾಡದ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಸಂಭ್ರಮದ ಸ್ವಾಗತ ನೀಡಲಾಯಿತು.

ಕಾರು ಕೊಡುಗೆ

ವಿಶ್ವಕಪ್ ಗೆದ್ದ ಭಾರತ ತಂಡದ ಪ್ರತಿಯೊಬ್ಬ ಆಟಗಾರ್ತಿಗೆ ಹೊಸದಾಗಿ ಬಿಡುಗಡೆಯಾಗಲಿರುವ ಟಾಟಾ ಸಿಯೆರಾ ಕಾರು ಉಡುಗೊರೆಯಾಗಿ ನೀಡುವುದಾಗಿ ಟಾಟಾ ಮೋಟರ್ಸ್ ಗುರುವಾರ ಎಕ್ಸ್‌ನಲ್ಲಿ ತಿಳಿಸಿದೆ.